BUDGET ESTIMATES FOR 1964-65.

Demands for Grants—Nos. 4, 12, 13 and 41A.

(Debate continued).

† ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಸ್ವಾಮಿ, ಜೇಲ್ ವಿಚಾರದಲ್ಲಿ ಒಂದು ಮಾತು ಹೇಳಬೇಕೆಂದಿದ್ದೇನೆ. ನಿರಪರಾಧಿಗಳು ಜೇಲಿಗೆ ಹೋಗುತ್ತಾರೆ, ಅಪರಾಧ ಮಾಡಿದವರು ಜೇಲಿಗೆ ಹೋಗದೆ ಹೊರಗೆ ಉಳಿಯುತ್ತಾರೆ. ಇದಲ್ಲದೆ ಬೇರೆ ಯಾರಿಗೂ ಒಳಗೆ ಹೋಗಲು ಅವಕಾಶವಿಲ್ಲ. ಆದರೂ ಕೂಡ ಗಾಂಜಾ, ಸಾರಾಯಿ ಒಳಗೆ ಹೋಗುತ್ತದೆ ಮತ್ತು ಅದು ಅಲ್ಲಿ ದೊರೆಯುತ್ತದೆ. ಸಾಮಾನ್ಯವಾಗಿ ಒಬ್ಬ ಖೈದಿ ಕಾರ್ಪೆಟ್ ಮುಂತಾದ ನೇಯ್ಗೆ ಕೆಲಸ ಮಾಡಿ ಎಂಟು, ಹತ್ತು ಅಥವಾ ಹದಿನೈದು ರೂಪಾಯಿ ಸಂಪಾದನೆ ಮಾಡುತ್ತಾನೆ. ಅವರಿಗೆ ಬೇಕಾಗುವ ಸರಾಯಿ, ಗಾಂಜಾ ಅಲ್ಲಿ ಕೆಲಸ ಮಾಡುವ ಪೋಲೀಸಿನವರು ತಂದುಕೊಟ್ಟು ದುಡ್ಡು ತೆಗೆದುಕೊಳ್ಳುತ್ತಾರೆ. ತಂದು ಕೊಡುವವರೂ ಅವರೇ ಕೆಲವು ಸಲ ಕೈದಿಗಳನ್ನು ಸಿಕ್ಕಾಕಿ ಬಡಿಯುವವರೂ ಅವರೇ. ಈ ರೀತಿ ಸಂಪಾದನೆ ಮಾಡುವುದರಲ್ಲಿ ಎಲ್ಲರಿಗೂ ಭಾಗ ಇರುತ್ತದೆ. ಆದ್ದರಿಂದ ಇದು ಬೇರೆಯವರಿಗೆ ಗೊತ್ತಾಗುವುದಿಲ್ಲ ಇದನ್ನು ಮಾನ್ಯ ಮಂತ್ರಿಗಳು ಬಹಳ ದಕ್ಷತೆಯಿಂದ ಕಂಡುಹಿಡಿಯಬಹುದು. ಇದನ್ನು ನಾನು ಕಣ್ಣಾರೆ ನೋಡಿದ್ದೇನೆ. ಮನುಷ್ಯತ್ವ, ಮಾನವತೆ ಇಲ್ಲದೆ ಇರುವುದರಿಂದ ಇದರಿಂದ ತೊಂದರೆಯಾಗುತ್ತಿದೆ. ಕೆಲಸ ಮಾಡದೇ ಇರುವ ಕಾಲದಲ್ಲಿ ಮಂತ್ರಿಗಳು ಹೋಗಿ ಕೈದಿಗಳನ್ನು ಕಂಡು ವಿಚಾರಿಸಿದರೆ ಇದು ಅವರಿಗೆ ಗೊತ್ತಾಗುತ್ತದೆ.

ಇನ್ನೊಂದು ಸೂಚನೆ ಮಾಡಲು ಬಯಸುತ್ತೇನೆ. ಲೆಜಿಸ್ಲೇಚರದ ಎಲ್ಲ ಪಾರ್ಟಿಗಳ ಸದಸ್ಯರು ಕೂಡಿದ ಒಂದು ಕಮಿಟಿ ರಚನೆ ಮಾಡಬೇಕು ಮತ್ತು ಈ ಕಮಿಟಿ ಸದಸ್ಯರು ಆಫೀಸರುಗಳ ಅಬ್ಸೆನ್ಸ್‌ನಲ್ಲಿ ಕೈದಿಗಳಿಗೆ ಭೇಟಿಯಾಗಿ ಕೇಳಿ ತಿಳಿದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಉದಾಹರಣೆ ಕೊಡುತ್ತೇನೆ. ಒಂದು ಹಳ್ಳಿಯಲ್ಲಿ ಇಬ್ಬರು ರೈತರು ಬೇರೆ ಬೇರೆ ಇಬ್ಬರು ಯಜಮಾನರ ಹೊಲ ಕಾಯುತ್ತಿರುತ್ತಾರೆಂದು ಇಟ್ಟುಕೊಳ್ಳೋಣ. ಅವರು ಪ್ರಾಮಾಣಿಕವಾಗಿ ತಮ್ಮ ಕೆಲಸ ಮಾಡುತ್ತಾರೆ. ಆದರೆ ಆ ಇಬ್ಬರು ಯಜಮಾನರ ನಡುವೆ ತಿಕ್ಕಾಟ ಬಂದು ಒಬ್ಬನು ಇನ್ನೊಬ್ಬನ ಹೊಲದಲ್ಲಿ ಎತ್ತು ಮೇಯಿಸುವುದಕ್ಕೆ ಬಿಡುತ್ತಾನೆ. ಈ ತಿಕ್ಕಾಟ ಜಾಸ್ತಿಯಾಗಿ ಎತ್ತು ಏಕೆ ಬಿಟ್ಟೆ ಎಂದು ಇಬ್ಬರು ರೈತರು ಜಗಳಾಡುತ್ತಾರೆ. ಆಗ್ಗೆ ಒಬ್ಬನು ಇನ್ನೊಬ್ಬ ರೈತನಿಗೆ ಕೊಡಲಿಯಿಂದ ಏಟು ಹಾಕುತ್ತಾನೆ. ಕೊಡಲಿ ಏಟಿನಿಂದ ಒಬ್ಬನು ಸತ್ತು ಹೋಗುತ್ತಾನೆ. ಇಂಥ ಕೊಲೆಗೆ ಅವನಿಗೆ ಶಿಕ್ಷೆಯಾಗುತ್ತದೆ. ಯಾವ ದುರುದ್ದೇಶ ಇಲ್ಲದೆ ಆಕ್ಸಿಡೆಂಟಿನಿಂದ ಅವಮಾನದಿಂದ ಎಮೋಷನಲ್ಲಾಗಿ ಕೆಲವು ಸಲ ಕೊಲೆಗಳು ಆಗುತ್ತವೆ. ಇಂಥ ಪರಿಸ್ಥಿತಿಗೆ ಒಳಗಾಗಿ ಕೊಲೆ ಮಾಡಿದವರಿಗೆ ರೆಮಿಷನ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸಾಮಾನ್ಯವಾಗಿ ಪೋಲೀಸ್ ಇಲಾಖೆಯಲ್ಲಿ ಕರಪ್ಷನ್ ಎಷ್ಟು ಬೆಳೆದಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಕಾನ್‌ಸ್ಟೇಬಲ್ ಹಿಡಿದು ಸಬ್ ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್, ಡೆಪ್ಯುಟಿ ಸೂಪರಿಂಟೆಂಡೆಂಟ್, ಸೂಪರಿಂಟೆಂಡೆಂಟ್, ಐ.ಜಿ.ಪಿ.ವರೆಗೆ ಎಲ್ಲರೂ ಒಬ್ಬರಿಂದ ಒಬ್ಬರು ಹೆಸರು ಹೇಳಬಹುದು ಎಂದು ನನಗೆ ಅನಿಸುತ್ತದೆ. ಇದರಲ್ಲಿ ಮಂತ್ರಿಗಳ ಹೆಸರೂ ಸಹ ಸೇರಬಹುದೋ ಏನೋ ಎಂದು ಅನಿಸುತ್ತದೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಬೆಂಗಳೂರು ಆಫೀಸಿನಲ್ಲಿ ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್ ಎಂದು ಒಬ್ಬರು ಕಳೆದ ಏಳು ವರ್ಷಗಳಿಂದ ಇಲ್ಲಿಯೇ ಇದ್ದಾರೆ. ಈ ಮಹಾಶಯರು ದುಡ್ಡು ತೆಗೆದುಕೊಂಡು ಅಧಿಕಾರಿಗಳ ಬಿಲ್ಲು ಮುಂದೆ ಕಳಿಸುತ್ತಾರೆ. ಇದರಲ್ಲಿ ರೆಗ್ಯುಲರ್ ಆಗಿ ಒಂದು ಲಿಂಕ ಇದೆ. ಇದನ್ನು ದಯವಿಟ್ಟು ತಪ್ಪಿಸಬೇಕು. ಈಗ ಇವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆಂದು ತಿಳಿದಿದೆ ಆದರೂ ಕೂಡ ಅವರು ಇನ್ನೂ ಆ ಚಾರ್ಜ್ ಕೊಟ್ಟಿಲ್ಲ. ಕಳೆದ ಏಳು ವರ್ಷದಿಂದ ಇದ್ದೇನೆ ಇನ್ನೂ ಹತ್ತು ವರ್ಷಗಳವರೆಗೆ ಇರುತ್ತೇನೆಂದು ಹೇಳುತ್ತಿದ್ದಾರೆ. ನನಗೆ ಏನು ಮಾಡುತ್ತಾರೆ ನೋಡೋಣ ಎಂದು ಹೇಳುತ್ತಾರೆ. ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿ ಮಂಡಳದಲ್ಲಿ ಶ್ರೀ ಪಾಟೀಲರು ಹಿಂದಕ್ಕೆ ಹೆಲ್ತ್ ಮಿನಿಸ್ಟರು ಆಗಿದ್ದಾಗ್ಗೆ ಅವರಿಗೆ ಒಂದು ವಿನಂತಿ ಮಾಡಿಕೊಂಡಿದ್ದೇನೆ. ನೀವು ರಾತ್ರಿ ಹೊತ್ತಿನಲ್ಲಿ ಯಾರಿಗೂ ಗೊತ್ತಾಗದೆ ಆಸ್ಪತ್ರೆಗೆ ವಿಜಿಟ್ ಕೊಟ್ಟು ಡಾಕ್ಟರ್ ಇದ್ದಾರೆಯೇ, ಸರಿಯಾಗಿ ವ್ಯವಸ್ಥೆ ಇದೆಯೇ ನೋಡಿ ಎಂದು ಹೇಳಿದ್ದೇನೆ. ಅದೇ ರೀತಿ ಈಗಲೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪೋಲೀಸರಿಂದ ಭದ್ರತೆ ಇಲ್ಲ ಸ್ಟ್ರಾಂಗ್ ಆಕ್ಷನ್ ತೆಗೆದುಕೊಂಡು ಸರಿಪಡಿಸುವ ತಾಕತ್ ನಿಮ್ಮಲ್ಲಿ ಇದೆ, ದರ್ಪ ಇದೆ, ಆದರೆ ಈ ಪೋಲೀಸ್ ಇಲಾಖೆ ವಿಚಾರದಲ್ಲಿ ದರ್ಪ ಇದ್ದರೂ ಕೂಡ ಏತಕ್ಕೆ ಯೀಲ್ಡ್ ಆಗುತ್ತೀರಿ ಗೊತ್ತಾಗುವುದಿಲ್ಲ.

(ಶ್ರೀ ಗಂಗಾಧರ ನಾಮೋಷಿ)

ಈಗ ಕಾಶ್ಮೀರದಲ್ಲಿ ಹಜರತಬಾಲ್ ಇನಸಿಡೆಂಟುಗಳು ಆದಮೇಲೆ ಅವುಗಳನ್ನು ಪಾಕೀಸ್ತಾನಿಗಳು ದುರುಪಯೋಗಮಾಡಿಕೊಂಡು ಬಂಗಾಳದಲ್ಲಿ ಗಲಭೆಯಾಯಿತು. ಅದೇಪ್ರಕಾರ ಬೇರೆ ಪ್ರಾಂತ್ಯಗಳಲ್ಲಿಯೂ ಪರಿಸ್ಥಿತಿ ಇರುತ್ತದೆ. ಈ ಒಂದು ಘಟನೆಯನ್ನು ಕೆಲವರು ನಮ್ಮ ರಾಜ್ಯದಲ್ಲಿಯೂ ಉಪಯೋಗಿಸಿಕೊಳ್ಳುವವರಿದ್ದಾರೆಂದು ನಾನು ಈ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ತರುತ್ತೇನೆ. ನಮ್ಮ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಕೆಲವು ಎಲಿಮೆಂಟುಗಳು ಅಂಥ ಗದ್ದಲ ಮಾಡಬೇಕು, ಕಮ್ಯೂನಲ್ ರಾಯಟ್ಸ್ ಎಬ್ಬಿಸಬೇಕು ಎಂದು ಇವೆ; ಅಂಥ ಒಂದು ಸೆಕ್ಷನ್ ಇದೆ. ಇವತ್ತಿನವರೆಗೂ ನಮ್ಮ ಅನುಭವ ನೋಡುವುದಾದರೆ ಪೋಲೀಸಿನವರು ಕಷ್ಟಕಾಲಗಳಲ್ಲಿ ವೇಳೆಗೆ ಸರಿಯಾಗಿ ನೆರವಿಗೆ ಬರಲಿಲ್ಲ. ಗುಲ್ಬರ್ಗದಲ್ಲಿ ಊರು ಸುಟ್ಟು ಹೋಯಿತು; ಊರ ಸುಟ್ಟಮೇಲೆ ಪೋಲಿಸಿನವರು ಬಂದರು. ಗುಲ್ಬರ್ಗ ಡಿಸ್ಟ್ರಿಕ್ಟ್ ಹೆಡಕ್ವಾರ್ಟರ್ಸು, ರಿಜರ್ವಪೋಲಿಸ ಇದೆ; ಇದರ ಊರಿಗೆ ಊರೆ ಸುಟ್ಟು ಹೋದ ಮೇಲೆ ಲಕ್ಷಾಂತರ ರೂಪಾಯಿನ ಆಸ್ತಿ ಧ್ವಂಸವಾದ ಮೇಲೆ ಪೋಲಿಸರು ಬಂದರು. ಬಿದರೆ ಮತ್ತು ಗುಲ್ಬರ್ಗಾದಲ್ಲಿ ಇಂಥ ಗಲಭೆ ಮಾಡುವ ಎಲಿಮೆಂಟುಗಳು ಇವೆ; ಇಂಥ ಒಂದು ಸೆಕ್ಷನ್ ಉಂಟು. ಕೆಲವು ಮುಸ್ಲಿಮರು ಪಾಕಿಸ್ತಾನ ಪರ ಇದ್ದು, ಪಾಕಿಸ್ತಾನಕ್ಕೆ ಸಹಾನಭೂತಿ ತೋರಿಸಬೇಕೆಂದು ಗಲಾಟೆ ಎಬ್ಬಿಸ ಬೇಕೆಂದಿದ್ದಾರೆ. ಹಾಗೆಯೇ ಕೆಲವು ಹಿಂದುಗಳು ಇಂಥ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು, ಕಮ್ಯೂನಲ್ ದಂಗೆ ಎಬ್ಬಿಸಿ, ಲೂಟಿ ಮಾಡಿ, ಫಾಯಿದೆ ಪಡೆಯಬೇಕೆಂದಿದ್ದಾರೆ. ಇದು ನಮ್ಮ ದೇಶದ ದೃಷ್ಟಿಯಿಂದ ಒಳ್ಳೆಯದಲ್ಲ. 'ಏನಾದರೂ ಗಲಭೆಗಳಾದರೆ, ಪಾಕಿಸ್ತಾನ, ಹಿಂದೂಸ್ತಾನದಲ್ಲಿ ಮುಸ್ಲಿಮರಿಗೆ ಬಹಳ ಅನ್ಯಾಯವಾಗುತದೆ ಎಂದು ಪ್ರಾಪಗ್ಯಾಂಡ ಮಾಡುವುದೇ ಅಲ್ಲದೆ ಮುಸ್ಲಿಮರ ಹಿತದೃಷ್ಟಿಯಿಂದ ಕಾಶ್ಮೀರ ಪಾಕಿಸ್ತಾನಕ್ಕೆ ಬರಬೇಕೆಂದು ಹೇಳುತ್ತಾರೆ. ಆದ್ದರಿಂದ ದಯೆಮಾಡಿ, ಮಾನ್ಯಮಂತ್ರಿಗಳು ಬಹಳ ದಕ್ಷರಾಗಿರ ತಕ್ಕಂಥ ಆಫೀಸರುಗಳನ್ನು ಸ್ಪೆಷಲ್ಲಾಗಿ ಸಲೆಕ್ಟ್‌ಮಾಡಿ ಆ ಪ್ರದೇಶಗಳಿಗೆ ಹಾಕಬೇಕು. ಪೋಲೀಸು ಆಫೀಸರುಗಳು ಯಾರು ಒಳ್ಳೆಯವರೊ, ಯಾರು above communalism ಇದ್ದಾರೊ, ಅಂಥವರನ್ನು ನೋಡಿ ಮುಖ್ಯವಾಗಿ ಮೂರು ಊರುಗಳಲ್ಲಿ ಹಾಕಬೇಕು. ರಾಯಚೂರಿನಲ್ಲಿ ಅಂಥ ಘಟನೆಗಳು ಕಡಿಮೆಯಾಗಿ ಆಗಿವೆ. ಆದರೆ ಬಿದರೆ, ಯಾದಗಿರಿ ಮತ್ತು ಗುಲ್ಬರ್ಗದಲ್ಲಿ ಕಮ್ಯೂನಲ್ ಎಲಿಮೆಂಟುಗಳು ಇರುವುದರಿಂದ ಒಳ್ಳೆಯ ಆಫೀಸರುಗಳನ್ನು ನೇಮಕಮಾಡಿ, ದುರ್ಘಟನೆಗಳು ಆಗದಹಾಗೆ ನೋಡಿಕೊಳ್ಳಬೇಕು ಎಂದು ಮಾನ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ನನಗೆ ಇಷ್ಟರವರೆಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಸಭೆಯ ಮುಂದಿರುವ ಡಿಮ್ಯಾಂಡುಗಳಾದ ಜೈಲುಗಳು, ಪೋಲಿಸು ಮತ್ತು ಟ್ಯಾಕ್ಸಸ್ ಆನ್ ವೆಹಿಕಲ್ಸ್-ಇವುಗಳ ಮೇಲೆ ನಮ್ಮ ಸ್ನೇಹಿತರು ಸಾಕಷ್ಟು ಹೇಳಿದ್ದಾರೆ. ನಾನಾದರೂ ಕೂಡ ಅವುಗಳ ಬಗ್ಗೆ ಹೆಚ್ಚಿನ ವಿಚಾರಗಳನ್ನು ಸಭೆಯಮುಂದೆ ಇಡಲು ಬಯಸುತ್ತೇನೆ.

ಜೈಲುಗಳ ಬಗ್ಗೆ ಹೇಳುವುದಾದರೆ ಮುಂಬೈ ರಾಜ್ಯದಲ್ಲಿ ಹಿಂದೆ ಬ್ರಿಟಿಷರ ಕಾಲದಲ್ಲಿ ಇದ್ದಂಥ ವ್ಯವಸ್ಥೆ ಹೋಗಿ, ಎಕ್ಸ್ ಬೊಂಬಾಯಿಕರ್ನಾಟಕದಲ್ಲಿ ಹುಬ್ಬಳ್ಳಿಯಲ್ಲಿ ಹೊಸದಾಗಿ ಒಂದು ಜೈಲನ್ನು ಕಟ್ಟಿದ್ದಾರೆ. ಎರಡು ವರ್ಷವಾಯಿತು ಕಟ್ಟಿ. ಆದರೆ ಈ ಜೈಲನ್ನು ನಡೆಸತಕ್ಕಂಥ ಆಡಳಿತವರ್ಗ ಬಹಳ ಸುಧಾರಿಸತಕ್ಕದಾಗಬೇಕಾಗಿದೆ ಎಂದು ನನಗೆ ಕಾಣಬರುತ್ತದೆ. ಮುಂಬೈ ಕರ್ನಾಟಕದಲ್ಲಿ ಜೈಲರ್ ಮತ್ತು ಸೂಪರಿಂಡೆಂಟರಿಗೆ ಟ್ರೈನಿಂಗ್‌ಕೊಟ್ಟು ಅನಂತರ ಅವರನ್ನು ನೇಮಿಸಿದ್ದರೆ ಅವರ ಕರ್ತವ್ಯಗಳನ್ನು, ಯಶಸ್ವಿಯಾಗಿ ನೆರವೇರಿಸಲು ಮತ್ತು ಅಲ್ಲಿರತಕ್ಕಂಥ ನ್ಯೂನತೆಗಳನ್ನು ಹೋಗಲಾಡಿಸಲು ಅನುಕೂಲವಾಗುತ್ತಿತ್ತು. ಮೊನ್ನೆತಾನೆ ಜೈಲು ಆಕ್ಟು ಜಾರಿಗೆ ಬಂದಿದೆ. ಅದನ್ನು ಗಮನಕ್ಕೆ ತೆಗೆದುಕೊಂಡು ಮೈಸೂರು ರಾಜ್ಯದಲ್ಲಿ ಜೈಲು ಸ್ಟಾಫಿಗೆ ಯಾವ ತರಹ ಒಂದು ಟ್ರೈನಿಂಗ್ ಸೆಂಟರು ತೆಗೆಯುತ್ತೇನೆ, ಟ್ರೈನಿಂಗ್ ಕೊಡುತ್ತೇನೆ, ಜೈಲರ್, ಸೂಪರಿಂಡೆಂಟಾಗಿ ಮಾಡುತ್ತಾರೆ. ಅದರಿಂದ ಆಡಳಿತದಲ್ಲಿ ನ್ಯೂನತೆಗಳು ಕಂಡುಬರುತ್ತವೆ; ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಅವರಿಗೆ ಟ್ರೈನಿಂಗ್ ಇಲ್ಲದೆ ಹೋದರೆ ಯಾವತರಹ ಕೆಲಸ ಮಾಡಬೇಕೆಂದು ಅವರಿಗೆ ಗೊತ್ತಿರುವುದಿಲ್ಲ. ಜೈಲಿನಲ್ಲಿರುವ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಜೈಲಿನಲ್ಲಿ ಸಪ್ಲೈಮಾಡತಕ್ಕಂಥ ಆಹಾರ ಇದೆ ಅದು ಬಹಳ ಕೆಟ್ಟ ರೀತಿಯಾಗಿದೆ. ಕಂಟ್ರಾಕ್ಟರು ಅಂಥದನ್ನು ಸಪ್ಲೈ ಮಾಡುತ್ತಾ

ಬಂದಿದ್ದಾರೆ. ನಮ್ಮ ಊರಿನ ಸಬ್ ಜೈಲಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಖೈದಿಗಳಿಗೆ ಆಹಾರ ಸಿಗುತ್ತಿಲ್ಲ ಮತ್ತು ಅದರಲ್ಲಿ ಕಲ್ಲು ವಗೈರೆ ಇರುತ್ತದೆ. ಇದಕ್ಕೆ ಸರ್ಕಾರದವರನ್ನು ಬ್ಲೇಮ್ ಮಾಡುತ್ತಾ ಇಲ್ಲ. ಸರ್ಕಾರದವರು ಸಾಕಷ್ಟು ಹಣ ಒದಗಿಸಿದರೂ ಇದರ ಮೇಲ್ವಿಚಾರಣೆ ಸರಿಯಾಗಿಲ್ಲದಿರುವುದರಿಂದ ಕಂಟ್ರಾಕ್ಟರುಗಳು ಈ ರೀತಿ ಮಾಡುತ್ತಾರೆ.

ಅಲ್ಲಿ ತಯಾರಾಗತಕ್ಕಂಥ ದಿನಸಿಗಳನ್ನು, ಕೈಗಾರಿಕೆ ಸಾಮಾನುಗಳನ್ನು ಅಲ್ಲಿರತಕ್ಕಂಥ ವೀವಿಂಗ್‌ಮಾಸ್ಟರು, ಅಧಿಕಾರಿಗಳು ಅವರೇ ಅವನ್ನು ತಯಾರುಮಾಡುತ್ತಾರೆ. ಸಾಮಾನುಗಳನ್ನು ಅಲ್ಲಿರತಕ್ಕಂಥ ಖೈದಿಗಳು ಪ್ರೊಡ್ಯೂಸು ಮಾಡುವುದಕ್ಕೆ ಬಿಡುವುದಿಲ್ಲ ಮತ್ತು ಹೇಳಿಕೊಡುವುದಿಲ್ಲ. ಈ ಕೈಗಾರಿಕೆಗಳನ್ನು ಹೇಳಿಕೊಡುವ ಉದ್ದೇಶವೇನೆಂದರೆ ಖೈದಿಗಳು ಜೈಲಿನಿಂದ ಬಿಡುಗಡೆಯಾದ ಮೇಲೆ ನವನಾಗರಿಕರಾಗಿ; ಜೈಲಿನಲ್ಲಿ ಕಲಿತ ಕಸಬಿನಲ್ಲಿ ಮುಂದೆ ಜೀವನ ಸಾಗಿಸಲಿ ಎಂದು. ಆದ್ದರಿಂದ ಅಲ್ಲಿರತಕ್ಕಂಥ ವೀವಿಂಗಮಾಸ್ಟರು ಖೈದಿಗಳಿಗೆ ಸಾಕಷ್ಟು ಮಾಹಿತಿಕೊಟ್ಟು ತಿಳುವಳಿಕೆ ಕೊಡಬೇಕು. ಅವರಿಗೆ ನೇಯಿಗೆಯನ್ನು ಹೇಳಿಕೊಡುತ್ತಿದ್ದರೆ, ಅವರು ಮುಂದೆ ಮಗ್ಗವನ್ನು ಇಟ್ಟುಕೊಂಡು ನೇಯುವುದಕ್ಕೆ ಸಾಕಷ್ಟು ಮಾಹಿತಿ ಕೊಡಬೇಕು. ಒಂದೆರಡು ಜೈಲಿನೊಳಗೆ ನಾನು ಹೋದಾಗ ಖೈದಿಗಳಿಗೆ ಮಗ್ಗಗಳಲ್ಲಿ ಫಿನಿಶಿಂಗ್ ವೀವಿಂಗ್‌ಮಾಸ್ಟರು ಹೇಳಿಕೊಡುತ್ತಿರಲಿಲ್ಲ. ಜೈಲಿನಿಂದ ಖೈದಿ ಹೊರಗೆ ಹೋದರೆ ಅವನು ಮಗ್ಗ ತೆಗೆದುಕೊಂಡು ನೇಯುವುದಕ್ಕೆ ಯೋಗ್ಯತೆ ಬರಬೇಕು ಅವನಿಗೆ ಸಾಕಷ್ಟು ಸಹಾಯ ಕೊಟ್ಟು ಅವನನ್ನು ನಾಗರಿಕನನ್ನಾಗಿ ಮಾಡಬೇಕು. ಈ ಒಂದು ಉದ್ದೇಶವನ್ನಿಟ್ಟುಕೊಂಡು ಖೈದಿಗಳನ್ನು ನೋಡಿಕೊಳ್ಳುವುದು ಜೈಲು ಸ್ಟಾಫಿನ ಆದ್ಯ ಕರ್ತವ್ಯ. ಈ ರೀತಿಯಾಗಿ ಅಡಳಿತವರ್ಗಕ್ಕೆ ಒಂದು ಆದೇಶವನ್ನು ಕೊಟ್ಟು ಈಗಿರತಕ್ಕಂಥ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಆಗ ಈ ಇಲಾಖೆಗೆ ಕೊಟ್ಟಂಥ ಹಣ ಸಾರ್ಥಕವಾಗುತ್ತದೆ.

ಈ ಸಬ್‌ಜೈಲೊಳಗೆ ಆಗಬಾರದ್ದು ಆಗುತ್ತೆ. ಸಬ್‌ಜೈಲೊಳಗೆ ಚಹ, ಕಾಫಿ, ಇಲಿಸಿಟ್‌ಲಿಕರ್ ಕೂಡ ಸಪ್ಲೈ ಮಾಡತಕ್ಕಂಥ ಪರಿಸ್ಥಿತಿ ಇದೆ. ಇವುಗಳು ಹೇಗೆ ಅವರಿಗೆ ಬರುತ್ತದೆಂದರೆ, ಆರ್ಮ್‌ಡ್ ಪೋಲೀಸು ಫೋರ್ಸ್ ಮೂಲಕ. ಮುಂಬೈಕರ್ಣಾಟಕದಲ್ಲಿ ಹಿಂದೆ ಆರ್ಮ್‌ಡ್ ಫೋರ್ಸಿನವರು ಕಟ್ಟುನಿಟ್ಟಾಗಿದ್ದರು.

ಈಗ ಈ ಅಭ್ಯಾಸಗಳ ಬಗ್ಗೆ ಏನೊ ವಿಶಾಲಭಾವನೆ ತೆಗೆದುಕೊಂಡು ಈ ಪರಿಸ್ಥಿತಿ ಬಂದಿದೆ ಖೈದಿಗಳನ್ನು ನೋಡುವುದಕ್ಕೆ ಬರತಕ್ಕಂಥ ಬಂಧುಗಳು ಹಣವನ್ನು ಮತ್ತು ಅವರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಎಲ್ಲವನ್ನು ತಂದುಕೊಡುತ್ತಾರೆ. ಅವುಗಳನ್ನು ಜೈಲಿನೊಳಗೇ ಒದಗಿಸತಕ್ಕಂಥ ಪರಿಸ್ಥಿತಿ ಇದೆ. ಖೈದಿಗಳನ್ನು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕರೆದುಕೊಂಡು ಹೋಗುವಾಗ ಅವರು ಪೋಲಿಸಿನವರ ಎದುರಿನಲ್ಲಿಯೆ ಬೀಡಿ ಸಿಗರೇಟು ಸೇದುತ್ತಾರೆ, ಚುಟ್ಟ ಹಚ್ಚಿಬಿಡುತ್ತಾರೆ. ಇಂಥ ಪರಿಸ್ಥಿತಿಯನ್ನು ನಾವು ಕಣ್ಣಾರೆ ಕಾಣುತ್ತಾ ಇದ್ದೇವೆ. ಅಂಥದು ಆಗದಂತೆ ನೋಡಬೇಕಾಗಿದೆ.

Sri R. M. PATIL.—They are undertrials and they are entitled to them.

ಶ್ರೀ ಸಿದ್ದಯ್ಯ ಕಾಶೀಮಠ.—ಜೈಲಿನೊಳಗೆ ಕೂಡ ಇಂಥ ಪರಿಸ್ಥಿತಿ ಇದೆ. ಅದನ್ನು ಜಾಗ್ರತೆ ಕಾನೂನುಗಳನ್ನು ಅಳವಡಿಸಿಕೊಂಡು ಜೈಲಿನಲ್ಲಿ ಖೈದಿಗಳು ಕೆಲವು ನಿಯಮಗಳನ್ನು ಪಾಲಿಸುವಂತೆ ಮಾಡಬೇಕೆಂದು ಹೇಳುತ್ತೇನೆ.

ಪೋಲೀಸು ಖಾತೆಯ ಬಗ್ಗೆ ಹೇಳಬೇಕೆಂದರೆ, ಸರಕಾರದವರು ಈಗಾಗಲೆ ಏಕ್‌ಬೊಂಬಾಯಿ ಕರ್ಣಾಟಕದಲ್ಲಿ ಸಾಕಷ್ಟು ಪೋಲೀಸು ಸ್ಟೇಶನ್ನುಗಳನ್ನು ಕಟ್ಟಿದಾರೆ. ಅದಕ್ಕೆ ಅಟ್ಯಾಚಾಗಿ ಪೋಲೀಸು ಕ್ವಾರ್ಟರುಗಳನ್ನು ಕೊಟ್ಟರೆ, ಪೋಲೀಸಿನವರು ನೆಮ್ಮದಿಯಿಂದ ಕೆಲಸ ಮಾಡಬಹುದು. ಆದಷ್ಟು ದೊಡ್ಡ ಊರೊಳಗೆ, ಜನಸಂಖ್ಯೆ ಜಾಸ್ತಿ ಇರುವಕಡೆ ಪೋಲೀಸು ಕ್ವಾರ್ಟರುಗಳನ್ನು ಕಟ್ಟಬೇಕು. ನನ್ನ ಕಾನ್‌ಸ್ಟಿಟ್ಯೂಯನ್ಸಿಯಾದ ಲಕ್ಷ್ಮೇಶ್ವರದಲ್ಲಿ ಒಂದು ಉತ್ತಮವಾದ ಪೋಲೀಸು ಸ್ಟೇಷನ್ನು ಕಟ್ಟಿದ್ದಾರೆ. ಮೊನ್ನಿನದಿವಸ ಅದನ್ನು ಉದ್ಘಾಟನೆ ಮಾಡಿದ್ದೂ ಆಯಿತು. ಆದರೆ ಅಲ್ಲಿ ಕ್ವಾರ್ಟರುಗಳು ಇಲ್ಲ. ಅಲ್ಲಿ ಜನಸಂಖ್ಯೆ 20 ಸಾವಿರವಿರುವುದರಿಂದ, ಮನೆಗಳುಬಾಡಿಗೆಗೆ ಕೂಡ ಸಿಗದೇನೆ ಪೋಲೀಸರಿಗೆ ಬಹಳ ಕಷ್ಟವಾಗುತ್ತಿದೆ. ಕ್ವಾರ್ಟರುಗಳಿಗೆ ಎಸ್ಟಿಮೇಟು ಆಗಿದೆ, ಅದನ್ನು ಮಂಜೂರೂ ಮಾಡ್ಡಿದಾರೆ. ಇನ್ನು ಒಂದೆರಡು ತಿಂಗಳಲ್ಲಿ ಅದಕ್ಕೆ ಫೌಂಡೇಶನ್ ಹಾಕಿ, ತದನಂತರ ಕಟ್ಟಿಸಲಿಕ್ಕೆ ಪ್ರಾರಂಭ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

(ಶ್ರೀ ಸಿದ್ದಯ್ಯ ಕಾಶೀಮಠ)

ಪೋಲೀಸು ಕಾನ್‌ಸ್ಟೇಬಲ್ಲುಗಳ ಬಗ್ಗೆ ನಮ್ಮ ಸ್ನೇಹಿತರು ಹೇಳಿದರು. ಅವರು ಲಂಚ ತಿನ್ನುವುದು ಸಾಮಾನ್ಯವಾಗಿದೆ ಎಂದು ಪ್ರತಿಯೊಬ್ಬರೂ ಹೇಳುವುದು ಪದ್ಧತಿಯಾಗಿ ಬಿಟ್ಟಿದೆ. ಅದಕ್ಕೆ ಕಾರಣ ಒಂದೆ ಸರಕಾರ ಕಾನ್‌ಸ್ಟೇಬಲ್ಲುಗಳಿಗೆ ಕೊಡತಕ್ಕಂಥ ಪಗಾರ ಬಹಳ ಕಡಿಮೆ ಇದೆ. ಅವರಿಗೆ 100 ರೂಪಾಯಿ ಸ್ಟಾರ್ಟಿಂಗ್ ಪೇ ಮಾಡಿ, ಅವರ ಮೇಲೆ ಹೆಚ್ಚಿನ ನಿಬಂಧನೆಗಳನ್ನು ಹಾಕಿ. ಅವರಿಗೆ ಸಂಬಳ ಜಾಸ್ತಿ ಮಾಡಿದರೆ ಈ ಟೀಕೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನೊಂದು ವಿಷಯವೇನೆಂದರೆ ಮುಂಬೈನಲ್ಲಿ ಆರ್ಮ್‌ಡ್ ರಿಜರ್ವ್ ಪೋಲೀಸಿನವರನ್ನು ಪೋಲೀಸು ಸ್ಟೇಶನ್ನಿಗೆ ಕೆಲಸಕ್ಕೆ ಹಾಕುವ ಪದ್ಧತಿ ಇದೆ. ಅದೇ ಪದ್ಧತಿ ಮುಂಬೈ ಕರ್ಣಾಟಕದಲ್ಲಿ ಮುಂದುವರಿದುಕೊಂಡು ಬಂದಿದೆ. ಆದರಿಂದ ಸ್ಟೇಶನ್ ಕೆಲಸ ಉತ್ತಮ ರೀತಿಯಲ್ಲಿ ನಡೆಯುತ್ತಿಲ್ಲ. ಆರ್ಮ್‌ಡ್ ರಿಜರ್ವ್ ಪೋಲೀಸಿಗೆ ಸಿವಿಲ್ ಪೋಲೀಸು ಕೆಲಸದಲ್ಲಿ ಸಾಕಷ್ಟು ಟ್ರೇನಿಂಗ್ ಇರುವುದಿಲ್ಲ; ಆದ್ದರಿಂದ ರಿಜಿಸ್ಟರು ಮಾಡುವುದು, ಪಂಚನಾಮ ಬರೆಯುವುದು ಮುಂತಾದದರಲ್ಲಿ ಬಹಳ ತಪ್ಪುಗಳನ್ನು ಮಾಡುತ್ತಾ ಇದ್ದಾರೆ. ಈಗಾಗಲೇ ಸಬ್ ಇನ್‌ಸ್ಪೆಕ್ಟರುಗಳಿಗೆ ಒಂದು ಟ್ರೇನಿಂಗ್ ಸ್ಕೂಲನ್ನು ತೆಗೆದಿದ್ದಾರೆ. ಅದರಂತೆ ಈ ಆರ್ಮ್‌ಡ್ ರಿಜರ್ವಿನಿಂದ ಸಿವಿಲ್ ಪೋಲೀಸಿಗೆ ಬಂದ ಕಾನ್‌ಸ್ಟೇಬಲ್ಲುಗಳಿಗೂ 3 ತಿಂಗಳ ಕಾಲವಾದರೂ ಒಂದು ಟ್ರೇನಿಂಗ್ ಕೊಡುವ ವ್ಯವಸ್ಥೆ ಮಾಡಬೇಕು, ಮತ್ತು ಅವರಿಗೆ ಸಾಕಷ್ಟು ಮಾಹಿತಿಯನ್ನು ಸ್ಟೇಶನ್ ಕೆಲಸದಲ್ಲಿ ಕೊಟ್ಟು ಈಗ ಆಗುತ್ತಾ ಇರತಕ್ಕಂಥ ತಪ್ಪುಗಳನ್ನು ಹೋಗಲಾಡಿಸಬೇಕು.

ಪ್ರೊಹಿಬಿಶನ್ ಕೇಸುಗಳಲ್ಲಿ ಪಂಚನಾಮ ಸರಿಯಾಗಿ ಬರೆಯದೆ ಇರುವುದರಿಂದ ಕೇಸುಗಳು ಅಕ್ವಿಟ್ ಆಗುತ್ತಿರುವುದು ತಮ್ಮ ಗಮನಕ್ಕೂ ಬಂದಿರಬಹುದು. ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಕಾನ್‌ಸ್ಟೇಬಲ್ಲುಗಳಿಗೆ, ಹೆಡ್ ಕಾನ್‌ಸ್ಟೇಬಲ್ಲುಗಳಿಗೆ ಜಿಲ್ಲಾ ಹೆಡ್ ಕ್ವಾರ್ಟರುಗಳಲ್ಲಿ ಒಂದು ಟ್ರೇನಿಂಗ್ ಸೆಂಟರನ್ನು ತೆಗೆದು, 3 ತಿಂಗಳು ತರಪೇತು ಕೊಡಬೇಕು. ಇಂಥ ಅಪವಾದಗಳು ಬರದಂತೆ ನೋಡಿಕೊಳ್ಳಬೇಕು.

11-00 A.M.

ಪ್ಯಾಸೆಂಜರ್ ಬಸ್ಸುಗಳ ಮೇಲೆ ಪ್ರತಿವರ್ಷ ಟ್ಯಾಕ್ಸ್ ಹೆಚ್ಚು ಮಾಡುತ್ತಾ ಇದ್ದೀರಿ, ಒಬ್ಬ ಪ್ಯಾಸೆಂಜರ್‌ಗೆ 15 ರೂಪಾಯಿ ಟ್ಯಾಕ್ಸ್ ಹಾಕುತ್ತಾ ಇದ್ದೀರಿ; ಇದು ಯಾರಮೇಲೆ ಬೀಳುತ್ತದೆ? ಸಾಮಾನ್ಯ ಮನುಷ್ಯನ ಮೇಲೆ ಬೀಳುವುದರಿಂದ ದಿನ ದಿನಕ್ಕೆ ಬಸ್ ಚಾರ್ಜಸ್ ಜಾಸ್ತಿಯಾಗಿ ಜನರಿಗೆ ತೊಂದರೆಯಾಗುತ್ತಾ ಇರತಕ್ಕ ಪರಿಸ್ಥಿತಿ ಬಂದಿದೆ. ಸರಕಾರಿ ಬಸ್ಸುಗಳಿಗೂ ಪ್ರೈವೇಟ್ ಬಸ್ಸುಗಳಿಗೂ ಇರತಕ್ಕ ವ್ಯತ್ಯಾಸ ಎಂದರೆ ಸರಕಾರಿ ಬಸ್ಸುಗಳಲ್ಲಿ ಹೆಚ್ಚು ಚಾರ್ಜ, ಪ್ರೈವೇಟ್ ಬಸ್ಸುಗಳಲ್ಲಿ ಕಡಿಮೆ ಚಾರ್ಜ ಹಾಕತಕ್ಕ ಪರಿಸ್ಥಿತಿ ಇದೆ. ಅದಕ್ಕೆ ಪ್ಯಾಸೆಂಜರ್ ಬಸ್ಸುಗಳಿಗೆ ಹಾಕಿರತಕ್ಕ ಹೆಚ್ಚಿನ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಇವತ್ತು ನನ್ನ ಪಾಲಿಗೆ ಒಂದು ಒಳ್ಳೆಯ ದಿನ ಅಲ್ಲ ಎಂದು ನನ್ನ ಭಾವನೆ. ಏಕೆಂದರೆ ಪೋಲೀಸ್ ಖಾತೆಗೂ ನನಗೂ ಬಹಳ ಗಂಟು. ನಮ್ಮ ರಾಜ್ಯದಲ್ಲಿ ಇವತ್ತು 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಒಬ್ಬ ಮಂತ್ರಿಗಳ ಕೈಯಲ್ಲಿ ನಾವು ಕೊಡುತ್ತಾ ಇದ್ದೇವೆ. ಇದು ಎಷ್ಟು ಮಟ್ಟಿಗೆ ಖರ್ಚಾಗುತ್ತದೆ ಇದರಿಂದ ಜನಕೆ ಎಷ್ಟು ಮಟ್ಟಿಗೆ ಒಳ್ಳೆಯದಾಗುತ್ತದೆ ಎಂದು ಹೇಳಿ ಇದರ ಮೇಲೆ ಇವತ್ತಿನ ದಿವಸ ಹಿಂದೆ ನಡೆದಿರತಕ್ಕದ್ದನ್ನು ಜ್ಞಾಪಕ ಮಾಡಿಕೊಂಡು ಮುಂದೆ ಹೇಗೆ ಆಗಬಹುದು ಎಂಬುದನ್ನು ಸರಕಾರದ ಮುಂದೆ ಇಡುವುದಕ್ಕೆ ಇವತ್ತು ಈ ಆಯವ್ಯಯದ ಮೇಲೆ ಚರ್ಚೆ ಮಾಡುತ್ತಾ ಇದ್ದೇವೆ. ಈಗ Taxes on vehicles, jails, Police, expenditure connected with National Emergency, Information and Publicity, Beggar Relief and Tourism." ಇದಕ್ಕೆ ಏಳು ಕೋಟಿ ರೂಪಾಯಿಗಳನ್ನು ಕೊಡುತ್ತಾ ಇದ್ದೇವೆ. ಹನ್ನೆರಡೂವರೆ ಹನ್ನೆರಡೂ ಮುಕ್ಕಾಲು ಗಂಟೆಯ ಒಳಗೆ ಇಷ್ಟು ಹಣವನ್ನು ಹೋಂ ಮಿನಿಷ್ಟರ್ ಅವರ ಕೈಯಲ್ಲಿ ಕೊಟ್ಟು ಅವರ ಮನ ಬಂದಂತೆ ಖರ್ಚು ಮಾಡಿ ಎಂದು ಹೇಳುತ್ತಾ ಇದ್ದೇವೆ. ನಮ್ಮ ಸ್ನೇಹಿತರು ಮುಂದೆ ವಿಶಾಲ ಮೈಸೂರು ಆಗುತ್ತದೆ ಎಂದು ಹೇಳುತ್ತಾ ಇದ್ದುದು ಇವತ್ತು ವಿನಾಶ ಮೈಸೂರು ಆಗಿದೆ. ಪೋಲೀಸ್ ವ್ಯಾನ್‌ಗಳ ಮೇಲೆ, ಜೀಪುಗಳ ಮೇಲೆ 'ಪೋಲೀಸ್ ಟು ಗಾರ್ಡ್ ದಿ ಪೀಪಲ್' ಎಂದು ಬರೆದಿದ್ದುದು ಇವತ್ತು ಏನಾಗಿದೆ ಎಂದರೆ ಅದನ್ನೆಲ್ಲಾ ಅಳಿಸಿದ್ದಾರೆ. ಅದಕ್ಕೆ ಕಾರಣವೇನೆಂದರೆ 'ಪೀಪಲ್ ಟು ಗಾರ್ಡ್

ದಿ ಪೋಲೀಸ್''; ಜನ ಪೋಲೀಸರನ್ನು ಕಾಯಬೇಕಾಗಿದೆ. ಏಳು ವರ್ಷದೊಳಗೆ ಈ ಖಾತೆಯಲ್ಲಿ ನಮ್ಮ ಆತ್ಮೀಯರು ಇದ್ದಾರೆ, ರಾಜಕೀಯವನ್ನು ಪ್ರಬಲವಾಗಿ ಬೆಳೆಸಬೇಕೆಂದು ಅಂದುಕೊಂಡಿದ್ದಂಥವರ ಕೈಯಲ್ಲಿ ಈ ಖಾತೆ ಹೋದಮೇಲೆ ಹೊಸ ಚೈತನ್ಯ, ಹೊಸ ಶಕ್ತಿ, ಹೊಸ ಹುರುಪು ಬರಬಹುದು ಎಂದು ನಿರೀಕ್ಷೆ ಮಾಡಿದ್ದೆ. ಆದರೆ ಅದು ಬರೀ ಬಿಸಿಲುಕುದುರೆಯಂತೆ ಆಯಿತು. ಎರಡು ವರ್ಷದಿಂದ ಕಾದು ನೋಡಿದ್ದಾಯಿತು. ಸಮಾಜದಲ್ಲಿ ಒಂದು ಸ್ಥಾನವನ್ನು ಗಳಿಸಿದ್ದವರು ಶಕ್ತಿ ಸಾಮರ್ಥ್ಯವನ್ನು ಹೊಂದಿದವರು ಈ ಖಾತೆಯ ಆಡಳಿತವನ್ನು ವಹಿಸಿಕೊಂಡಮೇಲೆ ಅಲ್ಲಿನ ಆಡಳಿತ ಸರಿಹೋಗಬಹುದು ಎಂದು ನಾನು ಅಂದುಕೊಂಡಿದ್ದೆ. ಆದರೆ ಇವತ್ತಿನ ದಿವಸ ಮಾನ್ಯ ಗೃಹಸಚಿವರೇ ಜೈಲುವಾಸಿಗರು ಆಗಿದ್ದಾರೆ ಎಂದು ನಾನು ಭಾವಿಸಿದ್ದೇನೆ. ನಮ್ಮ ಸ್ನೇಹಿತರಾದ ನಾವೋಷಿಯವರು ಇವತ್ತು ಒಂದು ಮಾತು ಹೇಳಿದರು. ಈ ಪೋಲೀಸ್ ಖಾತೆ ಹೇಗಿದೆ ಎಂದರೆ ಬರೀ ವಿದ್ಯಾಖಾತೆಯಲ್ಲಿ ಈ ಜಾತೀಯತ ಕುಣಿದಾಡುತ್ತಾ ಇದೆ, ರೆವಿನ್ಯೂ ಖಾತೆಯಲ್ಲಿ ಜಾತೀಯತೆ ಕುಣಿದಾಡುತ್ತಾ ಇದೆ ಎಂದು ನಾನು ಅಂದುಕೊಂಡಿದ್ದೆ ಆದರೆ ಪೋಲೀಸ್ ಖಾತೆಯಲ್ಲೂ ಕೂಡ ಆ ಜಾತಿ ಜಾತಿಗಳ ಜಂಜಾಟ, ಜಾತಿ ಜಾತಿಗಳ ಕುಣಿತ ಎದ್ದು ರಾಕ್ಷಸ ಪೆಡಂಭೂತವಾಗಿದೆ ಪೋಲೀಸ್ ಖಾತೆಯಲ್ಲಿ ಎಂತಹ ಅಧಿಕಾರಿ ಇರಬೇಕು, ಎಂತಹ ದಕ್ಷತೆ ಇರಬೇಕು ಎಂಬುದನ್ನು ಗೃಹಸಚಿವರಿಗೆ ಹೊರಗಡೆ ಹೇಳಿದ್ದೇನೆ, ಒಳಗಡೆ ಈ ಸಭೆಯಲ್ಲೂ ಹೇಳಿದ್ದೇನೆ. ರಾಜ್ಯದಲ್ಲಿರತಕ್ಕ ಈ ಪೋಲೀಸ್ ಖಾತೆಯನ್ನು ತಮ್ಮ ಕಾಲದಲ್ಲಿ ಆದರೂ ಉನ್ನತ ಸ್ಥಿತಿಗೆ ತರಲು ಏನು ಮಾಡಬೇಕೆನ್ನುವುದನ್ನು ನನಗೆ ತಿಳಿದ ಮಟ್ಟಿಗೆ ತಮಗೆ ತಿಳಿಸಿದ್ದೇನೆ. ತಮಗೆ ಏನು ಮಾಡಬೇಕೆಂದು ಇಚ್ಛೆ ಇದೆಯೋ ಅಥವಾ ಮಾಡಲಿಕ್ಕೆ ಹೊರಟಿದ್ದರೂ ಏನು ಅಡ್ಡಿ ಆತಂಕ ಇದೆಯೋ ನನಗೆ ಗೊತ್ತಿಲ್ಲ. ಇವತ್ತಿನ ದಿವಸ ತಮ್ಮನ್ನು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ಖಾತೆಯನ್ನು ಭದ್ರ ಮಾಡುವುದಕ್ಕೆ ತಮ್ಮ ಕೈಯಲ್ಲಿ ಆಗದೇ ಹೋದರೆ ಈ ದುರ್ಮಾರ್ಗವನ್ನು ಸರಿಮಾಡುವುದಕ್ಕೆ ಆಗದಿದ್ದರೆ, ಆ ನೀತಿಯನ್ನು ದೂರ ಮಾಡುವುದಕ್ಕೆ ಆಗದಿದ್ದರೆ ಇದನ್ನು ಬೇರೆಯವರಿಗೆ ಕೊಟ್ಟುಬಿಡಿ. ಹಾಗೆ ಮಾಡಿ ಸಮಂಜಸವಾದ ಬೇರೆ ಒಂದು ಖಾತೆಯನ್ನು ತಾವು ತೆಗೆದುಕೊಳ್ಳಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಪೋಲೀಸ್ ಖಾತೆಯಲ್ಲಿರತಕ್ಕವರಿಗೆ ಎದೆ 12 ಅಂಗುಲ ಇರಬೇಕು, 6 ಅಡಿ ಎತ್ತರ ಇರಬೇಕು ಒಂದೂವರೆ ಇಂಚು ಮೂಗು ಬೆಳೆದಿರಬೇಕು ಎಂದು ಹೇಳಿ ಕ್ವಾಲಿಫಿಕೇಷನ್ ಎಲ್ಲಾ ಮಾಡಿದ್ದೀರಿ. ಈ ಖಾತೆ ಎಷ್ಟುಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎಂಬುದನ್ನು ನೋಡಿದ್ದೇ ಆದರೆ ಮೂರು ಸಾವಿರ ರೂಪಾಯಿಗಳ ಸಂಬಳ ಕೊಟ್ಟು ಐ. ಜಿ. ಪಿ. ಎನ್ನತಕ್ಕ ಒಬ್ಬ ಅಧಿಕಾರಿಯನ್ನು ಇಟ್ಟುಕೊಂಡಿದ್ದೀರಿ. ಇವತ್ತಿನ ದಿವಸ ಆ ಪೋಲೀಸ್ ಐ. ಜಿ. ಪಿ ಯವರು ಏನು ಕೆಲಸ ಮಾಡುತ್ತಾ ಇದ್ದಾರೆ ಎಂಬುದನ್ನು ಯಾರೂ ಕೇಳುವವರೇ ಇಲ್ಲ. ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್ ಒಬ್ಬರು ಇದ್ದಾರೆ ಅವರೇ ಇವತ್ತಿನ ದಿವಸ ಡೀ ಫಾಕ್ಟೋ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಆಗಿದ್ದಾರೆ. ಐ. ಜಿ. ಪಿ. ಅವರಿಗೆ ಮೂರು ಸಾವಿರ ರೂಪಾಯಿಗಳ ಸಂಬಳ ಕೊಡುತ್ತೀರಿ, ಯಾವುದಾದರೂ ಕಾಗದ ತಂದು ಅದಕ್ಕೆ ತಮ್ಮ ರುಜು ಹಾಕಿಸುವುದು ಎಷ್ಟೋ ಅಷ್ಟೆ ಅವರ ಕೆಲಸ. ಈ ರಾಜ್ಯದಲ್ಲಿರತಕ್ಕ ಎಂ. ಎ. ಆರ್. ಪಿ. ಹೋಂ ಗಾರ್ಡ್ ಇಲ್ಲೆಲ್ಲಾ ಏನು ನಡೆಯುತ್ತಾ ಇದೆ ಎಂಬುದನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಇವತ್ತಿನ ದಿವಸ ಐ. ಜಿ. ಪಿ. ಅವರಿಗೆ ಕೊಡುತ್ತಾ ಇರತಕ್ಕ ಸಂಬಳ ದಂಡ, ಅವರು ಬಹಳ ಇನ್‌ಎಫಿಷಿಯೆಂಟು. ಈ ರಾಜ್ಯದಲ್ಲಿರತಕ್ಕ ಪೋಲೀಸ್ ಫೋರ್ಸ್‌ನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಅವರು ದಕ್ಷರಲ್ಲ. ಈ ರಾಜ್ಯ ಹೆಸರುವಾಸಿಯಾಗಿದ್ದು ಪೋಲೀಸ್ ಖಾತೆಯ ಸ್ಥಾನ ಒಳ್ಳೆಯ ಮಟ್ಟದಲ್ಲಿ ಇತ್ತು. ಅವರು ಬಂದಮೇಲೆ ಈ ರಾಜ್ಯದಲ್ಲಿ ಈ ಪೋಲೀಸ್ ಖಾತೆ ಎಷ್ಟು ಡಿಗ್ರೇಡ್ ಆಗಬೇಕೋ, ಎಷ್ಟು ಕೆಳಮಟ್ಟಕ್ಕೆ ಇಳಿಯಬೇಕೋ ಆ ಮಟ್ಟಕ್ಕೆ ಇಳಿದಿದೆ. ಇವತ್ತಿನ ದಿವಸ ಮಂತ್ರಿಗಳು ಹೇಳಿದರೂ ಪ್ರಯೋಜನವಾಗುವುದಿಲ್ಲ. ಯಾವ ಪೋಲೀಸ್ ಖಾತೆಯ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದ್ದಾರೋ ಅವರನ್ನು ವ್ಹಿಪ್ ಮಾಡಿದ್ದರೆ ಪೋಲೀಸ್ ಖಾತೆ ಚೆನ್ನಾಗಿ ಆಗುತ್ತಾ ಇತ್ತು. ಪೋಲೀಸ್ ಖಾತೆ ಎಲ್ಲಾ ಡಿಸಾರ್ಡರ್ ಆಗಿದೆ. ಹೆಡ್ ಕ್ವಾರ್ಟರ್ ಅಸಿಸ್ಟೆಂಟ್ ಆ ಜಾಗಕ್ಕೆ ಬಂದು 7 ವರ್ಷ ಆಯಿತು, 7 ವರ್ಷದಿಂದ ಈ ಸಭೆಯ ಸದಸ್ಯರು ಅವರನ್ನು ಬೇರೆ ಕಡೆಗೆ ಕಳುಹಿಸಬೇಕೆಂದು ಹೇಳಿದರೂ ಕೂಡ ಎಲ್ಲಿಗೂ ಕಳುಹಿಸದೇ ಅದು ಸಾಧ್ಯವೇ ಇಲ್ಲವೇನೋ ಎನ್ನುವ ಹಾಗೆ ಮುಂದಿನ ವರ್ಷ ಕಳುಹಿಸುತ್ತೇವೆ, ಇನ್ನು 6 ತಿಂಗಳಿನಲ್ಲಿ ಕಳುಹಿಸುತ್ತೇವೆ ಎಂದು ಹೇಳಿಕೊಂಡು ಬಂದಿದ್ದಾರೆ. ಅವರನ್ನು ಇನ್ನೂ ಕೂಡ ಟ್ರಾನ್ಸ್‌ಫರ್ ಮಾಡುವುದಕ್ಕೆ ಆಗಿಲ್ಲ. ಏಕೆಂದರೆ ಅವರು ಅಲ್ಲಿ ಭದ್ರವಾಗಿ ಬೇರೂರಿ ಕುಳಿತಿದ್ದಾರೆ. ಬ್ರಾಹ್ಮಣರು ಒಂದು ಕಡೆ, ಕ್ರಿಶ್ಚಿಯನ್ನರು ಒಂದು ಕಡೆ ಈ ಖಾತೆಯಲ್ಲಿ ಕುಳಿತು ರಾಜ್ಯಭಾರ ಮಾಡುತ್ತಾ ಇದ್ದಾರೆ. ಕ್ರಿಶ್ಚಿಯನ್ ಅಧಿಕಾರಿಗಳು ಕ್ರಿಶ್ಚಿಯನ್ನರ ರಕ್ಷಣೆ ಮಾಡುತ್ತಾ ಇದ್ದಾರೆ, ಬ್ರಾಹ್ಮಣ ಅಧಿಕಾರಿಗಳು ಬ್ರಾಹ್ಮಣರ ರಕ್ಷಣೆ ಮಾಡುತ್ತಾ ಇದ್ದಾರೆ. ಇಲ್ಲಿರುವ ಹೆಡ್ ಕ್ವಾರ್ಟರ್ ಅಸಿಸ್ಟೆಂಟರು ಯಾವ ಯಾವ ಬ್ರಾಹ್ಮಣರು ಎಲ್ಲೆಲ್ಲಿ ಇದ್ದಾರೆ, ಯಾರ್ಯಾರನ್ನು ಯಾವ ಯಾವ ಕೀ ಪೋಸ್ಟ್‌ಗೆ ತುಂಬಬೇಕು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಂಬುದನ್ನು ಯೋಚನೆ ಮಾಡುತ್ತಾ ಇದ್ದಾರೆ. ಇನ್ನೊಬ್ಬರು ಪೋಲೀಸ್ ಕಮಿಷನರು ಇದ್ದಾರೆ ಅವರು ತಮ್ಮ ಜನರನ್ನು ಯಾರ್ಯಾರನ್ನು ಯಾವ ಯಾವ ಜಾಗದಲ್ಲಿ ಇಟ್ಟುಕೊಳ್ಳಬೇಕೆಂಬುದನ್ನು ಸೂಚನೆ ಮಾಡುತ್ತಾ ಇದ್ದಾರೆ. ಹೀಗಾದರೆ ರಾಜ್ಯದಲ್ಲಿರತಕ್ಕ ಲಿಂಗಾಯ್ತರು, ಒಕ್ಕಲಿಗರು, ಹರಿಜನರು ಮತ್ತು ಇತರ ಬೇರೆ ಜಾತಿಗಳವರಿಗೆ ಯಾರು ರಕ್ಷಣೆ ಕೊಡುವವರು ಎಂದು ಕೇಳುತ್ತೇನೆ. ಆ ಹೆಡ್ ಕ್ವಾರ್ಟರು ಅಸಿಸ್ಟೆಂಟ್‌ರು ಡಿ. ಐ. ಜಿ. ಆಗುವ ತನಕ ಆ ಆಫೀಸಿನಲ್ಲೇ ಇರುತ್ತೇನೆ, ನನ್ನನ್ನು ಇಲ್ಲಿಂದ ತೆಗೆಯುವುದಕ್ಕೆ ನಿಜಲಿಂಗಪ್ಪನವರು ಅಲ್ಲ, ಆರ್. ಎಂ. ಪಾಟೀಲರು ಅಲ್ಲ, ಮುಕ್ಕಣ್ಣಪ್ಪನೇ ಬಂದರೂ ಸಾಧ್ಯವಿಲ್ಲ ಎಂದು ಹೇಳುತ್ತಾ ಇರುವುದನ್ನು ನೋಡಿದರೆ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರ ಮಟ್ಟದಲ್ಲಿರತಕ್ಕ ಅಧಿಕಾರಿ ಸರ್ವಾಧಿಕಾರವನ್ನು ತನ್ನ ಕೈಯಲ್ಲಿ ಇಟ್ಟುಕೊಂಡು ಕೊರೆ ಮಾಡುತ್ತಾ ಇರುವುದು ದುರ್ದೈವ. ಇಂತಹ ಪರಿಸ್ಥಿತಿ ಯಾವಾಗಲೂ ಬಂದಿರಲಿಲ್ಲ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. 1957 ರಲ್ಲಿ ನಮ್ಮ ಮೈಸೂರು ಆಗತಾನೆ ವಿಶಾಲ ಮೈಸೂರು ಆಗಿತ್ತು, ತಾವೂ ಈ ಸಭೆಯ ಸದಸ್ಯರು ಆಗಿದ್ದಿರಿ, ಈ ಡಿಮ್ಯಾಂಡಿನ ಮೇಲೆ ಎರಡು ಮೂರು ದಿನ ಚರ್ಚೆ ಆಗಿದೆ ಈ ಪೋಲೀಸ್ ಖಾತೆಯನ್ನು ಸರಿಯಾದ ಮಟ್ಟಕ್ಕೆ ತರಬೇಕೆಂದು ಈ ಕಡೆಯುವರು ಆ ಕಡೆಯವರು ಎಲ್ಲರೂ ಹೇಳಿದ್ದಾರೆ. ಇವತ್ತಿನ ದಿವಸ ಎಲ್ಲರಿಗೂ ಕೂಡ ಇದು ಬೇಜಾರಾಗಿದೆ, ಯಾರ ಕೈಯಲ್ಲೂ ಇದನ್ನು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಇದು ಹೀಗೆಯೇ ನಡೆದುಕೊಂಡು ಹೋಗಲಿ ಎಂದರೆ, ಮಾದಮ್ಮನ ಹಳ್ಳಿಯಲ್ಲಿ ಮಾರಮ್ಮನ ಜಾತ್ರೆ ಅಂತ ಯಾರು ಎಷ್ಟು ಹೇಳಿದರೂ ಪ್ರಯೋಜನವಿಲ್ಲ, ನಡೆದುಕೊಂಡು ಹೋಗಲಿ.

ಆ ಅಧಿಕಾರಿಯನ್ನು ಅವರು ಒಬ್ಬ ಕ್ಯಾಪ್ಟನ್ ಮೇಲೆ ಸುಳ್ಳು ಕೇಸು ಕನ್‌ಕ್ಯಾಕ್ಟ್ ಮಾಡಿದರು ಎಂದು ಹೇಳಿ ಅವರು ಲಾಯಕ್ ಅಲ್ಲ ಅಂತ ಗವರ್ನಮೆಂಟ್ ಆಫ್ ಇಂಡಿಯಾದವರು ಓಡಿಸಿದರು. ಅಲ್ಲಿಂದ ಹೈದರಾಬಾದಿಗೆ ಬಂದರು, ಹೈದರಾಬಾದ್‌ನಲ್ಲಿ ಅಮೆರಿಕನ್ ಸುಪ್ರೀಂ ಕೋರ್ಟ್ ಚೀಫ್ ಜಸ್ಟಿಸ್ ಬಂದಿದ್ದಾಗ ಅವರನ್ನು ಸಿ. ಐ. ಡಿ. ಆಗಿ ಕಾವಲು ಇಟ್ಟಿದ್ದರು. ಆ ಸಮಯದಲ್ಲಿ ಸ್ವಲ್ಪ ಗದ್ದಲ ಆಯಿತು. ಆಗ Then Chief Justice came out and asked what was the noise going on. They said: "This is the Deputy Inspector General of Police; he has come and just talking to them." He has written against him and it is a documentary evidence. If the Government cares to know, let them get that record. He has written: "It is unfortunate to have deaf officer for an important post like this as C.I D. Deputy Inspector General of Police. ಇಂಥ ಸಿ.ಐ.ಡಿ. ಯನ್ನು ಡಿ.ಐ.ಜಿ. ಯನ್ನು ಬೆಂಗಳೂರಿನಲ್ಲಿಟ್ಟಿದ್ದೀರಿ. ಇಂಥ ಆಫೀಸರು ಗೊಂಡಾಲ್ ಮಹಾರಾಜರನ್ನು ಅರೆಸ್ಟ್ ಮಾಡಿದರು. ಅವರನ್ನು ಮುಟ್ಟಬಾರದೆಂದು ಸರ್ಕಾರ ಹೇಳಿದರೂ ಅರೆಸ್ಟ್ ಮಾಡಿದರು. ಇದರಿಂದ ಇಂಡಿಯಾ ಸರ್ಕಾರ ನಮ್ಮ ಸರ್ಕಾರಕ್ಕೆ ಛೀಮಾರಿ ಮಾಡಿತು. ಇದನ್ನು ಅರ್ಥಮಾಡಿಕೊಳ್ಳಬೇಕು. ಇಂಥ ಅಧಿಕಾರಿಯನ್ನು ಇಲ್ಲಿಯವರೆಗೆ ಹೇಗೆ ಇಟ್ಟಿದ್ದೀರಿ ? ಕಿವಿ ಕೇಳದಿರುವ ಇಂಥವರನ್ನು ಸಿ.ಐ.ಡಿ ಇಲಾಖೆಯಲ್ಲಿ ಕೆಲಸಮಾಡಲು ಹಾಕುವುದು ಸರಿಯೇ ? ಐ.ಜಿ.ಪಿ.ಯವರಿಗೆ 3 ಸಾವಿರ ರೂಪಾಯಿಗಳ ಸಂಬಳ, ಅವರು ಸಂಸ್ಥಾನದ ಪ್ರಜೆಗಳ ರಕ್ಷಣೆ ನೋಡಿಕೊಳ್ಳಬೇಕಾಗಿರುವವರು. ಅವರೇ ಹೀಗೆ ಮಾಡಿದರೆ ನಾವು ಯಾರಿಗೆ ಹೇಳಬೇಕು ! ನಾನು ಕಂಡಿರುವುದನ್ನು ಕೇಳಿರುವುದನ್ನು ಹೇಳುತ್ತಿದ್ದೇನೆ. ಈ ದಿವಸ ಪೋಲೀಸ್ ಖಾತೆಯಲ್ಲಿ ಅದಕ್ಷತೆ ತುಂಬ ತುಳುಕಾಡುತ್ತಿದೆ ಆದುದರಿಂದ ಪ್ರಾರ್ಥನೆ ಮಾಡುವುದು ಐ.ಜಿ.ಪಿ. ನಮ್ಮ ದೇಶದಲ್ಲೇ ಇರಬೇಕೆಂಬ ಆಸೆ ನಮಗಿಲ್ಲ. ಅವರು ಎಲ್ಲಿಗೆ ಬೇಕಾದರೂ ಹೋಗಬಹುದು, ಕಳುಹಿಸಿಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರಿಗೆ ಗುಜರಾತಿಗೆ ಹೋಗಬೇಕೆಂಬ ಆಶೆ ಇರಬಹುದು, ಎಷ್ಟು ಬೇಗ ಹೋದರೆ ಅಷ್ಟು ಒಳ್ಳೆಯದು.

ಆಮೇಲೆ ಕಮ್ಯೂನಲ್ ಎನ್ನುವುದನ್ನು ರುಜುವಾತು ಮಾಡಿದರೆ ತಲೆ ಬಾಗಬೇಕಾಗುತ್ತದೆ. ಒಬ್ಬ ಸಿ.ಐ.ಡಿ. ಆಗಿರುವ ಡಿ.ಐ.ಜಿ. ಕೈಕೆಳಗೆ 12 ಜನರು ಕೆಲಸಮಾಡುತ್ತಾರೆ. ಅದರಲ್ಲಿ 7 ಜನರು ಅವರ ಜಾತಿಯವರು, ಉಳಿದವರು 5 ಜನರು ಬೇರೆಯವರಿದ್ದಾರೆ. ಜಾತಿವಾದಕ್ಕೆ ಇದೆ ಒಂದೇ ಉದಾಹರಣೆ ಸಾಕು. ಬೇರೆ ಜಾತಿಯವರು ಅವರ ಖಾತೆಯಲ್ಲಿ ಕೆಲಸಮಾಡಲು ಬೇಕಾಗಿಲ್ಲ, ಅವರನ್ನೆಲ್ಲಾ ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟರಿಗೆ ಬಿಡಬೇಕು. ಅಲ್ಲಿ ಬೇಕಿಲ್ಲದವರನ್ನು ನಾಗಾಲ್ಯಾಂಡಿಗೆ

ಕಳುಹಿಸುತ್ತಾರೆ. ಬೇರೆಯವರು ಬೇಕಾದವರು ಬೆಂಗಳೂರಿನಲ್ಲಿರಬೇಕು. ಹೀಗೆ ಮಾಡುವುದು ಸರಿಯಲ್ಲ, ಇದನ್ನು ಸರಿಪಡಿಸಬೇಕು ಎಂದು ಗೃಹಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಟ್ರಂಕ್ ಕಾಲ್ ರಿಜಿಸ್ಟರನ್ನು ತರಿಸಿ ಸಚಿವರು ನೋಡಬೇಕು. ಯಾವ ಆಫೀಸರು ಎಲ್ಲಿಗೆ ಏಕೆ ಫೋನು ಮಾಡಿದರು, ಏನು ಮಾಡಿದರು ಎಂಬುದನ್ನು ನೋಡಬೇಕು. ಟ್ರಂಕ್‌ಕಾಲ್ ಖರ್ಚು ಮಿತಿಗಿಂತ ಹೆಚ್ಚಾದರೆ ಕಾರಣವೇನೆಂದು ಪರಿಶೀಲಿಸಬೇಕು. ಶಿವಮೊಗ್ಗದಲ್ಲಿ ಮುಖ್ಯಮಂತ್ರಿಗಳ ಕಾರಿನ ಮೇಲೆ ಕಲ್ಲು ಬಿದ್ದಾಗ ಅಲ್ಲಿದ್ದ ಪೋಲೀಸ್ ಸೂಪರಿಂಟೆಂಡೆಂಟ್ ತಮ್ಮ ಜಾತಿಯವರು ಆಗಿದ್ದುದರಿಂದ ಅವರನ್ನು ಉಳಿಸಲು ಸಿ.ಐ.ಡಿ. ಡಿ.ಐ.ಜಿ. ಹೋಗಿ ವಶೀಲಬಾಜಿ ಮಾಡಿ ಅವರನ್ನು ಉಳಿಸಿದರು. ಹೀಗಾದರೆ ಬೇರೆ ಜಾತಿಯವರನ್ನು ಕೇಳುವವರು ಯಾರು ? ಇದು ಪೋಲೀಸು ಖಾತೆಯ ಮಂತ್ರಿಗಳಿಗೆ ಗೊತ್ತಿಲ್ಲವೆಂಬುದು ನನ್ನ ಅಭಿಪ್ರಾಯ. ಗೊತ್ತಿದ್ದರೆ ಬೇಗ ಸರಿಪಡಿಸ ಬೇಕೆಂದು ಮಾರ್ಗ ಹುಡುಕುತ್ತಿದ್ದಾರೋ ಏನೋ. ಈ ಸಂಬಂಧದಲ್ಲಿ ಒಳಹೊಕ್ಕು ನೋಡಿ ಈ ಖಾತೆಯಲ್ಲಿರುವ ಅಪಕೀರ್ತಿಯನ್ನು ತೊಡೆದುಹಾಕಿ ಕೀರ್ತಿಯನ್ನು ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಎಂ.ಎ.ಆರ್.ಪಿ. ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ ಇದೆ. ಅದರಲ್ಲಿ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರಿದ್ದಾರೆ. ಅಲ್ಲಿನ ಎಲ್ಲ ವ್ಯವಹಾರಗಳನ್ನು ನಡೆಸುವುದಕ್ಕೆ ಶಾಲೆ, ಆಸ್ಪತ್ರೆ ಮುಂತಾದುವನ್ನು ನೋಡಿಕೊಳ್ಳಲು ಒಬ್ಬ ಇನ್‌ಸ್ಪೆಕ್ಟರಿದ್ದಾರೆ ಮತ್ತು ಡಿವೈ.ಎಸ್.ಪಿ. ಇದ್ದಾರೆ. ಎಲ್ಲವನ್ನೂ ಸೂಪರಿಂಟೆಂಡೆಂಟರೇ ಮಾಡುವುದು, ಅಲ್ಲಿರುವವರೆಲ್ಲಾ ಒಂದೇ ಜಾತಿಯವರು ಇನ್‌ಸ್ಪೆಕ್ಟರು, ಕಮೀಷನರು ಮತ್ತು ಸೂಪರಿಂಟೆಂಡೆಂಟರು ಎಲ್ಲಾ ಅವರೇ. ಹಾಗಿರುವಾಗ ಈ ಖಾತೆ ಎಷ್ಟು ಚೆನ್ನಾಗಿ ನಡೆಯುತ್ತಿದೆ ಎಂಬುದನ್ನು ಒಳಹೊಕ್ಕು ನೋಡಬೇಕು ಎಂದು ವಿನಯದಿಂದ ಹೇಳುತ್ತೇನೆ. ಇಂಥ ಆಫೀಸರುಗಳನ್ನು ದೂರ ಮಾಡದಿದ್ದರೆ, ಅವರ ಮೇಲೆ ಸರಿಯಾದ ಕ್ರಮ ಕೈಗೊಳ್ಳದಿದ್ದರೆ ಡೀಮಾರಲೈಜ್ ಆಗುತ್ತದೆ. ಆದುದರಿಂದ ಕಳಂಕ ಬಾರದಿರುವ ಹಾಗೆ ಇಲಾಖೆಯನ್ನು ನಡೆಸ ಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ. ಇತರ ಆಫೀಸರುಗಳು ಬೇರೆ ಊರುಗಳಿಗೆ ವರ್ಗ ವಾದರೂ ಎಂ. ಎ.ಆರ್.ಪಿ. ನಲ್ಲಿರುವವರು ಅಲ್ಲೇ ಇದ್ದಾರೆ ಎಂದರೆ ವಿಚಾರ ಅರ್ಥ ಮಾಡಿಕೊಳ್ಳ ಬೇಕು. ಇತರರಿಗೆ ರಕ್ಷಣೆ ಬೇಡವೆ, ಅವರು ಈ ಊರಿಗೆ ಬರಬಾರದೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಬೇಡವೆ ! ಅನೇಕರು 15-20 ವರ್ಷಗಳಿಂದ ಬೆಂಗಳೂರಿನಲ್ಲೇ ಇದ್ದಾರೆ. ಐ.ಜಿ.ಪಿ. ಆಫೀಸಿನಲ್ಲೇ ಇದ್ದಾರೆ. ಅದನ್ನು ತಪ್ಪಿಸದಿದ್ದರೆ ಇತರರ ಗತಿಯೇನು ? ಬಹಳ ಕಾಲದಿಂದ ಇರುವವರನ್ನು ಬಿದರೆಗೆ, ಗಲಾಟೆ ಇರುವ ಗಡಿ ಪ್ರದೇಶಕ್ಕೆ ಹಾಕಬೇಕು. ಕೆಲಸಕ್ಕೆ ಬಾರದವರನ್ನು ದೂರ ಕಳಿಸ ಬೇಕು. ಅಂಥವರಿಗೆ ರಕ್ಷಣೆ ಕೊಡಬಾರದು. ಜನರಿಂದ ಲಂಚ ತಿಂದರೆಂದು ತುಮಕೂರಿನ ಪೋಲೀಸ್ ಸೂಪರಿಂಟೆಂಡೆಂಟರಿಗೆ ಮತ್ತು ಆಂಟಿ-ಕರಪ್ಷನ್ ಇಲಾಖೆಗೆ ದೂರು ಕೊಟ್ಟರೆ, ಒಬ್ಬ ಸಬ್‌ಇನ್‌ಸ್ಪೆಕ್ಟರ್ ಮತ್ತು ನಾಲ್ಕು ಕಾನ್‌ಸ್ಟೇಬಲ್ಲುಗಳಮೇಲೆ ದೂರು ಕೊಟ್ಟರೆ, ನಾಲ್ಕು ಕಾನ್‌ಸ್ಟೇಬಲ್ಲುಗಳು ಊರಿಗೆ ಹೋಗಿ ಎಂಟು ಜನರನ್ನು ಅರೆಸ್ಟ್ ಮಾಡಿದರು, ಬೇಡಿ ಹಾಕಿ ಆರು ಮೈಲಿ ನಡೆಸಿಕೊಂಡು ಹೋಗಿ ಲಾಕಪ್ಪಿಗೆ ಹಾಕಿದರು, ಅವರ ಬಾಯಿಯಲ್ಲಿ ಪಾಯಿಖಾನೆ ಹಾಕಿದರು. ಉಚ್ಚೆ ಹೊಯ್ದರು, ಅವರ ಹೆಂಡತಿಯನ್ನು ಕರೆದುಕೊಂಡು ಬಂದು ರೇಪ್ ಮಾಡುವುದಾಗಿ ಹೆದರಿಸಿ ದರು. ಅದರಮೇಲೆ ಸಚಿವರಿಗೆ ದೂರು ಕೊಟ್ಟರು, ಎನ್‌ಕ್ವೈರಿ ಮಾಡಬೇಕೆಂದು ಕೇಳಿಕೊಂಡರು, ಸಂಬಂಧಪಟ್ಟ ಆಫೀಸರುಗಳನ್ನು ಸಸ್ಪೆಂಡ್ ಮಾಡಬೇಕೆಂದು ಒತ್ತಾಯಮಾಡಿದರು. ಮೇಲ್ಪಟ್ಟ ಆಫೀಸರು ತನ್ನ ಜಾತಿಯ ನೌಕರರಮೇಲೆ ಅಭಿಮಾನವಿಟ್ಟು ಅವರಿಗೆ ಹಾನಿಯಾಗದಂತೆ ಮಾಡಲು ಪ್ರಯತ್ನಪಟ್ಟರು. ಜನರಿಗೆ ತೊಂದರೆ ಮಾಡಿದ ಬಗ್ಗೆ ಎಂಟು ಜನರಿಂದ ಕರಾಬೊರೇಟ್ ಎವಿಡೆನ್ಸ್ ಬಂದಿದೆ. ನವೆಂಬರಿನಲ್ಲಿ ದೂರು ಕೊಟ್ಟರೆ ಇಲ್ಲಿಯವರೆಗೆ ಸರ್ಕಾರಕ್ಕೆ ವರದಿ ಬಂದಿಲ್ಲ ಎಂದರೆ ಏನು ತಿಳಿಯಬೇಕು. ನಾನು ಗೃಹ ಸಚಿವರನ್ನು ಅವಹೇಳನ ಮಾಡುತ್ತಿಲ್ಲ, ಅವರ ಕೈಕೆಳಗಿರುವ ಆಫೀಸರು ಗಳು ಗೃಹ ಸಚಿವರಿಗೆ ಕೆಲಸ ನಿರ್ವಹಿಸಲು ಯೋಗ್ಯತೆ ಇಲ್ಲ ಎಂದು ತೋರಿಸಲು ಪ್ಲಾಟ್, ಸ್ಕೀಂ ಮಾಡುತ್ತಿದ್ದಾರೋ ಏನೋ ಎಂಬ ಭಯವಿದೆ.

ಸುಮಾರು ಆರು ಕೋಟಿಯಷ್ಟು ಹಣಕ್ಕೆ ನಾವು ಒಪ್ಪಿಗೆ ಕೊಡುವಾಗ ನಾವು ಮಾನ್ಯ ಮಂತ್ರಿಗಳ ಗಮನಕ್ಕೆ ನಿಜ ಸ್ಥಿತಿ ಏನಾಗಿದೆ ಎನ್ನುವುದನ್ನು ತಿಳಿಯುವುದಕ್ಕೆ ಅವರ ನೋಟೀಸಿಗೆ ತರದೇ ಹೋದರೆ ನಾವಿದ್ದುಕೊಂಡು ಏನು ಜಸ್ಟಿಸ್ಸು ಮಾಡಿದಂತಾಗುತ್ತದೆ ಎನ್ನುವುದನ್ನು ತಾವೂ ಸ್ವಲ್ಪ ಯೋಚನೆಮಾಡಿ. ಇದಕ್ಕಾಗಿ ಇನ್ನೂ ಸ್ವಲ್ಪ ಕಾಲ ಮಾತನಾಡಲು ಅವಕಾಶ ಕೊಡಿ. ಬೇಗನೆ ಮುಗಿಸುತ್ತೇನೆ.

ಇಲ್ಲಿ ನಾನು ಏನು ಹೇಳುತ್ತಿದ್ದೇನೆಂದರೆ, ಒಬ್ಬರು ಸಬ್ ಇನ್‌ಸ್ಪೆಕ್ಟರವರು ಏನು ಮಾಡಿದರು ಎನ್ನುವುದಕ್ಕೆ ಒಂದು ಉದಾಹರಣೆ ಮಾತ್ರ ಹೇಳುತ್ತಿದ್ದೇನೆ. 1,200ರೂ. ಗಳು ಬೆಲೆ ಬಾಳುವ ಒಂದು ಜೊತೆ ಎತ್ತುಗಳು ಕಳವಾಗಿವೆ ಎಂದು ಒಬ್ಬರು ಪೋಲೀಸು ಸ್ಟೇಷನ್ನಿಗೆ ಬಂದು ಕಂಪ್ಲೇಂಟು ಕೊಡು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವುದಕ್ಕೆ ಬಂದರೆ ಅವರ ಕಂಪ್ಲೇಂಟ್ ತೆಗೆದುಕೊಂಡು ಕೇಸ್ ರಿಜಿಸ್ಟರ್ ಮಾಡಲಿಲ್ಲ. ಆದರೆ ಆ ಎತ್ತುಗಳನ್ನು ಪಾವಗಡದ ಹತ್ತಿರ ಸೀಜ್ ಮಾಡಿಕೊಂಡು ಹೀಗೆ ಮಾಡಿದ್ದಾರೆ ಡು ಡಿ. ಐ. ಜಿ. ಯವರಿಗೆ ಕಂಪ್ಲೇಂಟು ಮಾಡಿದರೆ ಅವರ ಕೇಸು ರಿಜಿಸ್ಟರು ಆಗಿಲ್ಲ, ದೂರು ಕೂಡ ರಿಜಿಸ್ಟರು ಆಗಿಲ್ಲ. ಅಲ್ಲಿರತಕ್ಕ ಇನ್ನೊಬ್ಬರು ಸೂಪರಿಂಡೆಂಟರು ವಿಚಾರಣೆ ಮಾಡುತ್ತಾರೆ, ಚಾರ್ಜನ್ನು ಫ್ರೇಂ ಮಾಡುತ್ತಾರೆ ಎಂದು ಹೇಳಿ ಅವರ ಮೇಲೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಆದರೆ ಮಧುಗಿರಿಯಲ್ಲಿ ಒಬ್ಬರು ಚೆನ್ನಾಗಿ ಕೆಲಸ ಮಾಡುತ್ತಿರುವ ಪೋಲೀಸು ಇನ್ಸ್‌ಪೆಕ್ಟರವರು, ಕೊಪ್ಪದವರು ಇದ್ದಾರೆ. ಅವರು ಯಾವುದೋ ಒಂದು ಸಣ್ಣ ತಪ್ಪು ಮಾಡಿದುದಕ್ಕೆ ಅವರನ್ನು ಸಸ್ಪೆಂಡು ಮಾಡಿದರು. ಆದರೆ ಇಲ್ಲ ನನ್ನನ್ನು ಮಾತನಾಡಿಸಲು ಯಾವ ಮಂತ್ರಿಗಳು ಬರುತ್ತಾರೆ, ನನ್ನನ್ನೇನು ಮಾಡುತ್ತಾರೆ ಎಂದು ಹೇಳುತ್ತಾರೆ.

Let the Anti-Corruption Officer come before me. I will receive Rs. 2,000 before him. ಎಂದು ಈ ಪೋಲೀಸ್ ಇನ್ಸ್‌ಪೆಕ್ಟರವರು ಹೇಳುತ್ತಾರೆ.

The I. G. P. has observed his conduct and the D. I. G. has observed his conduct. People have complained against such an incorrigible officer. If you don't deal with such incorrigible fellows, what can we expect from this Government?

ನಮ್ಮಲ್ಲಿ ಜೂಜಿನಿಂದ ಸುಮಾರು ಒಂಭತ್ತರಿಂದ ಹತ್ತು ಸಾವಿರದವರೆಗೆ ಸಂಪಾದಿಸುತ್ತಿದ್ದಾರೆ. ಇವರನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಜೂಜುಕಟ್ಟೆಗಳನ್ನು ಪತ್ತೆ ಹಚ್ಚಲು ಹೋಗುವ ಪೋಲೀಸು ಇನ್ಸ್‌ಪೆಕ್ಟರುಗಳು ಒಳ್ಳೆಯ ಆದಾಯ ಸಂಪಾದನೆ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಟ್ಟಿಲ್ಲದಿದ್ದರೆ ಒಬ್ಬ ಪೋಲೀಸು ಅಧಿಕಾರಿಗೆ ಸುಮಾರು 30 ಸಾವಿರ ರೂಪಾಯಿಗಳಷ್ಟು ಆದಾಯ ಎಲ್ಲಿಂದ ಬಂತು? ಕಳ್ಳಭಟ್ಟಿ ಸಾರಾಯಿ ತಯಾರ್ಮಾಡುವುದು ಇವೊತ್ತು ಮನೆ ಮನೆಗಳಲ್ಲಿಯೂ ನಡೆಯುತ್ತಿದೆ. ಯಾರು ಕುಡಿಯುತ್ತಿದ್ದಾರೋ ಅಂತಹವರೇ ಪೋಲೀಸು ಅಧಿಕಾರಿಗಳಾಗಿರುತ್ತಾರೆ. ಅವರೇನು ಮಾಡುತ್ತಾರೆ? ಯಾರಾದರೂ ಇಂತಹವನು ಕುಡಿದಿದ್ದಾನೆ ಎಂದು ಹೇಳುವುದಕ್ಕೆ ಬಂದರೆ ಅವನಿಂದ ನೂರು ರೂಪಾಯಿಗಳನ್ನು ಪಡೆದುಕೊಂಡು ಇವರೇನೂ ಕುಡಿದಿಲ್ಲ ಎಂದು ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತಾರೆ.

ಇನ್ನು ಬಸ್ಸು ಆಪರೇಟರುಗಳನ್ನು ಕೆಲವು ಪೋಲೀಸರು ಅನುಸರಿಸಿಕೊಂಡಿರುತ್ತಾರೆ, ಅಲ್ಲದೆ ಬಸ್ಸು ಆಪರೇಟರುಗಳೂ ಕೂಡ ಅವರಿಗೆ ಸರಿಯಾಗಿ ಮಾಮೂಲುಗಳನ್ನು ಕೊಟ್ಟು ಕೊಂಡು ಬೇಕಾದಷ್ಟು ಸಂಪಾದನೆ ಮಾಡುತ್ತಿರುತ್ತಾರೆ. ನಮ್ಮ ಊರಿನಲ್ಲಿ ಬಸ್ಸು ಆಪರೇಟರುಗಳಿಂದ ಪೋಲೀಸು ಶಾಖೆಯವರು ಹೇಗೆ ತೆಗೆದುಕೊಳ್ಳುತ್ತಾರೆಂದರೆ ಇನ್ಸ್‌ಪೆಕ್ಟರಿಗೆ 500, ಸಬ್ ಇನ್ಸ್‌ಪೆಕ್ಟರಿಗೆ 300, ಇತರ ಪೋಲೀಸು ಅಧಿಕಾರಿಗಳಿಗೆ 200 ಎಂದು ಖರ್ಚು ಮಾಡುತ್ತಾ ಲೆಕ್ಕಗಳನ್ನು ಬರೆಯುವಾಗ ಇವೆಲ್ಲ ಸಾದಿಲ್ವಾರು ಖರ್ಚುಗಳೆಂದು ಬರೆದು ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳಿಗೆ ಮೋಸ ಮಾಡುತ್ತಿರುತ್ತಾರೆ. ಏಕೆ ಹೀಗೆ ಮಾಡುತ್ತೀರಿ ಎಂದು ಬಸ್ಸು ಆಪರೇಟರುಗಳನ್ನು ಕೇಳಿದರೆ ನಾವುಗಳು ಹೀಗೆ ಮಾಮೂಲು ಕೊಡದೇ ಹೋದರೆ ನಮ್ಮ ವಾಹನಗಳನ್ನು ಓಡಿಸುವುದಕ್ಕೇ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಾರೆ. ಇದನ್ನೆಲ್ಲಾ ತಾವು ಸ್ವಲ್ಪ ಗಮನವಿಟ್ಟು ನೋಡಬೇಕು. ಇದು ಪೋಲೀಸು ಖಾತೆಯಲ್ಲಿ ನಡೆಯುತ್ತಿರುವಂತಹ ವಸ್ತು, ಎಲ್ಲರಿಗೂ ತಿಳಿದಂತ ವಿಚಾರ.

ಇನ್ನು ಹೆಂಡದ ವಿಚಾರವಾಗಿ ಹೇಳುವುದಾದರೆ ಹೆಂಡದ ಅಂಗಡಿಗಳು ಬೇಕಾದಷ್ಟು ಊರಿನ ಮಧ್ಯದಲ್ಲೇ ಆಗುತ್ತಿರುತ್ತವೆ. ನಡುಹಗಲಿನಲ್ಲೇ ಕುಡಿಯುತ್ತಿರುವುದನ್ನು ಪೋಲೀಸಿನವರು ನೋಡುತ್ತಲೇ ಇರುತಾರೆ. ಅವರನ್ನು ಅನುಸರಿಸಿಕೊಂಡು ಇವರುಗಳೂ ಕುಡಿಯುತ್ತಿರುತ್ತಾರೆ. ಇವೊತ್ತಿನ ಪೋಲೀಸು ರಾಜ್ಯದಲ್ಲಿ ಎರಡು ವರ್ಷಗಳಿಂದಲೂ ಕೂಡ ಹೆಂಡ ಕುಡಿಯುವುದು ಎನ್ನುವುದು ಬೇಕಾದ ಹಾಗೆ ಬೆಳೆಯುತ್ತಿದೆ.

ಪೋಲೀಸು ಖಾತೆಯ ಬಗ್ಗೆ ಇನ್ನು ಒಂದೇ ಒಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಅದು ಲಾರಿಗಳನ್ನು ಹತೋಟಿಗೊಳಿಸುವುದು. ಲಾರಿಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಓಡಾಡುತ್ತವೆ. ನಮಗೆ ಯಾವ ಕಾನೂನು ಅಡ್ಡಿ ಬರುವುದಿಲ್ಲ ಎಂದು ಅವರುಗಳು ಪೋಲೀಸು ಖಾತೆಯನ್ನು ಅನುಸರಿಸಿಕೊಂಡು ಹೋಗುತ್ತಾರೆ. ಇದರಿಂದ ಜನತೆಗೇನೂ ಉಪಯೋಗವಾಗುವುದಿಲ್ಲ ಮತ್ತು ಪೋಲೀಸು ಖಾತೆಗೂ ಗೌರವ ಬರುವುದಿಲ್ಲ. ಇನ್ನು ಟ್ಯಾಕ್ಸ್ ಆನ್ ವೆಹಿಕಲ್ಸ್ ಗಳ ಬಗ್ಗೆ ಈಗಾಗಲೇ ಅನೇಕ ಸ್ನೇಹಿತರುಗಳು ಇಲ್ಲಿ ಹೇಳಿದ್ದಾರೆ. ಇಲ್ಲಿ ಆರ್. ಟಿ. ಎಸ್. ಎನ್ನುವುದನ್ನು ಕಾರ್ಯಗತಮಾಡಿ ಎಷ್ಟು ವರ್ಷಗಳಾದವು? ಆ ಇಲಾಖೆಯಲ್ಲಿ ಆಫೀಸರುಗಳನ್ನು ತೆಗೆದು ನಾನ್ ಅಫಿಷಿಯಲ್

ಮೆಂಬರುಗಳನ್ನು ನೇಮಕ ಮಾಡಿ ಎಷ್ಟು ವರ್ಷಗಳಾದವು ? ನನ್ನ ಸ್ನೇಹಿತರಾದ ಶ್ರೀಮಾನ್ ಲಕ್ಕಪ್ಪನವರು ಮಾತನಾಡುತ್ತಾ It has become a Trade ಎಂದು ಹೇಳಿದರು. ತುಮಕೂರಿನಲ್ಲಿರುವ ಆರ್. ಟಿ. ಎ. ಅಧಿಕಾರಿಗಳು ಮತ್ತು ಅಲ್ಲಿರುವ ಇನ್ನಿತರ ಅಧಿಕಾರಿಗಳು ಇವರನ್ನು ಆದಷ್ಟು ಜಾಗ್ರತೆ ಅಲ್ಲಿಂದ ತೆಗೆಯಬೇಕು, ಇಂತಹ ದೂರುಗಳನ್ನು ತಡೆಯಬೇಕಾದರೆ ಇವರನ್ನು ಇಲ್ಲಿಂದ ವೀಡ್ ಔಟ್ ಮಾಡಬೇಕು. ಇನ್ನು ನಮ್ಮಲ್ಲಿರುವ ಸ್ಟೇಟು ಟ್ರಾನ್ಸ್‌ಪೋರ್ಟ್ ಅಥಾರಿಟಿ ಎನ್ನುವವರು ಯಾವಾಗಲೂ ಗಗನದಲ್ಲೇ ಇರುತ್ತಾರೆ. ಅವರುಗಳು ಎಷ್ಟು ಸತ್ಯಸಂಧರು, ಎಷ್ಟು ನ್ಯಾಯವಾದಿಗಳು ಎಂದರೆ, ಅವರು ಕೊಡಗು ಮತ್ತು ಮೈಸೂರಿನಿಂದ ತಮ್ಮ ಮನೆ ಕಟ್ಟಿಸಿಕೊಳ್ಳಲು ಎಷ್ಟು ಲಾರಿಗಳಷ್ಟು ಮರಮುಟ್ಟುಗಳನ್ನು ತರಿಸಿಕೊಂಡರು ಮತ್ತು ಅವರು ತರಿಸಿಕೊಂಡ ಲಾರಿ ಮಾಲೀಕರುಗಳಿಗೆ ಎಷ್ಟು ಬಾಡಿಗೆ ರೂಪದಲ್ಲಿ ಕೊಟ್ಟರು ಎನ್ನುವುದನ್ನು ಪರಿಶೀಲಿಸಿದರೆ ನಿಮಗೇ ಗೊತ್ತಾಗುತ್ತದೆ. ಅವರು ಎಲ್ಲಿ ಎಂತಹ ಸುಂದರವಾದ ಮನೆಯನ್ನು ಕಟ್ಟಿದ್ದಾರೆ ಎನ್ನುವುದನ್ನು ತಾವು ನೋಡಬಹುದು. ಇದನ್ನು ಹೇಳಿದರೆ ಇವರು ಒಳ್ಳೆಯ ಐ.ಎ.ಎಸ್. ಅಧಿಕಾರಿಗಳು ಇವರಿಗೆ 1,500 ರಿಂದ 1,800 ರೂಪಾಯಿಗಳವರೆಗೆ ಸಂಬಳ ಬರುತ್ತದೆ ಎಂದು ಹೇಳುತ್ತಾರೆ. ಹಾಗಿದ್ದರೂ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವಂತಹ ಕಟ್ಟಡವನ್ನು ಕಟ್ಟಿಸಿರುವುದನ್ನು ನೋಡಿದರೆ ಅಲ್ಲಿ ಎಂತಹ ಇಟ್ಟಿಗೆ ಹಾಗೂ ಸಿಮೆಂಟುಗಳನ್ನು ಪಯೋಗಿಸಿದ್ದಾರೆನ್ನುವುದು ಗೊತ್ತಾಗುತ್ತದೆ. ಪ್ರಜಾಪ್ರಭುತ್ವ ಬಂದು 17 ವರ್ಷಗಳಾದರೂ ಇಂತಹ ಒಬ್ಬರು ಸ್ಟೇಟ್ ಟ್ರಾನ್ಸ್‌ಪೋರ್ಟು ಕಮಿಷನರಾಗಿ ಮಾಡಿದ್ದಾರೆ.

ಇನ್ನು ಪಬ್ಲಿಸಿಟಿ ವಿಚಾರವಾಗಿ ಮಾತನಾಡುವಾಗ ಇದರಲ್ಲಿ ನೋಡಿದರೆ ಎಷ್ಟು ದುಡ್ಡು ಕೊಟ್ಟಿದ್ದಾರೆನ್ನುವುದನ್ನು ಹೇಳುವುದಕ್ಕೆ ಆಗುವುದಿಲ್ಲ. ಈ ಇಲಾಖೆಯಲ್ಲಿ ನ್ಯಾಯವಾಗಿ ಖಾಲಿಯಾಗಿರುವ ಯಾವ ಗೆಜೆಟೆಡ್ ಪೋಸ್ಟನ್ನೂ ಇನ್ನು ಭರ್ತಿ ಮಾಡಿಲ್ಲ. ಈ ಡಿಪಾರ್ಟುಮೆಂಟಿನಲ್ಲಿ ಒಬ್ಬರಾದರೂ ಪರ್ಮನೆಂಟಾದ ಅಧಿಕಾರಿಗಳು ಎರಡು ವರ್ಷಗಳವರೆಗೂ ಶ್ರೀಮಾನ್ ಸತ್ಯನ್ ರವರು ಹೋದಮೇಲೆ ಯಾರೂ ಕೂಡ 3–4 ತಿಂಗಳ ಕಾಲ ಅಥವಾ 6 ತಿಂಗಳ ಮೇಲೆ ಇರುತ್ತಿಲ್ಲ. ಅಲ್ಲಿಂದ ಬೇರೆ ಇಲಾಖೆಗೆ ಹೋಗಿಬಿಡುತ್ತಾರೆ. ಈಚೆಗೆ ಈ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಒಬ್ಬರು ಡೆಪ್ಯೂಟಿ ಕಮಿಷನರನ್ನು ಇಲ್ಲಿಗೆ ವರ್ಗ ಮಾಡಿದ್ದಾರೆ. ಈ ಇಲಾಖೆಯ ಮುಖ್ಯಾಧಿಕಾರಿಗಳ ಸ್ಥಾನವನ್ನು ಪಡೆಯುವುದಕ್ಕಾಗಿ ಇಲ್ಲಿಯೇ ಇರುವ ಒಬ್ಬ ಅಧಿಕಾರಿಗಳು (ಹೆಸರು ಹೇಳುವುದಕ್ಕೆ ಹೋಗುವುದಿಲ್ಲ) ಅವರು ಹಿಂದೆ ಮಾನ್ಯ ಅಣ್ಣಾರಾಯರು ವಿದ್ಯಾ ಮಂತ್ರಿಗಳಾಗಿದ್ದಾಗೆ ಅವರಿಗೆ ಪರ್ಸನಲ್ ಸೆಕ್ರೆಟರಿಗಳಾಗಿ ಕೆಲಸಮಾಡುತ್ತಿದ್ದವರು, ಪ್ರಯತ್ನ ಮಾಡುತ್ತಿದ್ದರು. ಅವರು ತಮ್ಮ ಜವಾಬುದಾರಿಗಳೇನು ಎನ್ನುವುದನ್ನೂ ತಿಳಿದುಕೊಂಡಿಲ್ಲ. ಇದಕ್ಕಾಗಿ ಇವರು ಪ್ರಯತ್ನ ಮಾಡುತ್ತಿರುವರೆಂಬ ವಿಚಾರ ಈಗ ನಮಗೆ ಒಳ್ಳೆಯ ಒಬ್ಬರು ಚೀಫ್ ಸೆಕ್ರೆಟರಿಗಳಾಗಿ ಬಂದಿರುವುದರಿಂದ ಅವರಿಗೆ ತಿಳಿದುಬಂತು. ಇಲ್ಲಿ ಹಿಂದೆ ಇದ್ದ ಅಧಿಕಾರಿಗಳನ್ನು ಬೇರೆ ಸ್ಥಾನಕ್ಕೆ ವರ್ಗಾಯಿಸಿದ ನಂತರ ಇಲ್ಲಿಗೆ ಇನ್ನೊಬ್ಬರು ಬರುವುದು ಸ್ವಲ್ಪ ನಿಧಾನವಾದುದರಿಂದ ಇದಕ್ಕಾಗಿ ಬೇಕಾದಷ್ಟು ಪ್ರಯತ್ನ ನಡೆಸಿದರು. ಆದರೆ ನಮ್ಮ ಚೀಫ್ ಸೆಕ್ರೆಟರಿಗಳು ಒಂದು ದಿನ ರಾತ್ರಿ ಸುಮಾರು 8 ಗಂಟೆಯ ಹೊತ್ತಿನಲ್ಲಿ ಮಂಡ್ಯದಲ್ಲಿರುವ ಜಿಲ್ಲಾಧಿಕಾರಿಗಳನ್ನು ಫೋನು ಮೂಲಕ ಕರೆಸಿಕೊಂಡು ಸಮಾಚಾರ ಹಾಗೂ ಪ್ರಸಾರ ಖಾತೆಯ ಮುಖ್ಯಾಧಿಕಾರಿಗಳ ಚಾರ್ಜನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಅದರಂತೆ ಅವರು ಈಗ ಬಂದು ಛಾರ್ಜನ್ನು ವಹಿಸಿಕೊಂಡಿದ್ದಾರೆ. ಸಮಾಚಾರ ಶಾಖೆಯಲ್ಲಿ ಎಷ್ಟು ಮಟ್ಟಿನ ಅನ್ಯಾಯಗಳು ನಡೆಯುತ್ತಿವೆ ಎನ್ನುವುದಕ್ಕಾಗಿ ಇದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಯಾರಾದರೂ ಅವರನ್ನು ಯಾವ ವಿಚಾರದಲ್ಲಾದರೂ ಹೋಗಿ ಕೇಳಿದರೆ ಅಸೆಂಬ್ಲಿಯಲ್ಲಿರುವ ಒಬ್ಬ ಮಂತ್ರಿಗಳಾಗಲೀ ಅಥವಾ ಒಬ್ಬರು ಮೆಂಬರಾಗಲೀ ಏನು ಮಾಡುತ್ತಾರೆ. ಏನೋ ಬರುತ್ತಾರೆ ಮಾತನಾಡುತ್ತಾರೆ.

It is all rash ; it is all rubbish ; he is after all a First Division Clerk and he is placed in charge of seniormost gazetted post.

ಹೀಗೆ ಅಪ್ರದಕ್ಷಿಣೆ ಮಾಡಿ ಬಂದಿರತಕ್ಕಂತಹ ಇವರು ಈ ಇಲಾಖೆಯಲ್ಲಿದ್ದರೆ ಏನು ಹೇಳುವುದು? ಇವರು ಗೆಜೆಟೆಡ್ಡು ಆಫೀಸರುಗಳಲ್ಲಿ ಜೂನಿಯರ್ ಮೋಸ್ಟ್ ಗೆಜೆಟೆಡ್ ಆಫೀಸರು, ಇವರಿಗೆ ಪ್ರಮೋಷನ್ನನ್ನು ಕೊಡಬೇಕೆಂದು ಎಲ್ಲ ಒಂದು ಜಾತಿಯ ಪಕ್ಷಪಾತದ ಮೇಲೆ ನಡೆಯುತ್ತಿದೆ. ನ್ಯಾಯವಾಗಿ ಕೊಡಬೇಕಾದವರಿಗೆ ಪುರಸ್ಕಾರ ಸಿಗುತ್ತಿಲ್ಲ. ಇವರು ಹಿಂದೆ ನಮ್ಮ ರಾಜ್ಯದ ಮಂತ್ರಿಗಳಾಗಿದ್ದ ಶ್ರೀಮಾನ್ ಅಣ್ಣಾರಾಯರ ಬಳಿ ಪರ್ಸನಲ್ ಸೆಕ್ರೆಟರಿಯಾಗಿ most incorrigible fellow who has got into that place ಆಗಿದ್ದಂತಹವರು, ಹಿಂದೆ ಇಲ್ಲಿದ್ದ ಮುಖ್ಯಾಧಿಕಾರಿಗಳನ್ನು ಗೋಲ್ಡ್ ಕಂಟ್ರೋಲ್ ಅಧಿಕಾರಿಗಳಾಗಿ ನೇಮಕ ಮಾಡಿದ ಮೇಲೆ ಇಲ್ಲಿಗೆ ಮತ್ತೊಬ್ಬರನ್ನು ನೇಮಕ ಮಾಡುವುದರಲ್ಲಿದ್ದಾಗ ಇಲ್ಲಿಗೆ ಇನ್ನೂ ಒಬ್ಬರು ಎಂದರೆ ಅವರು ಹಿಂದೆ ಮಾನ್ಯ ಮಂತ್ರಿಗಳಾದ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಶ್ರೀಮಾನ್ ಕೆ. ಎಫ್. ಪಾಟೀಲ್‌ರವರ ಬಳಿ ಕೆಲಸ ಮಾಡುತ್ತಿದ್ದಂತಹವರು, ಇವರಿಗೆ he is most suitable person ; most senior man who is drawing Rs. 350, and who is a most minority community man ಎಂದು ರೆಕಮೆಂಡ್ ಮಾಡಿದ್ದಾರೆ ಮತ್ತು ಹೀಗೆ ತಮ್ಮ ಜಾತಿಯವರಿಗೆ ಅನುಕೂಲ ಮಾಡಿಸಿಕೊಡಬೇಕು ಎಂದು ಮಾಡುತ್ತಿದ್ದಾರೆ, ಹೀಗಾದರೆ ಮೈನಾರಿಟಿ ಕಮ್ಯೂನಿಟಿಯಲ್ಲಿರುವವರನ್ನು ಯಾರು ಕೇಳುತ್ತಾರೆ ?

11-30 A.M.

ಈ ರೆಪ್ರೆಸೆಂಟೇಷನ್ ಈಗ ಸರ್ಕಾರದ ಮುಂದಿದೆ. ಸರ್ಕಾರದವರು ಈ ಬಗ್ಗೆ ಅಷ್ಟು ಅನ್ಯಾಯ ನಡೆಯಲಿಕ್ಕೆ ಅವಕಾಶ ಕೊಡಲಾರರು ಎಂದು ನಾನು ಭಾವಿಸಿದ್ದೇನೆ. ನಾನು ಇಷ್ಟನ್ನು ಹೇಳಿ ಆ ವಾರ್ತಾ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು ದೂರಮಾಡಿ ಅಲ್ಲಿಗೆ ಬೇರೆ ಬೇರೆ ಇಲಾಖೆಗಳಿಂದ ಬಂದಿರತಕ್ಕ ನೌಕರರನ್ನು ಅವರವರ ಇಲಾಖೆಗೆ ಟಿಕೆಟ್ ಕೊಟ್ಟು, ಇನ್ನು ಈ ಇಲಾಖೆಯಿಂದ ಸಾರ್ವಜನಿಕರಿಗೆ ಅನುಕೂಲ ಉಂಟಾಗುವಂತೆ ಕೆಲಸಕಾರ್ಯಗಳು ನಡೆಯುವಂತಾಗಲೆಂದು ಹೇಳಿ ನನಗೆ ಈ ಎರಡು ಡಿಮ್ಯಾಂಡ್‌ಗಳ ಮೇಲೆ ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನಾನು ಆಭಾರಿಯಾಗಿದ್ದೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. N. NAGHNOOR (Sampagaum).—Sir, I wish to make a few observations in regard to the difficulties experienced by the transport operators. By transport operators, I mean particularly the heavy vehicle owners Of late, transport is playing a very vital role in the economic life of our country. As we know, these truck operators are also competing with the railways and they are doing a good job in transporting goods in our country. So far, there is no organisation or association to represent their grievances before the Government. They have got lot of inconveniences and they experience so many difficulties in the matter of payment of taxes, plying on highways and so on. It is desirable that Government encourages an association or a sort of corporation so that they can ventilate their grievances through that body to the Government. Such a body can sit with Government and discuss their difficulties and solve them. For example, there are inter-State permits exchanged between Bombay Government and Mysore Government and between Madras Government and Mysore Government. I am told that about 300 permits are issued by the Mysore Government to operate in the Bombay Area, but unfortunately there is such a delay in the issue of these permits that the operators have to waste their time for a couple of months and actually idle away their time. If they ply their buses without permits, they have to experience a lot of inconvenience, particularly when they go in a neighbouring State. I suggest that the committee which is responsible to issue these inter-State permits does it in time so that there is no wastage of time. I am told that this committee does not meet for two or three months. This is a great handicap for the operators and the committee may be advised to sit in time and issue permits in time.

Secondly, of late the sales tax checking has been in vogue on all the borders of Mysore State. It is a happy step no doubt, but I am told that a lot of harassment is being caused at these check posts.

The transport operators contend that there is no such checking on the part of the railways and the heavy vehicular traffic operators have to undergo this ordeal. Sometimes if they are called upon to unload their goods, it is a big task for them to do so. I know that there are many unpleasant things that are going on in the form of smuggling and so on, but Government can think of ways and means to redress their grievances.

As I said at the outset, a lot of small inconveniences are being experienced by these operators. For example, a person who plies a truck has to take the R.C. book with him. There are a thousand and one formalities to be fulfilled by the operators at the Regional Transport Office level itself. For example, the owner of the vehicle has to credit the taxes, and so on. So, the police should be able to bear with these operators if the driver or the person in the vehicle is able to produce a receipt for the taxes having been paid. I am told that the taxes are to be paid before every quarter. Formerly the Mysore Government had given a grace period of 10 days for the payment of tax. That should be restored. I am told in Bombay the grace period is upto 20 days. The Government is very particular that the operator should pay the taxes before the stipulated period, but the Government has not made any arrangements to issue immediately the tokens. Token is something like a passport which is as much usefull as a passport for a person travelling in a foreign country. This token plays such an unpleasant role that if it is not with him, he has to bow his head to the police and may even have to stoop to corrupt practices. To avoid this, I am told, in Madras, as soon as the taxes are paid, immediately they are able to get the tokens. This arrangement may be tried in our State also.

ಶ್ರೀ ಎಸ್. ಅಂಜಯ್ಯ (ಕೊರಟಗೆರೆ).—ಮಾನ್ಯ ಅಧ್ಯಕ್ಷರೇ, ಈ ಪೋಲೀಸ್ ಮತ್ತು ಜೈಲ್ ಡಿಮ್ಯಾಂಡುಗಳ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಸ್ವಾಮಿ ತಾವು ಮಾತೆತ್ತಿದರೆ ಡೆಮಾಕ್ರೆಸಿ, ಆ ಕ್ರೆಸಿ, ಈ ಕ್ರೆಸಿ ಎಂದು ಏನೇನೋ ಹೇಳುತ್ತಿದ್ದೀರಿ. ಆದರೆ ವಾಸ್ತವವಾಗಿ ಏನು ನಡೆಯುತ್ತಿದೆ ಎಂಬುದನ್ನು ನೋಡಿದರೆ ಹರಿಜನರಿಗೆ ಆಗುತ್ತಿರುವ ಆಂಧೋಳನ, ಅವರ ಅವಸ್ಥೆ ಕಷ್ಟಗಳನ್ನು ಹೇಳತೀರದಾಗಿದೆ. ಇದನ್ನು ನೋಡಿದರೆ ಕೇವಲ ಮಾತಿನಲ್ಲಿ ಡೆಮಾಕ್ರೆಸಿ ಕಾರ್ಯದಲ್ಲಿ ಅರಿಸ್ಟಾಕ್ರೆಸಿ ನಡೆಯುತ್ತಿದೆ. ಇದು ಖಂಡಿತವಾಗಿಯೂ ಡೆಮಾಕ್ರಸಿಯಲ್ಲ. ಆಡಳಿತ ನಡೆಸುವವರಿಗೆ ಯಾವಾಗಲೂ ಈ ಅರಿಸ್ಟಾಕ್ರೆಸಿಯೊಂದೇ ಗೊತ್ತಿರುವುದರಿಂದ ಅವರಿಗೆ ಬಡವರ ಕಷ್ಟನಷ್ಟಗಳು ಗೊತ್ತಿಲ್ಲ. ಇಂದು ಹರಿಜನರ ಕಷ್ಟದ ಬಗ್ಗೆ ನನಗೆ ಗೊತ್ತಿರುವ ಒಂದು ಕೇಸನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಿಪಟೂರು ತಾಲ್ಲೂಕ್ ಸಿಂಗೇನಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಕುಳವಾಡಿಯನ್ನು ಕೊಲೆ ಮಾಡಲಾಗಿತ್ತು. ಆ ಸಂಬಂಧದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅಂದರೆ 31-10-1963ರಲ್ಲಿ ಐ.ಜಿ.ಪಿ., ಡಿ.ಐ.ಜಿ. ಮತ್ತು ಡಿ.ಎಸ್.ಪಿ. ಮತ್ತು ಡಿ.ಸಿ.ಗಳಿಗೆಲ್ಲಾ ಅರ್ಜಿ ಕೊಟ್ಟಿದ್ದಾಯಿತು. ಆದರೆ ಏನೂ ಆಗಲಿಲ್ಲ. ಹೀಗಾದರೆ ಹರಿಜನರ ರಕ್ಷಣೆ ಹೇಗಾಗುತ್ತಿದೆಯೆಂಬುದನ್ನು ತಾವೇ ಆಲೋಚಿಸಬಹುದು.

ಸ್ವಾಮಿ, ನಾನು ಖುದ್ದಾಗಿ ಹೋಗಿ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಆಗಿರತಕ್ಕವರನ್ನು ಕೇಳಿದೆ. ಐ. ಜಿ. ಪಿ. ಆಫೀಸಿನಲ್ಲಿ ಅವರ ಆಹ್ವಾನದ ಪ್ರಕಾರ ಸಕಾರಣವಾಗಿ ಕೇಳಿದೆ. ಐ.ಜಿ.ಪಿ. ಅವರು ಇದುವರೆಗೆ ಆ ವಿಚಾರದಲ್ಲಿ ಯಾವ ವಿಧವಾದಂಥ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿಲ್ಲ. ಸಂಬಂದಪಟ್ಟ ಮಂತ್ರಿಗಳೂ ಆ ವಿಚಾರದಲ್ಲಿ ಯಾವ ವಿಧವಾದ ಕ್ರಮವನ್ನು ತೆಗೆದುಕೊಂಡಿಲ್ಲ. ಅದನ್ನು ತನಿಖೆ ಮಾಡಬೇಕು

ಇನ್ನು ಒಂದು ಕೇಸು ನನ್ನ ಕ್ಷೇತ್ರದಲ್ಲಿಯೇ ನಡೆಯಿತು. ಹೋದ ತಿಂಗಳಲ್ಲಿ ನನ್ನ ಕ್ಷೇತ್ರಕ್ಕೆ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ರಾತ್ರಿ ಹೊತ್ತು ಕೊಲೆಯಾಗಿದೆ. ಒಂದು ಮನೆಯಲ್ಲಿ

(ಶ್ರೀ ಎಸ್. ಅಂಜಯ್ಯ)

ಒಬ್ಬ ವ್ಯಕ್ತಿಯನ್ನು ತಿವಿದ ಪ್ರಸಂಗ ನಡೆಯಿತು. ಅಲ್ಲಿನ ಪೋಲೀಸ್ ಅಧಿಕಾರಿಯನ್ನು, ಅವರಿಬ್ಬರನ್ನು ಹಿಡಿದು ಎಫ್. ಐ. ಆರ್. ಕೊಟ್ಟಿದ್ದೀರಾ ಎಂದು ಕೇಳಿದೆ. ಸ್ಟೇಟ್‌ಮೆಂಟ್ ಏನೋ ಕೊಟ್ಟಿತ್ತು. ಆದರೆ ಅವನು ಯಾರಿಗೋ ಹೇಳಿಕೊಟ್ಟು ದುಡ್ಡುಕೊಟ್ಟು ತಿವಿಸಿದನೆಂದು ಗೊತ್ತಾಯಿತು. ಮಾರನೆಯ ದಿವಸ ನಿಮ್ಮ ಕಾಂಗ್ರೆಸ್ ಪುಡಾರಿಗಳು ಏನು ಮಾಡಿದರು, ಅವನೇನಾದರೂ ಸಿಕ್ಕಿದರೆ ನಮ್ಮ ಪುಡಾರಿ ಕೆಲಸ ಹೋಗುತ್ತದೆಂದು ಹೇಳಿದ್ದಾನೆ. ಆದ್ದರಿಂದ ಎಫ್. ಐ. ಆರ್. ಚೆನ್ನಾಗಿ ತನಿಖೆ ಮಾಡಬೇಕಾಗಿದೆ. ಅಲ್ಲಿರತಕ್ಕ ಸಬ್‌ಇನ್ಸ್‌ಪೆಕ್ಟರು ದುಂಡಾವೃತ್ತಿಯಿಂದ ನಡೆಯುತ್ತಿದ್ದಾನೆ. ಅವನಿಗೆ ಸರಿಯಾದ ಶಿಕ್ಷೆಯಾಗುತ್ತಿಲ್ಲ. ಆ ಸಬ್‌ಇನ್ಸ್‌ಪೆಕ್ಟರಿಗೆ ಎಷ್ಟುಸಾರಿ ಹೇಳಿದರೂ ಅವನು ಲಂಚಕೋರತನವನ್ನು ಬಿಟ್ಟಿಲ್ಲ. ಎಲ್ಲಾದರಲ್ಲೂ ಅಸತ್ಯವಾಗಿ ವರ್ತಿಸುತ್ತಿದ್ದಾನೆ. ಬಹಳ ಕರಪ್ ಆಗಿದ್ದಾನೆ. ಕೊಡಿಗೇನ ಹಳ್ಳಿಯಲ್ಲಿ ನನ್ನ ಪಕ್ಷದವರ ಮೇಲೆ ಧುಂಡಾವೃತ್ತಿ, ದಾಂಧಲೆ ಮಾಡಿಸಿ ಅನೇಕರನ್ನು ಹೊಡೆದು ಕೋರ್ಟಿಗೆ ಎಳೆದಿದ್ದಾನೆ. ಇದನ್ನು ನೋಡಿದರೆ ಪೋಲೀಸ್ ಇಲಾಖೆಯಲ್ಲಿ ನ್ಯಾಯ, ನಿಷ್ಠೆ, ಧರ್ಮ, ನೀತಿಯೇನೂ ಇಲ್ಲವೆಂದು ಕಾಣಿಸುತ್ತದೆ. ಆದ್ದರಿಂದ police people are the first rate corrupt people. ಇವರು ಏಕೆ ಇಷ್ಟು ಕರಪ್‌ಷನ್ ಮಾಡುತ್ತಾರೋ ಗೊತ್ತಿಲ್ಲ. ಇವರಿಗೆ ಎಲ್ಲೋ lack of moral courage ಇದೆ. ನಿಜವಾಗಿ ಇವರಿಗೆ ನಯ, ನೀತಿ, ಭಯ, ದೇವರಲ್ಲಿ ಭಕ್ತಿ ಯಾವುದೂ ಇಲ್ಲ. ಆದ್ದರಿಂದಲೇ ಇವರು ಇಷ್ಟು ಅಧೋಗತಿಗೆ ಕಾರಣರಾಗಿದ್ದಾರೆ. ಲಿಟ್ರಸಿ-ಸರಿಯಾದ ವಿದ್ಯೆ ಇವರಿಗಿಲ್ಲ. ಅದಕ್ಕಾಗಿ ವರ್ಷಾನುಗಟ್ಟಲೆ ಪೋಲೀಸ್ ಕಾನ್‌ಸ್ಟೇಬಲ ನಾಗಿಯೇ ಉಳಿಯುವುದು. ಅಂತಹವನಿಗೆ ಉನ್ನತಮಟ್ಟದ ಅಧಿಕಾರ ಕೊಟ್ಟರೆ ಕಳ್ಳತನ ಮಾಡುವುದನ್ನು ಅವನೇ ಹೇಳಿಕೊಡುವುದು, ಕೊಲೆಮಾಡುವುದು, ಕಳ್ಳರನ್ನು ಸಾಗಿಸುವುದು, ಇವೆಲ್ಲಾ ನಡೆಯುತ್ತದೆ. ನಿಜವಾಗಿ ಕಳ್ಳತನಕ್ಕೆ ಅವಕಾಶವಾಗಬೇಕಾದರೆ ಇವರಲ್ಲಿರತಕ್ಕ ಇಲ್ಲಿಟ್ರಸಿಯೇ ಮೂಲ ಕಾರಣ. ಮೂರನೆಯದಾಗಿ ಅವರಿಗೆ ಕೊಡತಕ್ಕ ಸಂಬಳ ಸಾಲದು. ಆದ್ದರಿಂದ ಪ್ರತಿಯೊಬ್ಬ ಕಾನ್‌ಸ್ಟೇಬಲ್ಲಿಗೂ ಕೊನೆಯಪಕ್ಷ ನೂರು ರೂಪಾಯಿಗಳಾದರೂ ಸಂಬಳ ಇರಬೇಕೆಂದು ನಾನು ಹೇಳುತ್ತೇನೆ. ಉದಾಹರಣೆಗೆ ಹೇಳ ಬೇಕಾದರೆ ನನ್ನ class mate ಒಬ್ಬ ಸಬ್‌ಇನ್ಸ್‌ಪೆಕ್ಟರ್ ಆಗಿದ್ದಾನೆ. ಕೇವಲ 150 ರೂಪಾಯಿಗಳ ಸಂಬಳ. ಆರುಜನ ಮಕ್ಕಳನ್ನು ಓದಿಸಬೇಕಾಗಿದೆ. ಅವರೂ ಸಹ ನಿಮ್ಮಂತೆಯೇ ವಿದ್ಯಾವಂತರಾಗಬೇಡವೇ ? ಅಷ್ಟು ಕಡಮೆ ಸಂಬಳದಲ್ಲಿ ಏನು ಮಾಡುವುದಕ್ಕೆ ಸಾಧ್ಯ ? He is a Sub-Inspector in the Police Station. ಇದರಿಂದಲೇ ಅವನು ಕರಪ್‌ಷನ್ನಿಗೆ ಹೋಗಲೇಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ದಯಮಾಡಿ ಪ್ರತಿಯೊಬ್ಬ ಪೋಲೀಸ್ ನೌಕರನಿಗೆ ಕೊನೆಯಪಕ್ಷ ನೂರು ರೂಪಾಯಿಗಳ ಸಂಬಳವಾದರೂ ಇರುವ ಹಾಗೆ ವ್ಯವಸ್ಥೆ ಮಾಡಬೇಕು. ಆಗ ಒಂದು ನೀತಿ, ನಯ, ನಿಷ್ಠೆಯಿಂದ ಬಾಳಲು ಅವರಿಗೆ ಅವಕಾಶವಾಗುತ್ತದೆ.

ಇನ್ನು ಅವರಿಗೆ lack of quarters ಇರುವುದು ಬಹಳ ಶೋಚನೀಯ. ಅವರಿಗೆ ಸರಿಯಾಗಿ ವಾಸಮಾಡುವುದಕ್ಕೆ ಕಟ್ಟಡಗಳಿಲ್ಲ, ಮನೆಗಳಿಲ್ಲ, ಅಂದಮೇಲೆ ಅವರು ಯಾವ ರೀತಿ ದರೋಡೆ, ದೂಂಡಾವೃತ್ತಿ, ಕಳ್ಳತನ, ಅತ್ಯಾಚಾರ, ಕೊಲೆ ಕೇಸುಗಳನ್ನು ಪತ್ತೆ ಮಾಡಬೇಕು ? ಆದ್ದರಿಂದ ಪೋಲೀಸಿನವರಿಗೆ ಪ್ರತ್ಯೇಕವಾಗಿ ಕ್ವಾರ್ಟರುಗಳನ್ನು ಕಟ್ಟಿಸಿ ಕೊಡಬೇಕು. ಅದಕ್ಕೆ ಬೇಕಾದಂಥ ಸಲಕರಣೆಗಳನ್ನು ಒದಗಿಸುವುದು ಸರ್ಕಾರದವರ ಕರ್ತವ್ಯ.

ಇನ್ನು difference between Kaki dress and Khadar dress ವಿಷಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಇವೆರಡಕ್ಕೂ ಏನು ವ್ಯತ್ಯಾಸವೆನ್ನುವುದನ್ನು ನೋಡಿದರೆ ಪೋಲೀಸಿನವರ Kaki dress ಅಂದರೆ ಅವರ ಟೋಪಿಮೇಲೆ ನಂಬರ್ ಮತ್ತು ಬ್ಯಾಡ್ಜ್ ಇರುತ್ತದೆ. ಆದರೆ ಕಾಂಗ್ರೆಸ್ಸಿನವರ ಖದ್ದರ್ ಟೋಪಿ ಮೇಲೆ ನಂಬರ್, ಬ್ಯಾಡ್ಜ್ ಎರಡೂ ಇರುವುದಿಲ್ಲ. ಇವರು ಬ್ಯಾಡ್ಜ್ ನಂಬರ್ ಇಲ್ಲದೆಯೇ ದರೋಡೆ ಮಾಡುತ್ತಾರೆ. ಅವರು ಟೋಪಿ ಮೇಲೆ ಬ್ಯಾಡ್ಜ್ ಮತ್ತು ನಂಬರ್ ಹಾಕಿಕೊಂಡು ಬೇರೆ ಜನರಿಂದ ಖೂನಿ, ಕಳ್ಳತನ, ದರೋಡೆ ಮಾಡಿಸುತ್ತಾರೆ. ಆದ್ದರಿಂದ ಖದ್ದರ್ ಡ್ರೆಸ್ಸಿಗೂ ಕಾಕಿ ಡ್ರೆಸ್ಸಿಗೂ ಏನೂ ವ್ಯತ್ಯಾಸವಿಲ್ಲ. ಇವರ ಒಂದು ಅನ್ಯಾಯ, ಅಕ್ರಮಗಳಿಂದಲೇ ಈ ಇಲಾಖೆ ಇಷ್ಟು ಅಧೋಗತಿಗೆ ಇಳಿಯಲು ಕಾರಣವಾಗಿದೆ. ಟೋಪಿ ಸರ್ಕಾರದವರು ಬಹಳ ಅನ್ಯಾಯವಾಗಿ ಕೆಲಸ ಮಾಡುತ್ತಿರುವುದರಿಂದ ನಾನು ಕಠೋರವಾಗಿ ಖಂಡಿಸಬೇಕಾಗುತ್ತದೆ.

ಇನ್ನು abuse of powers by police officers ವಿಷಯವಾಗಿ ಹೇಳುವುದಾದರೆ ಕೆಲವು ಜನ ಪೋಲೀಸ್ ಅಧಿಕಾರಿಗಳು ಸಿವಿಲ್ ಡ್ರೆಸ್ ಹಾಕಿಕೊಳ್ಳುತ್ತಾರೆ. ಇದರಿಂದ ಪೋಲೀಸ್ ಕಾನ್‌ಸ್ಟೇಬಲ್‌ಗೆ ಇರತಕ್ಕ ಯೂನಿಫಾರಂ ತೆಗೆಸಿ ಸಿವಿಲ್ ಡ್ರೆಸ್ ಹಾಕಿಸಿಕೊಂಡು ಕೆಲವುಜನ ಪೋಲೀಸ್ ಅಧಿಕಾರಿಗಳು ತಮ್ಮ ತಮ್ಮ ಮನೆಗಳಲ್ಲಿ ಸರ್ವಿಸ್ ಮಾಡಿಸಿಕೊಂಡು ಅವರಿಂದ ಹಾಲು,

ತರಕಾರಿ ತರುವುದಕ್ಕೆ ಇಟ್ಟುಕೊಂಡಿದ್ದಾರೆ. ಇದೇ ಅವರ ಸರ್ವಿಸ್; ಈ ರೀತಿಯಾಗಿ ಅವರ ಸರ್ವಿಸ್ಸನ್ನು ಉಪಯೋಗಿಸುತ್ತಿದ್ದಾರೆ, ಈ ರೀತಿಯಾಗುವುದರಿಂದ ಜನರಿಗೆ ರಕ್ಷಣೆ ಎಲ್ಲಿಂದ ಬರಬೇಕು ? ದರೋಡೆ: ಕಳ್ಳತನಗಳು ಬೆಳಿಗ್ಗೆ ಮಧ್ಯಾಹ್ನ, ಸಂಜೆ, ರಾತ್ರಿ ಎಲ್ಲಾ ಕಾಲಗಳಲ್ಲಿಯೂ ನಡೆಯುತ್ತಿರುತ್ತವೆ. ನನ್ನ ಸ್ನೇಹಿತರಾದ ಶ್ರೀಮಾನ್ ದೇವಯ್ಯನವರು ಇರುವಕಡೆ ನಾಗಪ್ಪ ಬ್ಲಾಕಿನಲ್ಲಿ ಒಂದುಸಾರಿ ಮಟಮಟ ಮಧ್ಯಾಹ್ನದಲ್ಲಿ house breaking ಆಯಿತು. ಆಗ ಪೋಲೀಸ್ ಅಧಿಕಾರಿಗಳು ತಮ್ಮ ಕೈಕೆಳಗೆ ಇರತಕ್ಕ ಪೋಲೀಸ್ ಕಾನ್ಸ್ಟೇಬಲ್‌ಗಳನ್ನು ಅವರ omestic affairsಗೆ ಉಪಯೋಗಿಸಿದರೆ ಹೇಗೆತಾನೇ ಅವರು ಜನರಿಗೆ ರಕ್ಷಣೆ ಕೊಡಬೇಕು ?

ಇನ್ನು Eradication of Untouchability ವಿಷಯವಾಗಿ ಹೇಳಬೇಕಾದರೆ ಸರ್ಕಾರದವರು ಇದನ್ನು ಹೋಗಲಾಡಿಸುತ್ತಿದ್ದೇವೆಂದು ಹೇಳುತ್ತಿರುವುದನ್ನು ನೋಡಿದರೆ ಅದು ಪುಸ್ತಕದ ಬದನೇಕಾಯಿಯಂತಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಈ Untouchability ಕಾನೂನನ್ನು ಉಳಿಸಿ ರಕ್ಷಣೆ ಮಾಡಬೇಕಾದರೆ ಕೊನೆಯಪಕ್ಷ ಸಬ್-ಇನ್ಸ್‌ಪೆಕ್ಟರ್ ರ್‍ಯಾಂಕಿನಲ್ಲಿರತಕ್ಕ ಒಬ್ಬ ಹರಿಜನ ಅಧಿಕಾರಿಯನ್ನು ನೇಮಿಸಬೇಕು. ಆಗ ಅತನು ಧೈರ್ಯವಾಗಿ ಹರಿಜನರಿಗೆ ಆಗುತ್ತಿರತಕ್ಕ ಅನ್ಯಾಯವನ್ನು ಪೂರ್ತಿಯಾಗಿ ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾನೆ. ಈ ಕಾರಣದಿಂದ ದಯವಿಟ್ಟು ಇನ್ನುಮುಂದೆ ಪ್ರತಿಯೊಂದು ಜಿಲ್ಲೆಯಲ್ಲೂ ಸಬ್‌ಇನ್ಸ್‌ಪೆಕ್ಟರ್ ರ್‍ಯಾಂಕಿನಲ್ಲಿರತಕ್ಕ ಹರಿಜನ ಆಫಿಸರನ್ನು ನೇಮಿಸಿದರೆ ನಿಜವಾಗಿ ಈ Untouchabilityಯನ್ನು ಹೋಗಲಾಡಿಸಬಹುದು. ಅದಕ್ಕಾಗಿ Untouchability ಬಗ್ಗೆ ಬೈಲಾಗಳನ್ನೇ ಮಾಡುವುದು ಉತ್ತಮ. ಇಲ್ಲದಿದ್ದರೆ ಈ ಹರಿಜನರನ್ನು ಇಂತಹ ಹುದ್ದೆಗಳಿಗೆ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು promotion to Harijans in Police Department ವಿಷಯವಾಗಿ ಹೇಳುವುದಾದರೆ ಈ ಪೋಲೀಸ್ ಖಾತೆಯಲ್ಲಿ ಅನೇಕ ಹರಿಜನರಿಗೆ ಮುಂದಿನ ಉದ್ಯೋಗ ದೊರಕುತ್ತಾ ಇಲ್ಲ. ಸುಮಾರು 10-15-20 ವರ್ಷಗಳ ಸರ್ವಿಸ್ ಆಗಿದ್ದರೂ ಅವರಿಗೆ ಪ್ರೊಮೋಷನ್ ಆಗುತ್ತಾ ಇಲ್ಲ. ಉದಾಹರಣೆಗಾಗಿ ಹೇಳುವುದಾದರೆ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ತಿಪ್ಪನಹಳ್ಳಿಯಲ್ಲಿರತಕ್ಕ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್, 22 ವರ್ಷಗಳ ಸರ್ವಿಸ್ ಆಗಿದೆ. ಅವನಿಗೆ ಹೆಡ್ ಕಾನ್‌ಸ್ಟೇಬಲ್ ಕೆಲಸ ಕೊಡಬೇಕೆಂದು 10-12 ವರ್ಷಗಳಿಂದಲೂ ಅರ್ಜಿಗಳನ್ನು ಬೇಕಾದಷ್ಟು ಹಾಕುತ್ತಿದ್ದಾನೆ. ಇವತ್ತು ಕೊಡುತ್ತೇನೆ, ನಾಳೆ ಕೊಡುತ್ತೇನೆ, ನಾಳೆ ಬಾ ಎಂದು ಹೇಳುತ್ತಲೇ ಇರುತ್ತಾರೆ.

ಉಪಾಧ್ಯಕ್ಷರು.—ಇಲ್ಲಿ individual servants ವಿಷಯವನ್ನು ಹೇಳುವುದು ಸರಿಯಲ್ಲ.

ಶ್ರೀ ಎಸ್. ಅಂಜಯ್ಯ.—ಆತನಿಗೆ ಜೂನಿಯರ್ಸ್ ಆಗಿ 10-15 ವರ್ಷಗಳ ಸರ್ವಿಸ್ ಮಾಡಿರುವವನಿಗೆ ಪ್ರೊಮೋಷನ್ ಕೊಟ್ಟಿರುವಾಗ 20-22 ವರ್ಷ ಸರ್ವಿಸ್ ಆಗಿರುವವನನ್ನು ಹಾಗೆಯೇ ಇಟ್ಟಿದ್ದಾರೆ. ಈ ಸಭೆಯ 209 ಸದಸ್ಯರಲ್ಲಿಗುವ ಹರಿಜನ ಸದಸ್ಯರೆಲ್ಲರೂ ಕೇಳಿದರೂ ಹಾಗೆಯೇ ಅ ಪ್ರಶ್ನೆ ಇದೆ. ಆದ್ದರಿಂದ ಈ ವಿಚಾರವನ್ನು ತೀವ್ರವಾಗಿ ಪರಿಶೀಲನೆಮಾಡಿ ಅವನಿಗೆ ಪ್ರೊಮೋಷನ್ ಕೊಡಿಸಬೇಕೆಂದು ನನ್ನ ಪ್ರಾರ್ಥನೆ.

ಇನ್ನು recruitment of rules in the Police Department. ಪೋಲೀಸ್ ಇಲಾಖೆಯಲ್ಲಿ ಹರಿಜನರಿಗೆ ಕೆಲಸ ಕೊಡುವ ವಿಷಯವಾಗಿ ಮಾತನಾಡಿಸುತ್ತೇನೆ. ಪೋಲೀಸ್ ಇಲಾಖೆಯಲ್ಲಿರತಕ್ಕ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ 5'6'' ಎತ್ತರವಿರಬೇಕು. ಆ ಎತ್ತರದಲ್ಲಿ ಯಾವ ಹರಿಜನ ಸಿಕ್ಕುವುದು ಅಪರೂಪ. ದಯವಿಟ್ಟು ಅವರ ಎತ್ತರವನ್ನು 5'2'' ಇರುವಹಾಗೆಯೂ 90 ರಿಂದ 100 ಪೌಂಡುಗಳಷ್ಟು ತೂಕ ಇರುವಹಾಗೆ ಮತ್ತು ಚೆಸ್ಟ್ 30ರಿಂದ 32 ಅಂಗುಲವುಳ್ಳದ್ದಾಗಿರಬೇಕು. ಇಂತಹವರನ್ನು ಸೆಲೆಕ್ಟ್ ಮಾಡಿದರೆ ಕೆಲವಾರು ಹರಿಜನರು ಕಾನ್ಸ್ಟೇಬಲ್ಲಾಗಿ ಕೆಲಸ ಮಾಡುವುದಕ್ಕೆ ಲಾಯಕ್ಕಾಗಿರುತ್ತಾರೆ. ಅವರ ಪ್ರಮಾಣ ಕೇವಲ ಶೇ. 15ರಷ್ಟು ಆಗಿದೆ. ಏಕೆಂದರೆ they are underfed. ನಮ್ಮಂತೆ, ನಿಮ್ಮಂತೆ ಚೆನ್ನಾಗಿ ಇರುವುದಕ್ಕಾಗುವುದಿಲ್ಲ. They are underfed employees. ಆದ್ದರಿಂದ ಅವರನ್ನು ಈ ಇಲಾಖೆಯಲ್ಲಿ ನೇಮಕಮಾಡುವಾಗ ಸ್ವಲ್ಪಮಟ್ಟಿಗೆ ಈ ಕಾನೂನುಗಳನ್ನು ಸಡಲಿಸಬೇಕು.

ಅವರಿಗೆ ಎಜುಕೇಷನ್ ಕ್ವಾಲಿಫಿಕೇಷನ್ ಕೊನೆಯಪಕ್ಷ ಲೋಯರ್ ಸೆಕೆಂಡರಿ ಓದಿದ್ದರೆ ಸಾಕು. ಅಂಥವರಿಗೆ ಕಾನ್ಸ್ಟೇಬಲ್ ಕೆಲಸ ಕೊಡಬೇಕು ಎನ್ನತಕ್ಕಂಥ ಕಾನೂನನ್ನು ಜಾರಿಗೆ ತರಬೇಕು.

ಇನ್ನು ಜೈಲಿನ ವಿಷಯವನ್ನು ಮಾತನಾಡುತ್ತೇನೆ. ಜೈಲಿನ ಸೂಪರಿನ್‌ಟೆಂಡೆಂಟ್ ವೃತ್ತಿಗೆ ಬರತಕ್ಕವರು ಸೈಕಾಲಾಜಿ ತೆಗೆದುಕೊಂಡು ಪಾಸು ಮಾಡಿರಬೇಕು. ಆ ರೀತಿ ಸೈಕಾಲಜಿಯನ್ನು ತೆಗೆದುಕೊಂಡು ಗ್ರ್ಯಾಜುಯೇಟ್ ಆಗಿರತಕ್ಕವರನ್ನು ಜೈಲಿನ ಸೂಪರಿನ್‌ಟೆಂಡೆಂಟ್ ಕೆಲಸಕ್ಕೆ ನೇಮಕ ಮಾಡಿದರೆ ಅವರು ಜೈಲಿನಲ್ಲಿರತಕ್ಕ ಖೈದಿಗಳ ಕಷ್ಟನಿಷ್ಠೂರಗಳನ್ನು ಮತ್ತು ಅವರ ಮನೋಭಾವ ಏನು ಎಂಬುದನ್ನು ಅರಿತುಕೊಳ್ಳುವುದಕ್ಕೆ ಅವರು ಅರ್ಹರಾಗುತ್ತಾರೆ. ಆದರಿಂದ ಖೈದಿಗಳ ಒಂದು

(ಶ್ರೀ ಎಸ್. ಅಂಜಯ್ಯ)

ರಿಫಾರಮ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಅನುಭವ ಇಲ್ಲದೆ ಇರತಕ್ಕ ಯಾರೋ ಒಬ್ಬರನ್ನು ಜೈಲಿನ ಸೂಪರಿನ್‌ಟೆಂಡೆಂಟ್ ಆಗಿ ನೇಮಕ ಮಾಡಿದರೆ ಅವರು ಜೈಲಿನ ಸುಧಾರಣೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ರಿಮ್ಯಾಂಡ್ ಹೋಮ್ಸ್ ಮತ್ತು ಜೈಲಿನಲ್ಲಿ ನೇಮಕ ಮಾಡುವ ಅಧಿಕಾರಿಗಳು ಸೈಕಾಲಾಜಿಯನ್ನು ಪಾಸು ಮಾಡಿರಬೇಕು. ಅಂಥವರನ್ನು ನೇಮಕ ಮಾಡಿದರೆ ರಿಮ್ಯಾಂಡ್ ಹೋಮಿನಲ್ಲಿರತಕ್ಕ ಖೈದಿಗಳನ್ನು ರಿಫಾರಮ್ ಮಾಡಲು ಅನುಕೂಲವಾಗುತ್ತದೆ. ಮತ್ತು ಅವರು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಇನ್ನು ಮೂವಬಲ್ ಪೋಲಿಸಿನ ವಿಷಯ. ಈಗ ಬೆಂಗಳೂರಿನಲ್ಲಿ ಮೂವಬಲ್ ಪೋಲೀಸ್ ಇದೆ. ಈಗ ಅಲ್ಲಿರತಕ್ಕ ಪೋಲೀಸಿನವರಿಗೆ ಸಾಕಷ್ಟು ಕೆಲಸ ಇಲ್ಲ. ಅವರು ನೊಣ ಹೊಡೆದುಕೊಂಡಿರುತ್ತಾರೆ. ಸುಮ್ಮನೆ ಅದಕ್ಕೆ ವ್ಯಥಾ ಖರ್ಚು ಏತಕ್ಕೆ ? ಬೆಳಗಿನ ಹೊತ್ತು ಸುಮ್ಮನೆ ಕುಳಿತುಕೊಂಡಿದ್ದು ಹೋಗುತ್ತಾರೆ. ರಾತ್ರಿಹೊತ್ತು ಹಾಗೆಯೇ ಕುಳಿತುಕೊಂಡಿದ್ದು ಹೋಗುತ್ತಾರೆ. ಈ ಮೂವಬಲ್ ಪೋಲೀಸಿನಿಂದ ಏನೂ ಉಪಯೋಗವಿಲ್ಲ. ಶುದ್ಧ ಅನ್ಯಾಯ. ಇಲಾಖೆಗೂ ಲಾಸಾಗುತ್ತದೆ. ಇಷ್ಟು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಗೃಹಸಚಿವರು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಒಂದೆರಡು ಮಾತುಗಳನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಆಯವ್ಯಯ ಪಟ್ಟಿಯಲ್ಲಿ ಪೋಲೀಸು ಇಲಾಖೆಗೆ ಸಂಬಂಧಪಟ್ಟ ಹಾಗೆ ಏನು ಅಚ್ಚು ಹಾಕಿಸಿದ್ದಾರೆಯೋ ಅದರಲ್ಲಿ 1962-63ರಲ್ಲಿ ಈ ಬಾಬಿಗೆ ಒದಗಿಸಿದ್ದ ಹಣದ ವಿಷಯವನ್ನೂ ಸಹ ಹೇಳಿದ್ದಾರೆ. ಅದು ಬಹುಶಃ ಅಚ್ಚಿನ ತಪ್ಪು ಎಂದು ನಾನು ತಿಳಿದುಕೊಂಡಿದ್ದೇನೆ. ನಿಡೋಣಿಯಲ್ಲಿ ನಡೆದ ಘಟನೆಯನ್ನು ಬಿಟ್ಟರೆ ಮತ್ತೆ ಯಾವ ಘಟನೆಯೂ ನಡೆದಿಲ್ಲ ಎಂದು ವರದಿ ಮಾಡಿದ್ದಾರೆ ಈಚೆಗೆ ಇಡಪನೂರಿನಲ್ಲಿ ಸಾಮೂಹಿಕ ಬೆಂಕಿಯ ಅನಾಹುತಕ್ಕೆ ಒಳಗಾಗಿ ಜನಗಳು ಸತ್ತರು. ಈ ವಿಷಯದಲ್ಲಿ ರಾಯಚೂರು ಜಿಲ್ಲೆಯ ಪೋಲೀಸಿನವರು ಏನು ಮಾಡುತ್ತಿದ್ದರು ? ಎಷ್ಟು ದಿವಸಗಳಿಂದ ವೈಷಮ್ಯ ಇತ್ತು. ಅವರು ಅಷ್ಟೊಂದು ಪ್ರಕೋಪಕ್ಕೆ ಹೋಗುವವರೆಗೂ ಬಿಡುವಷ್ಟು ಪೋಲೀಸಿನವರು ಅಜಾಗರೂಕತೆಯಿಂದ ಇದ್ದರೆ ಈ ಪ್ರಶ್ನೆಗೆ ರಾಜ್ಯದ ಪೋಲೀಸು ಇಲಾಖೆ ಇದರ ಬಗ್ಗೆ ಹೆಚ್ಚಿನ ಗಮನವನ್ನು ವಹಿಸಬೇಕಾಗುತ್ತದೆ. ಮತ್ತು ಒಳ್ಳೆಯ ರೀತಿಯಲ್ಲಿ ಕಾನೂನು ಪರಿಪಾಲನೆ ಮಾಡುತ್ತಿಲ್ಲ ಎಂದು ಹೇಳುವುದಕ್ಕೆ ಇದು ಒಂದು ದೊಡ್ಡ ದೃಷ್ಟಾಂತವಾಗಿದೆ.

ಇನ್ನು 4-1-1964ರಲ್ಲಿ ಬೆಂಗಳೂರಿನಲ್ಲಿ ಒಂದು ಗೋಲೀಬಾರ್ ಘಟನೆ ನಡೆಯಿತು. ಈ ಸಂದರ್ಭದಲ್ಲಿ ನಮಗೆ ಗೊತ್ತಿರುವ ಹಾಗೆ ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಡ್ರೈವರ್ ಅನ್ನು ಒಬ್ಬ ಸಬ್‌ಇನ್ಸ್‌ಪೆಕ್ಟರು ಅನುಚಿತವಾದ ರೀತಿಯಲ್ಲಿ ಒಂದು ಬಗೆಯಿಂದ ವರ್ತಿಸಿದ ಮತ್ತು ಅವನನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆದ ಎಂದು ವರದಿಗಳು ಬಂದಿವೆ. ಇಂಥಾ ಒಂದು ಸಂದರ್ಭದಲ್ಲಿ ಇಡೀ ಬೆಂಗಳೂರಿನ ಎಲ್ಲಾ ಮೋಟಾರುಗಳು ನಿಂತವು. ನಂತರದಲ್ಲಿ ಮಾರ್ಕೆಟ್ಟಿನ ಹತ್ತಿರ ದೊಡ್ಡ ಗುಂಪು ಸೇರಿತು. ಗಲಾಟೆ ಆಯಿತು. ಆಗ ತಮ್ಮ ರಕ್ಷಣೆಗಾಗಿ ಕಾನೂನು ಪರಿಪಾಲನೆಗಾಗಿ ಗೋಲೀಬಾರು ಮಾಡಿದರು. ಅದರಿಂದ ಇಬ್ಬರು ನಿರಪರಾಧಿಗಳು ಆ ಸಂದರ್ಭದಲ್ಲಿ ಸತ್ತುಹೋದರು. ಈ ವಿಷಯದಲ್ಲಿ ಸರ್ಕಾರದವರು ಯಾವುದೇ ಒಂದು ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಒಪ್ಪಿಲ್ಲ. ಕೊನೆಗೆ ಏನು ಕಾರಣ ಇದೆ ಎಂದರೆ ಮೂಲತಃ ಪೋಲೀಸಿನವರ ವರ್ತನೆಯೇ ಇದಕ್ಕೆ ಕಾರಣ. ಆದರೆ ಪೋಲೀಸಿನವರು ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡಲಿಲ್ಲ. ಸಾಮಾನ್ಯವಾಗಿ ಆ ರೀತಿ ಗೋಲೀಬಾರ್ ಮಾಡದಿದ್ದರೆ ಬಹಳ ಅಪಾಯವಾಗುತ್ತಿತ್ತು, ಲಕ್ಷಾಂತರ ರೂಪಾಯಿಗಳು ಸಾರ್ವಜನಿಕರು ಹಾಗೂ ಸರ್ಕಾರದ ಆಸ್ತಿಗಳಿಗೆ ನಷ್ಟವಾಗುವ ಸಂಭವ ಇತ್ತು. ಮತ್ತು ಪ್ರಾಣ ಹಾನಿಯೂ ಆಗುತ್ತಿತ್ತು ಎಂದು ಸರ್ಕಾರದವರು ಸಮಜಾಯಿಷಿ ಹೇಳಬಹುದು. ಆದರೆ ಏಕಾಏಕಿ ಅಂತ ಒಂದು ಘಟನೆ ನಡೆಯುವುದಕ್ಕೆ ಅವಕಾಶವನ್ನು ಕೊಟ್ಟು ಗೋಲೀಬಾರ್ ಮಾಡಿ ಇಬ್ಬರನ್ನು ಕೊಂದಿರತಕ್ಕದ್ದು ಖಂಡನೀಯ, ಅದು ಪೋಲೀಸ್ ಇಲಾಖೆಯ ದಕ್ಷತೆ ಎಂದು ಹೇಳುವುದಕ್ಕಾಗುವುದಿಲ್ಲ, ಅದು ಪೋಲೀಸ್ ಇಲಾಖೆಯ ಒಂದು ಸ್ವೇಚ್ಛಾ ವರ್ತನೆ ಎಂದು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯದಲ್ಲಿ ಪೋಲೀಸಿನವರ ನಡತೆಯನ್ನು ಪ್ರಶಂಸೆ ಮಾಡಬೇಕಾಗಿದೆ. ಅದೇನೆಂದರೆ ಈಗ್ಗೆ ಕೆಲವು ತಿಂಗಳ ಹಿಂದೆ ವಿದ್ಯಾರ್ಥಿಗಳು ಏನು ಈ ರಾಜ್ಯದಲ್ಲಿ ಒಂದು ತಿಂಗಳ ಕಾಲ ಮುಷ್ಕರವನ್ನು ಆರಂಭಮಾಡಿ ನಡೆಸಿದರೋ ಆ ಸಂದರ್ಭದಲ್ಲಿ ಪೋಲೀಸಿನವರು ವಿಶೇಷವಾದ ಎಚ್ಚರಿಕೆಯಿಂದ

ವರ್ತಿಸಿದರು. ಮತ್ತು ಯಾವುದೇ ಒಂದು ಹಿಂಸಾಚರಣೆಯಾಗಲೀ, ಪ್ರಚೋದನೆಗಾಗಲೀ ಅವಕಾಶ ಕೊಡದಂತೆ ನಡೆದುಕೊಂಡರು ಎಂದು ನಾನು ಈ ಸಂದರ್ಭದಲ್ಲಿ ಮೆಚ್ಚಿಗೆಯನ್ನು ವ್ಯಕ್ತಪಡಿಸುವುದಕ್ಕೆ ಇಚ್ಛಿಪಡುತ್ತೇನೆ.

ಇವರ ವರದಿಯಲ್ಲಿ ನಾವು ನೋಡುವುದಾದರೆ ಇಲ್ಲಿ ಸಿಟ್ ಡಿಸ್ಟಿಲೇಷನ್‌ಗೆ ಸಂಬಂಧಪಟ್ಟ ಅಂಕೆಗಳನ್ನು ನೋಡಿದರೆ 13 ಸಾವಿರದಿಂದ 10 ಸಾವಿರಕ್ಕೆ ಇಳಿದಿದೆ. ಎಲ್ಲಾ ಅಂಕಿಗಳು ಹಾಗೆಯೇ ಇಳಿಯುತ್ತಾ ಬಂದಿದೆ. ಒಂಭತ್ತು ಲಕ್ಷ 28 ಸಾವಿರ ಇದ್ದದ್ದು 1962ರಲ್ಲಿ 6 ಲಕ್ಷಕ್ಕೆ ಇಳಿದಿದೆ. ತಕ್ಸೀರುಗಳು ಆಗುವುದು ಕಡಿಮೆಯಾಗಿದೆ ಎಂದು ನಾನು ಭಾವಿಸುವುದಿಲ್ಲ. ತಕ್ಸೀರುಗಳು ಅಗುವುವು ಅಷ್ಟೇ ಸಂಖ್ಯೆಯಲ್ಲಿ ಆಗುತ್ತಾ ಇವೆ. ಇಂಥಾ ತಕ್ಸೀರುಗಳನ್ನು ಕಂಡು ಹಿಡಿದು ಶಿಕ್ಷೆ ವಿಧಿಸುವುದು ಸರಿ ಎನ್ನುವಮಟ್ಟಿಗೆ ಪೋಲೀಸು ಇಲಾಖೆಯಲ್ಲಿ ನಂಬಿಕೆ ಇಲ್ಲ ಎಂದು ಮಾತ್ರ ಹೇಳಬಹುದು. ಅದಕ್ಕೆ ಸಂಬಂಧಪಟ್ಟ ಎಲ್ಲಾ ಸಾಕ್ಷಿಗಳನ್ನೂ ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ಹೋಗುವುದಕ್ಕಿಂತ ತಾವೇ ತಮಗೆ ತಿಳಿದ ರೀತಿಯಲ್ಲಿ ಅವರನ್ನು ಮಾಫಿಮಾಡಿ ಬಿಟ್ಟುಬಿಡುವುದು ಒಳ್ಳೆಯದು ಎಂದು ಈ ಸಂಖ್ಯೆಯಿಂದ ಗೊತ್ತಾಗುತ್ತದೆ. ಇನ್ನೊಂದು ವಿಷಯ ಏನೆಂದರೆ ಸಾಮಾನ್ಯವಾಗಿ ಒಂದೆಂದು ಪೋಲೀಸ್ ಸ್ಟೇಷನ್ನಿನಲ್ಲಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯಾದ ತಕ್ಸೀರುಗಳನ್ನ ಹಾಕಬೇಕು ಎಂದು ಹಿಂದಿನಿಂದ ಒಂದು ಕ್ರಮ ಬಂದಿದೆ. ತೇಫ್ಟ್ ಏನಾದರೂ ಮಾಡಿ ಎಷ್ಟು ಕೇಸುಗಳನ್ನು ಕಂಡು ಹಿಡಿಯಬೇಕೋ ಅಷ್ಟನ್ನು ಹಾಕಬೇಕು. ಅದರಂತೆ ಅಂಕೆ ಸಂಖ್ಯೆಗಳು ಇದೆಯೇ ಹೊರತು ಆದರೆ ಮಾರ್ಪಾಡು ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇಂತಾ ತಕ್ಸೀರುಗಳನ್ನು ಹಿಡಿಯುವುದು, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸುವುದು ಒಂದು ಸಂಪ್ರದಾಯ ಬಂದಿದೆಯೇ ಹೊರತು ವಿಶೇಷ ಪರಿಶ್ರಮ ಕಂಡು ಬಂದಿಲ್ಲ. ಅನ್‌ಟಚಬಿಲಿಟಿ ಅಕ್ಟ್ ಪ್ರಕಾರ 1963ನೇ ಸಾಲಿನಲ್ಲಿ 48 ಕೇಸುಗಳನ್ನು ಮಾತ್ರ ಹಾಕಿದ್ದೇವೆ. ಎಂದು ಹೇಳಿದ್ದಾರೆ. ಅಂದಮಾತ್ರಕ್ಕೇ ಅಸ್ಪೃಶ್ಯತೆ ಎಲ್ಲೂ ನಡೆಯುವುದಿಲ್ಲ, ಹಾಗೆಯೇ ಬಿಟ್ಟಿದೆ ಎನ್ನುವ ಅರ್ಥದಲ್ಲಿ ಅನುಭವದಲ್ಲಿ ಹೇಳುವುದಾದರೆ ಕೆಲವು ಹಳ್ಳಿಗಳಲ್ಲಿ, ಕೆಲಸವು ಸಣ್ಣ ನಗರಗಳಲ್ಲಿ ಹರಿಜನರು ಸಾರ್ವಜನಿಕರ ಹೋಟಲುಗಳಿಗೆ ಬಾರದೆ ಇರುವುದನ್ನು ನಾವು ನೋಡುತ್ತಿದ್ದೇವೆ.

12 NOON.

ಅವರು ಕರಟಿಗೆಯಲ್ಲಿ ಕಾಫಿಯನ್ನು ಕುಡಿಯುತ್ತಾರೆ ಅಥವಾ ತಮಗಾಗಿ ಇಟ್ಟಿರುವ ಲೋಟದಲ್ಲಿ ಕಾಫಿಯನ್ನು ಕುಡಿದು ಅದನ್ನು ತಾವೇ ತೊಳೆದು ಇಟ್ಟುಕೊಂಡು ಹೋಗುವುದು ಪದ್ಧತಿಯಾಗಿದೆ. ನಾನು ಖಾಸಗಿ ಸ್ಥಳಗಳ ವಿಚಾರದಲ್ಲಿ ಹೇಳುತ್ತಿಲ್ಲ. ಅನೇಕ ಮನೆಗಳಲ್ಲಿ ಅವರು ಒಳಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಅವರು ಕುಡಿಯುವ ಲೋಟದಲ್ಲಿ ನೀರು ಕೊಡುವುದಿಲ್ಲ. ಅವರನ್ನು ಮುಟ್ಟಿಸಿಕೊಳ್ಳುವುದಿಲ್ಲ. ನಮ್ಮಲ್ಲಿ ಬಹಳ ಜನ ಐದು ಸಾವಿರ ವರ್ಷಗಳ ಹಿಂದೆ ಯಾವ ರೀತಿಯಲ್ಲಿ ನಡೆದುಕೊಂಡು ಬರುತ್ತಿದ್ದರೋ ಅದೇ ರೀತಿ ಅವರ ಗಾಳಿ ಬೀಸಬಾರದು, ಅವರ ನೆರಳು ಬೀಸಬಾರದು ಎನ್ನುವ ಪರಿಸ್ಥಿತಿಯಲ್ಲಿದ್ದಾರೆ. ಅದು ನನಗೆ ಗೊತ್ತು. ಆದರೆ ಸಾರ್ವಜನಿಕ ಸ್ಥಳದಲ್ಲಾದರೂ ಇವರಿಗೆ ಯೋಗ್ಯವಾದ ಗೌರವಯುತ ಸ್ಥಾನಮಾನಗಳು ಇವೆಯೇ ಎಂದರೆ ಇಲ್ಲ. ಕೆಲವು ಶಾಲೆಗಳಲ್ಲಿ ಸಹ ಅವರನ್ನು ಇತರ ಜನಗಳಿಂದ ಪ್ರತ್ಯೇಕವಾಗಿ ಕೂಡಿಸುತ್ತಾರೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ ಅಸ್ಪೃಶ್ಯತೆಯ ಬಗ್ಗೆ 48 ಕೇಸುಗಳನ್ನು ಹಾಕಿದ್ದಾರೆ ಎಂದರೆ ಅದರಲ್ಲಿ ಏನು ಅರ್ಥವಾಗುತ್ತದೆ ? ಪೋಲೀಸು ಇಲಾಖೆಗೆ ಈ ಒಂದು ಕಾನೂನು ಇದೆ ಎನ್ನುವುದರ ಅರಿವಾಗಲೀ ಇದನ್ನು ಅಕ್ಷರಶಃ ಕಾರ್ಯಗತ ಮಾಡಬೇಕು ಎನ್ನುವ ಕಳಕಳಿಯಾಗಲೀ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಯಾವುದಾದರೂ ಇಂಥ ಸಂದರ್ಭವನ್ನು ಅವರ ಗಮನಕ್ಕೆ ತಂದರೆ ಅವರೂ ಕೂಡ ಸವರ್ಣ ಹಿಂದೂಗಳಂತೆ, ಅವರ ಮನೋಭಾವದಂತೆ ವರ್ತಿಸಿ ಇದಕ್ಕೆಲ್ಲ ಕೇಸು ಹಡಕಬೇಕೋ! ಹೊರಗಡೆ ಕುಳಿತುಕೊಂಡು ಕುಡಿದು ಹೋದರೆ ಆಗುವುದಿಲ್ಲವೋ, ದೊಡ್ಡ ಕೇಸು ಹಾಕುವುದಕ್ಕೆ ಬಂದ ಎಂದು ಅವನನ್ನು ಕಳಿಸಿಬಿಡುತ್ತಾರೆ. ಈ ಕಾನೂನನ್ನು ಜಾರಿಗೆ ಕೊಡುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಿಲ್ಲ ಎನ್ನುವುದು ಕಾಣುತ್ತದೆ. 1961ರಲ್ಲಿ 84, 1962ರಲ್ಲಿ 54, 1963ರಲ್ಲಿ ನವಂಬರ್ ತಿಂಗಳವರೆಗೂ 48 ಕೇಸುಗಳನ್ನು ಹಾಕಿದ್ದೇವೆಂದು ಹೇಳಿದ್ದಾರೆ. ಅಸ್ಪೃಶ್ಯತಾ ಕಾನೂನಿನ ಪ್ರಕಾರ ಕೇಸುಗಳನ್ನು ಹಾಕಬೇಕು, ಅದು ಒಂದು ತಕ್ಸೀರು, ಎಂದು ಪೋಲೀಸು ಇಲಾಖೆಗೆ ಅರಿವಾಗಿಲ್ಲ ಎಂದು ನನಗನ್ನಿಸುತ್ತದೆ.

ಸುಮಾರು 75 ಲಕ್ಷ ರೂಪಾಯಿಗಳನ್ನು ಈ ವರ್ಷದಲ್ಲಿ ನಾವು ಮನೆಗಳನ್ನು ಕಟ್ಟಿಸುವುದಕ್ಕಾಗಿ ಕೊಡುತ್ತಿದ್ದೇವೆ. ಈಚೆಗೆ ಎಲ್ಲ ಕಾನ್‌ಸ್ಟೇಬಲ್‌ಗಳಿಗೂ ಮತ್ತು ನೌಕರರಿಗೂ ಮನೆಗಳನ್ನು

(ಶ್ರೀ ಎಸ್. ಗೋಪಾಲಗೌಡ)

Sri A. P. APPANNA (Virajpet).—It is better M. L. As, do not interfere.

ಶ್ರೀ ಸಿದ್ದಯ್ಯ ಕಾಶೀಮಠ್.—If it is a public matter, we have to represent in that respeet.

Sri S. SIVAPPA.—It is the mostly of only Congress M.L.As. ಅಂತ ಅವರು ಹೇಳುವುದು.

ಶ್ರೀ ಸಿದ್ದಯ್ಯ ಕಾಶೀಮಠ್.—ಒಂದು ಪರಿಸ್ಥಿತಿಯಲ್ಲಿ ಎಷ್ಟೋ ಅನಾಹುತಗಳು ಬರುತ್ತವೆ. ನಾವು ಒಂದು ಹೇಳಿದಾಗ ಅಥವ ಫೋನ್ ಮಾಡಿದಾಗ ಅವರು ವಿಚಾರಿಸಬೇಕಾಗುತ್ತದೆ. ಒಂದು ದುರ್ಘಟನೆ ಸಂಭವಿಸಿದಾಗ, ಹೆಲ್ತ್ ಮಿನಿಸ್ಟರಿಗೆ ತಿಳಿಸಿದರೆ ಒಬ್ಬ ಮೆಂಬರಿಗೆ ಒಂದು, ಇನ್ನೊಬ್ಬ ಮೆಂಬರಿಗೆ ಒಂದು ಈ ರೀತಿ ತಾರತಮ್ಯ ಮಾಡಿ ಅನ್ಯಾಯ ಮಾಡಿದರೆ, ಅಪಪ್ರಚಾರ ಮಾಡಿದರೆ, ಒಂದೂವರೆ ವರ್ಷವಾದರೂ ಕೂಡ ವಿಚಾರ ಮಾಡದೆ ಇರತಕ್ಕಂಥಾದ್ದು ಬಹಳ ಶೋಚನೀಯವಾದ ಸಂಗತಿ. ಅದರ ಬಗ್ಗೆ ಉತ್ತರ ಕೊಡಬೇಕೆಂದು ಈ ಸಭೆಯಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತಿನವರೆಗೂ ನಾನು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಯಾರು ಎಂದು, ಅವರ ಮುಖವನ್ನು ನೋಡಿಲ್ಲ ಒಂದು ಪರಿಸ್ಥಿತಿ ಇದ್ದರೂ ಕೂಡ, ನಮ್ಮ ಜಿಲ್ಲೆಯ ದೃಷ್ಟಿಯಿಂದಲೋ ವೈಯಕ್ತಿಕ ದೃಷ್ಟಿಯಿಂದಲೋ ಈ ರೀತಿ ಮಾಡತಕ್ಕಂಥಾದ್ದು ಬಹಳ ಅನ್ಯಾಯದ ಸಂಗತಿ. ಅದಕ್ಕಾಗಿ ನಾನು ಹೆಲ್ತ್ ಮಿನಿಸ್ಟರಿಗೆ ಕೇಳಿಕೊಳ್ಳುವುದೇನೆಂದರೆ, ಇದಕ್ಕೆ ನಿರ್ದಿಷ್ಟವಾದ ಉತ್ತರಬೇಕು. ಅವರು ಉತ್ತರವನ್ನು ಸ್ವಲ್ಪ ದಿವಸಗಳಲ್ಲಿ ಕೊಡಬೇಕು. ಈ ತೆರನಾಗಿ ಆಡಳಿತ ನಡೆಸಿದರೆ ಇಲ್ಲಿ ನಾವು ಕೂತುಕೊಂಡು ಏನು ಪ್ರಯೋಜನ ? ಇತರರ ಕಷ್ಟನಿಷ್ಠೂರಗಳನ್ನು ನಾವು ಹೇಳಬೇಕಾಗುತ್ತದೆ. ಇವತ್ತು ಯಾವದೇ ಒಂದು ವಿಷಯವನ್ನಾಗಲಿ, ನಮಗೆ ಕೇಳಲಿಕ್ಕೆ ಹಕ್ಕು ಇದೆ; ಮಾಡಲಿ ಬಿಡಲಿ. ಅದು ಬೇರೆ ವಿಷಯ. ಮಾಡದಿದ್ದರೆ ಪ್ರತಿಭಟಿಸಲಿಕ್ಕೂ ತಯಾರಾಗಿದ್ದೇವೆ ಸರ್ಕಾರದವರಿಗೆ ಈ ಇಲಾಖೆಗೆ ಸಾಕಾದಷ್ಟು ಹಣ ಕೊಡುತ್ತಾ ಇದ್ದೇವೆ. ಬೇಕಾದಷ್ಟು ರೀತಿಯಿಂದ, ಪರದೇಶದವರು ನಮ್ಮ ಮೇಲೆ ಕರುಣೆ ಇಟ್ಟು ಔಷಧಗಳನ್ನು, ಸಾಮಾನುಗಳನ್ನು ಕೊಡುತ್ತಿರುವುದು ಅಪವ್ಯಯವಾಗುತ್ತಿವೆ. ಅವು ನಮ್ಮ ಜನರ ಸ್ಥಿತಿಗತಿ ಉತ್ತಮಪಡಿಸಲು ಉಪಯೋಗವಾಗಬೇಕು, ನಮ್ಮ ಹೆಲ್ತ್ ಮಿನಿಸ್ಟರು ಇದಕ್ಕೆ ನಿಗಾಕೊಟ್ಟು ಸರಿಪಡಿಸುತ್ತಾರೆಂಬ ನಂಬಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

4 P.M.

Mr. DEPUTY SPEAKER.—We will sit in the morning tomorrow from 8-30 A.M. For to-day, may I know how much time the Hon'ble Minister requires ?

Sri K. NAGAPPA ALVA.—I require about 90 minutes.

Mr. DEPUTY SPEAKER.—Will not 45 minutes do ?

Sri K. NAGAPPA ALVA.—It all depends on the suggestions, criticism and attack made by the Hon'ble Member. This is a very big subject. There is Health, there is Medical Department and there are five subjects in all. There are 1,500 institutions. It all depends on the way in which Hon'ble Members participate in the discussion.

Mr. DEPUTY SPEAKER.—Almost, the Minister can have one hour. The discussion will go on till 5-45 P.M. and the Hon'ble Minister can begin his reply after that.

(*The House agreed*).

Messages from the Legislative Council.

Mr. DEPUTY SPEAKER.—I report to the House that messages have been received from the Legislative Council that the following Bills, passed by the Legislative Assemly, during the current Session and transmitted to the Legislative Council, have been passed by the Legislative Council without any amendment.—

(1) The Mysore Tenancy Laws (Amendment) Bill, 1964, and
(2) The Mysore Tenants (Temporary Protection from Eviction) (Amendment) Bill, 1964.

BUDGET ESTIMATES FOR 1964-65

Demands for Grants No. 18 Medical, No. 19 Public Health

Debate continued.

† Sri A. P. APPANNA (Virajpet).—Mr. Speaker, Sir, while lending my support to the Demands before us, I would like to offer certain remarks regarding the working of these two departments. Sir, from the statistics available, we find from the publications that have been made from the Bureau of Health Education, there are institutions, to the extent of 1,500. But I would like to point out to the Hon'ble Minister—how many of these institutions are without doctors ? I must make a special stress to this fact, because there are hospitals in Mysore State without doctors for more than three years. Especially in Coorg District, there are ten hospitals without doctors, ranging from three years to one year. In a place like Coorg, which is in the malnad area and where

(SRI A. P. APPANNA)

communication is not sufficient, I must submit that if doctors are not provided to those institutions, there is no meaning in allowing those hospitals to function at all. If they have provided nurses or compounders or other staff to those hospitals, I feel it is better to close those hospitals and take away that staff, because, whatever we spend there is a mere waste. In coorg, these ten hospitals are equipped with beds, with quarters and all other facilities and most of these institutions are donated by the public. If these institutions are not provided with doctors, then, it is better to close those hospitals and take away the staff, so that in the time of emergency, we will save some money. Instead of running the hospitals without doctors and by taking away the staff, we will be saving very much. We have been representing to Government off and on that unless doctors are provided in these rural areas, it is very difficult for the people there. In certain areas, during monsoon, those areas are not accessible to other people at all. In such areas at least, the Hon'ble Minister must see that doctors are posted. Whenever we press the demand that doctors must be posted to malnad areas, we find that most of the doctors are reluctant to go to those areas. I would like to place one suggestion before the Hon'ble Minister in this respect. In posting doctors to malnad areas, it is better that we pick up those doctors who hail from that area and post them there. Except certain doctors with specialised qualifications whose services are required in big institutions like the Victoria Hospital or the Bowring Hospital, there are doctors who hail from Coorg and we must appeal to them to serve in Coorg itself, because they are accustomed with the climate and the people and the environments. There is no ground for those people to refuse to go to their district and serve. I would also like to suggest that Government must provide a special allowance for those people, who work in malnad areas, because in certain areas, the facilities that would be ordinarily available in cities will not be available. So, to attract these doctors, a special allowance must be provided for them to make them go to those rural areas.

Unless these Doctors are posted in these areas, the hospitals cannot function properly. If it is not possible for the Government to post the Doctors, I would simply say that it is better to close those Hospitals. By closing those Hospitals, we would be saving certain amount of money. The Government has been saying that there is no money for developmental works. I was given to understand that the Coffee Board has allotted certain amounts to the Mysore State, Madras State and other States where Governmet is keen under the Labour Welfare Scheme to open certain wards attached to certain Hospitals. Mysore Government has not used so far that amount, whereas Madras Government has fully utilised and they have asked for more grant. The condition attached to the grant is that after the construction of wards or Hospitals, it must be maintained by the State Government concerned. But, till now, this offer was not accepted by the Mysore Government. On the other hand,

the Government was questioning the Coffee Board that if the Coffee Board undertake to maintain those institutions they are prepared to take the grant. The entire grant for the construction of Hospitals is provided by the Coffee Board. In Coorg, in labour areas like Palighatta, Somawarpet, Suntikoppa, etc., certain amounts have been earmarked and for the last two years that has not been used. This year also, the Coffee Board again granted, but the Government has turned down the request on the ground that it is not possible for them to maintain those Hospitals. The Government of Madras has used the full amount and have requested the Coffee Board for more grant. Since some of the members of the Coffee Board are from the Mysore State, I request the Hon'ble Minister to see that these amounts are utilised in the current year and buildings constructed. When the Coffee Board is giving all the grant, it is the duty of the Government to maintain those institutions and it is not fair on the part of the Government to ask the Coffee Board to maintain those organisations. When an organisation comes forward with donation, it is not proper to ask them to maintain those institutions. I would like to bring one instance to the notice of Hon'ble Minister. In Balale, an hon'ble gentleman has come forward with a donation of Rs. 20,000. He has executed the bond that he would construct the building on the specification of the Department, and the proposal has been sent to the Government about nine months back. Till to-day that has not been granted. The Hon'ble Minister knows that buildings in Coorg area can be constructed between December and April only, because monsoon breaks after that period. What happens to the materials that are collected for this work ? We pursuade the rich people to come forward with donations and if the Government is taking so much time to accept those donations, and when the donors have executed the bonds to fulfil all the conditions required by the Government and if the Government takes more than nine months to sanction such a proposal, then I have nothing to say in this matter.

Regarding the distribution of medicines to the Hospitals, I will bring one instance to the notice of the Hon'ble Minister. In a Hospital in Palighatta, which is surrounded by labour areas—Coffee estates—where there are more than 5,000 labourers, the grant for medicine is Rs. 3,000 per year, out of which the Government sends medicine worth Rs. 800 only and the rest of the grant is made to lapse. In such an area, when the Doctor sends the proposal that the requirement is more because it is a labour area, and when that is the position if after granting Rs. 3,000 only Rs. 800 is spent every year, I question whether the Government is really checking the proposals properly. Without studying the conditions of the people there, every year they are considering the proposals on the basis of the report sent by the District Health Surgeons. In providing medicine, they should take into consideration whether that area is surrounded by labourers, whether the population is more and how many patients in an year come there and take medicine. These are the statistics they have to take and provide medicines. On the other hand there are certain hospitals where the medicines that are

(SRI A. P. APPANNA)

supplied are not used and indirectly we are inducing the Doctors to sell it outside. From this point of view, in granting medicine, they should be careful in providing more medicines to rural areas where the facilities are scarce.

Regarding the Family Planning, I would submit that this programme must be effectively implemented. I completely disagree with the Hon'ble Member, Sri Range Gowda in the matter of family planning. Unless we take up this matter very effectively, whatever Plan programme we undertake will be of no use because the growth of population is more. I do appreciate the programme that has been undertaken by the Government, but I must submit that this has not reached the poor man at all. The advantage of this scheme has been taken only by the rich or middle-class people and the poor people has not taken advantage of this programme.

AN HON'BLE MEMBER.—Have you followed that ?

SRI A. P. APPANNA.—When I speak on the subject, you can be rest assured that I am within limits. Sri Range Gowda was against the family planning on the ground that the contraceptives that are supplied to the hospitals are in the hands of bachelors and other people. Where it is distributed if the bachelors have taken advantage of these contraceptives, we cannot blame the programme itself. On the other hand, we must give more propaganda for this and it must be effectively implemented. Unless we check the growth of population, in whatever other field we progress, it will undermine the population growth. From this point of view, effective drive must be given for family planning. We must induce the poor people to take up this. The advantagses must be taken by the poor man rather than the rich man. A rich man can maintain his family very well. Sri Range Gowda came out with an argument that it is a very good entertainment for a poor man, but the family planning is not for the entertainment. It is an entertainment without any liability. That is what they are trying to put forward. The question of entertainment does not come at all.

With these few words, I thank you.

SRI SANJEEVANATH AIKALA (Suratkal).—Mr. Speaker Sir, the Hon'ble Minister for Health has demanded a sum of Rs. 7.25 crores on these two heads. Sir, The Hon'ble Health Minister, well-known physician hailing from my district as a medical practioner, he was quite successful. Unfortunately, certain symptoms are so openly and so abundantly found in certain sections of his Department that I find the Hon'ble Minister is not equal to deal with these malignment symptoms.

Sir, there are certain symptoms in certain sections which require surgical operations. I understand and I was told that the Hon'ble Minister tried some sedatives, and finding that the sedatives did not help, he tried some shock treatment too. The disease is persisting,

symptoms are growing I find there is no cohesion, no collaboration and no co-operation among the various sections of the Department in his charge.

Sir, it pains me to tell you that there are three important teaching institutions with big hospitals attached to them and the three supreme heads of these institutions are great men. Their authority seems to be supreme. I do not wish to go into any more details because I always – being a very modest man find it not proper that I should make certain observations, concerning officers who are not here to justify or defend themselves. Any how, this is a state of affairs which I am not stating from my own experience, but on the authority of the local people. Well Sir, I leave the matter there.

I come to the general conditions in several hospitals. The two Hon'ble Members who preceded me spoke about them and those who follow me, will deal with elaborately. I do not wish to go further into that matter.

I will now refer only to one aspect and that is about family planning. Sir, just today, we are given a bulletin, a pamphlet about the medical facilities in Mysore State issued in April 1963. That shows that we are given literature after years. The facts and figures have been collected most probably, for the financial year 1963 and the book is before us exactly one year afterwards. Well Sir, I only call the attention of the Hon'ble Members of the House to the exhibited items in the Dasara Exhibition. This relates to family planning. This is a matter which is an ethical subject and this should be dealt with according to some ethical principles. On the previous occasion, I told about that the family planning is a subject which should be only dealt with by the experienced and family men. I say this because, family planning propagandists are usually unmarried young women or men and there was an instance when this propagandist, a young woman, who went for propaganda with tablets to certain villages, the village women asked this unmarried woman, whether she has taken this and used these tablets and if so what was the result. I know, it is out of innocence that these questions were put to this unmarried women. They further say : 'if you have used the tablets and if you say it is successful, we will take it.' That is how these propogandists are put to a great delicacy or embarrassment.

ಮಿತ ಸಂತಾನಕ್ಕೆ ಒಂದು ಸಾಧನ
ಗಂಡ ಉಪಯೋಗಿಸುವುದು ; ಹೆಂಡತಿ ಸಹಕರಿಸುವುದು
ರಬ್ಬರ್ ಚೀಲದ ಪರೀಕ್ಷೆ
ಉಪಯೋಗಿಸುವ ವಿಧಾನ
ಮಾಲಾವು ಉಪಯೋಗಿಸುವ ವಿಧಾನ
ಹೆಂಡತಿ ಉಪಯೋಗಿಸುವುದು ; ಗಂಡ ಸಹಕರಿಸುವುದು
ಒಂದು ಬಾರಿಗೆ ಒಂದೇ ಮಾತ್ರೆಯನ್ನು ಬಳಸುವುದು
ಮಾತ್ರೆಯನ್ನು ತೇವ ಮಾಡುವ ವಿಧಾನ ಇತ್ಯಾದಿ ಇತ್ಯಾದಿ.

(*Laughter*)

(SRI SANJEEVANATH AIKALA)

Sir, these are the posters exhibited in the Mysore Dasara Exhibition grounds. I want to question the ethical propriety in exhibiting such posters in such public places as in Mysore Dasara Exhibition? What would people think about this posters? These are matters which have to be exhibited only in selected places where you have family planning centres. In such broad day light, to exhibit this literature looks to me to be highly unethical and it should not be exhibited at all. There must be some seriousness behind these things. The staff incharge of publicity must discriminate between what to exhibit in a particular place, and what not.

Sir, I will now come to the Indian System of medicine—Ayurveda and Unani. I feel that the Government is not at all heeding to the criticisms which I had made and have been making continuously in this House. You recognise that Ayurveda is a medical science and you vociferously speak about Ayurveda and say that you will restore it to prestine glory which it had in the past. You say that Ayurveda system of medicine also succeeded, where the allopathic system of medicine failed in treating such chronic diseases like—asthma, diabetic, paralysis, blood pressure and leprosy too. What have you done to Ayurveda ? If you feel that Ayurveda also should stand side by side with allopathy you must do some thing substantial for it. But you have done only some magnificent service to Ayurveda which is merely shedding crocodile tears. You have ample lip sympathy for Ayurveda and Unani but that has not been translated into practice. Sir, I can quote examples of your carelessness and inadequate treatment you have given to Ayurveda and Unani. Let us look into your budget proposals. Out of 381 lakhs allotted, you are spending only 18 lakhs for Ayurveda. 2½ lakhs is included for Centrally sponsored schemes and perhaps the Central Government wanted you to allow some funds for this. Barring this, it is only 16 lakhs you are spending on Ayurveda and Unani system of medicine. That comes to only 0.04 per cent. of the total budget amount. This amply proves what indifference you are showing to Ayurveda. Sir, there are nearly 465 dispensaries......

MR. DEPUTY SPEAKER —It is already time. The Hon'ble Member may take two minutes more and close.

SRI SANJEEVANATH AIKALA.–What is the amount you are spending for these dispensaries and what is the amount you are spending for the Government College of Indian Medicine. You have given it, the name of a "College" of Indian Medicine. You want to mesmerise by using the word 'college'. Actually it is a school with a bed strength of 120. Can it be called a college at all ? What is the condition there ? There are no sufficient number of beds, not enough laboratory equipment, not enough teaching materials, not enough teaching staff. This is the condition of the only one Government College which the Government is running in Mysore State !

4-30 P.M.

You are spending are probably a paltry sum of Rs. 3 to Rs. 4 lakhs on that institution. Then there are 10 to 12 private institutions with hospitals and for which we are told you are spending a lakh and 13 thousand rupees as grant-in-aid. That is for the hospital as well as for the college purposes. Sir, that alone shows what little you are doing for Ayurveda and Unani system of medicine. There are some other reasons for this. I can tell about the Government's antipathy and continuous contempt for this Ayurvedic system of medicine. We have been telling that Ayurveda and Unani system of medicine should be under a separate Directorate of Indian Medicine. But the Government continuously disregards that proposal. Ayurveda Practitioners' Registration Bill was passed in this House some two years back according to which Ayurveda Board was to be constituted. But the Board has not yet been constituted and two years have been wasted. I do not know what prevents the Government from constituting this Board. Sir, coming to the research work to which the Government of Mysore have committed according to the instructions of the Central Government, this Government allotted a particular sum. It has not been able to spend that amount because that Research Officer who was appointed was not given the facility that is required for research work. There is no space, no materials, no library and he is simply drawing his salary and doing nothing. It is a sheer waste of money. According to a Government Order, 465 and odd dispensaries which use Ayurvedic medicines are required to get their medicinal requirements from the Central Ayurvedic Stores at Bangalore. It is again a very sad picture of the Central Ayurvedic Pharmacy. The medicines cost nearly 2½ times the medicines manufactured by other standard pharmacies. To give you one example, *kutajavaleha* in this pharmacy cost Rs. 74 per kilo, where as the same medicine could be purchased outside at a cost of Rs. 18. This is because Central Ayurvedic Pharmacy Stores is not well managed and the manufacture and purchase of raw materials are being done according to the wishes of the Presiding Officer of that Institution. They are purchased through tenders and you know what is the state of things when they are purchased through tenders. There will be a sort of dealings between the Contractor and the Head of the Institution whoever it may be and consequently things are costly there. The dispensaries indent their requirements from this Pharmacy but do not get them in time. Besides the Central Ayurvedic Pharmacy does not have all the medicines required by these dispensaries. Consequently, most of these dispensaries do not get the medicines in time and they had to send orders to some other pharmacies. There will be so much of bottle-necks in getting the requirements from the Central Ayurvedic Pharmacy.

Next I refer to Mental Hospital at Bangalore. Perhaps Hon'ble Members will not take me amiss if I say that I am a regular visitor to Mental Hospital just to observe things. (Laughter.) Hon'ble Members need not worry about me because Sri Ramakrishna Paramahamsa once said

(SRI SANJEEVANATH AIKALA)

that all people at one or the other time are mentally mad. The difference may be only the degrees. The state of affairs in the Mental Hospital are such that even a normal person who goes there will be in a confused state and they cannot make out whether he is really in a sound state of mental health. When they are inside the Hospital, they themselves have to question whether they are right or whether those people who are there are right. That is the condition of the Hospital once when you get into it. It requires immediate attention. Especially because the All-India Institute of Mental Health is now located very close to the Mental Hospital and it is a Centrally sponsored scheme where the Central Government is spending lot of money through the State Government. So, a great deal of attention is required to be given to this Hospital. I know in some respects good improvement has been made and new buildings are coming up. But the inmates of the mental hospital are mentally imbalanced and they cannot know at what stage they are. Those who are in charge of them from the highest medical officer down to the menial should have a sympathetic attitude towards the inmates because they have not come there of their own accord but on account of circumstances. I only suggest that proper attention should be given in this direction.

Lastly, I will again request the Hon'ble Health Minister to see whether Ayurvedic and Indian systems of medicine do require sympathetic consideration. I do not want lip sympathy or crocodile tears. They have stood the test of time and they have also medicines which could cure incurable diseases. Even foreigners have found some of the Ayurvedic medicines are invaluable and they are experimenting on certain Indian herbs, Sarpina and so many other herbs. If Ayurveda has its own mint ? I request the Hon'ble Minister to give its due share.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಡಿಮ್ಯಾಂಡ್‌ಗಳನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಸ್ವತಃ ನಾನೇ ಕೆಲವು ಕಡೆಗಳಲ್ಲಿ ಹೋಗಿ ನನ್ನ ಕಣ್ಣಿಂದ ನೋಡಿದ ಅನುಭವಗಳನ್ನು ಇಲ್ಲಿ ಹೇಳಬೇಕೆಂದಿದ್ದೇನೆ. ಈ ಬಾಬಿಗೆ ಒದಗಿಸಿರುವ ಹಣ ಸಾಕೇ, ಅಥವಾ ಇನ್ನೂ ಬೇಕೇ ಎಂಬ ಬಗ್ಗೆ ನಾನು ಹೇಳಬೇಕೆಂಬುದೇ ಗೊತ್ತಾಗುತ್ತಿಲ್ಲ. ಸಾಕು ಎಂದು ಹೇಳಿದರೆ ಜನರಿಗೆ ಅನ್ಯಾಯವಾಗುತ್ತದೆ, ಬೇಕು ಎಂದು ಹೇಳಿದರೆ ಈಗ ಆಗುತ್ತಿರುವ ಅನ್ಯಾಯ ನೋಡಿದರೆ ವ್ಯಸನವಾಗುತ್ತದೆ. ಒದಗಿಸಿದ್ದ ಹಣ ಸರಿಯಾಗಿ ಸದುಪಯೋಗವಾಗುತ್ತಿಲ್ಲ. ಇನ್ನು ಆಸ್ಪತ್ರೆಗಳಲ್ಲಿನ ಸ್ಥಿತಿಗತಿಗಳನ್ನು ನೋಡಿದರೆ ರೋಗಿಯಾದವನು ಎಲ್ಲಾ ಆಕಾಂಕ್ಷೆಗಳನ್ನು ಬಿಟ್ಟು ಪರಮಾತ್ಮನನ್ನು ನಂಬಿ ಆಸ್ಪತ್ರೆ ಸೇರಬೇಕಷ್ಟೆ. ಸರ್ಕಾರೀ ಆಸ್ಪತ್ರೆಗಳ ಒಂದೊಂದರ ಚರಿತ್ರೆಯನ್ನು ಹೇಳಲಿಕ್ಕೆ ನಾನು ಹೊರಟರೆ ಅಧ್ಯಕ್ಷರು ಕೊಟ್ಟಿರುವ ಸಮಯ ಸ್ವಲ್ಪವಾದ್ದರಿಂದ ಕೆಲವನ್ನು ಮಾತ್ರ ಇಲ್ಲಿ ಹೇಳಬೇಕೆಂದು ಇದ್ದೇನೆ. ನನ್ನ ಮಾನ್ಯ ಸೋದರಿಯೊಬ್ಬರು ಆಕೆಯ ಬಂಧುವರ್ಗದವರಲ್ಲೊಬ್ಬರಿಗೆ ಕೊನೆಗಳಿಗೆಯಲ್ಲಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊಡಲಿಕ್ಕೆ ಹೋದಾಗ ಅಲ್ಲಿರತಕ್ಕ ಮಿಷನ್ನಿನಲ್ಲಿ ಟ್ಯೂಬ್‌ಗಳೆಲ್ಲ ತೂತು. ಒಂದರಲ್ಲಾದರೂ ಗಾಳಿಯಿರಲಿಲ್ಲವಂತೆ. ಆದರೆ ನಾನು ಡಾಕ್ಟರಲ್ಲ. ನನಗೆ ತಿಳಿದಿರುವ ರೀತಿಯಲ್ಲಿ ನಾನು ಇಲ್ಲಿ ತಮಗೆ ಹೇಳುತ್ತಿದ್ದೇನೆ. ಆ ಟ್ಯೂಬುಗಳೆಲ್ಲಾ ತೂತುಗಳೇ. ಅದನ್ನು ರಿಪೇರಿಮಾಡಿ ಗಾಳಿ ತುಂಬೊ ಹೊತ್ತಿಗೆ ಆ ರೋಗಿ ಸ್ವರ್ಗ ಲೋಕವನ್ನು ಕಂಡ ಎಂಬುದಾಗಿ ಹೇಳಿದರು. ಆತನಿಗೆ ಹೆಂಡತಿ, ಮಕ್ಕಳು ಎಲ್ಲರೂ ಇದ್ದಾರೆ. ಇದನ್ನು ಕೇಳುವಾಗ ನನಗೆ ಬಹಳ ವಿಷಾದವಾಯಿತು. ಇದನ್ನು ಆಸ್ಪತ್ರೆಯ ಮೇಲಧಿಕಾರಿಗಳು ಚೆನ್ನಾಗಿ ಗಮನಿಸಬೇಕು. ಇಂತಹ ಸಾಮಾನುಗಳು ಆಸ್ಪತ್ರೆಗಳಲ್ಲಿ ಯಾವಾಗಲೂ ಸದಾಕಾಲದಲ್ಲ ಸಿದ್ಧವಾಗಿರಬೇಕು. ಆದಕ್ಕೆ ಸೂಕ್ತ

ವ್ಯವಸ್ಥೆಯನ್ನು ಮಾಡುವುದು ಸರ್ಕಾರದವರ ಆದ್ಯ ಕರ್ತವ್ಯ. ಇದನ್ನು ಸರ್ಕಾರದವರು ಚೆನ್ನಾಗಿ ಗಮನಿಸಬೇಕು.

[SMT. NAGARATNAMMA HIREMATH (CHAIRMAN) in the Chair.]

ಇನ್ನು ಕೆಲವು ಸಾಮಾಗ್ರಿಗಳನ್ನು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಸರ್ಕಾರದವರು ಆಸ್ಪತ್ರೆಗಳಲ್ಲಿ ತಂದಿಟ್ಟಿದ್ದಾರೆ. ಅವುಗಳ ಪರಿಸ್ಥಿತಿಯೇನಾಗಿದೆಯೆಂದರೆ ಕೇವಲ ಸಣ್ಣ ಸಣ್ಣ ರಿಪೇರಿಯಾಗದೆ ಅನೇಕ ಸಾಮಾಗ್ರಿಗಳು ಅಂದರೆ ನಟ್ಟು, ಬೆಲ್ಟು ಮುಂತಾದುವು ತುಕ್ಕು ಹಿಡಿಯುತ್ತಿವೆ. ಕೇವಲ ಸಣ್ಣ ಸಣ್ಣ ಸಾಮಾನುಗಳೂ ಸಹ ಸಿಗುವುದಿಲ್ಲ. ಇದರಿಂದ ಜನತೆಗೆ ಏನೊಂದು ಉಪಯೋಗವಿಲ್ಲ. ಸರ್ಕಾರಕ್ಕೇನೋ ಖರ್ಚು ಮಾತ್ರ ತಪ್ಪಿಲ್ಲ, ಹೀಗಾಗಿದೆ ಆಸ್ಪತ್ರೆಗಳ ಸ್ಥಿತಿ.

ಇನ್ನು ಆಸ್ಪತ್ರೆಗಳಲ್ಲಿನ ಹಾಸಿಗೆ, ಮಂಚ, ಬೆಡ್‌ಷೀಟುಗಳನ್ನು ನೋಡಿದರೆ ಸುಮಾರು 12 ವರ್ಷಗಳಿಂದಲೂ ಸ್ನಾನಮಾಡದೇ ಇರುವವರೂ ಕೂಡ ಅಲ್ಲಿ ಹೋಗಿ ಮಲಗುವುದಕ್ಕಾಗುವುದಿಲ್ಲ. ಇದಕ್ಕಿಂತಲೂ ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಇಂಥಾದ್ದನ್ನೆಲ್ಲಾ ಸರ್ಕಾರದವರು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆ ಮಾಡಬೇಕು. ಆದರೆ ಬೋರ್ಡ್‌ಮೀಟಿಂಗ್ ಇದ್ದಾಗ ಆಸ್ಪತ್ರೆಗಳಲ್ಲಿ ಎಲ್ಲ ಏರ್ಪಾಡುಗಳೂ ಚೆನ್ನಾಗಿರುತ್ತವೆ. ಅಲ್ಲಿ ಯಾವ ರೀತಿ ಎಲ್ಲರೂ ಸಮಾಧಾನವಾಗಿರಬೇಕೋ ಆ ರೀತಿ ಇದ್ದುಬಿಡುತ್ತಾರೆ.

ಇನ್ನು ಔಷಧಿಗಳ ವಿಚಾರವಾಗಿ ಹೇಳುವುದಾದರೆ ಅಲ್ಲಿರತಕ್ಕ ಅನೇಕ ಔಷಧಿಗಳು ಆಸ್ಪತ್ರೆಯನ್ನು ಬಿಟ್ಟು ಕಾಳಸಂತೆ ಬಜಾರಿಗೆ ಹೋಗುತ್ತದೆ. ಈ ವಿಚಾರವನ್ನು ಹೋದಸಾರಿಯೂ ನಾನು ತಿಳಿಸಿದ್ದೆ. ಈ ಬಗ್ಗೆ ಅನೇಕ ಸದಸ್ಯರು ತಿಳಿಸಿದರು, ವರದಿಗಳು ಅನೇಕ ಬಂದರೂ ಇದುವರೆಗೆ ಆ ಪರಿಸ್ಥಿತಿ ಸುಧಾರಿಸಿಲ್ಲ. ಇನ್ನು ಬಡವರು ಆಸ್ಪತ್ರೆಗಳಿಗೆ ಹೋಗಿ ರಕ್ತ ಕೊಡಿ ಎಂದು ಕೇಳಿದರೆ 10 ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಾರೆ. ಹೀಗೆ ಸಣ್ಣ ಸಣ್ಣ ವಿಚಾರಗಳು ಅನೇಕವಿವೆ. ಅವನ್ನೆಲ್ಲಾ ಹೇಳಲು ಸಂಕೋಚದಿಂದ ಬಿಟ್ಟಿರುತ್ತೇನೆ. ಕಾಲಾವಕಾಶ ಸಾಲದು. ಆಸ್ಪತ್ರೆಗಳಲ್ಲಿ ರತಕ್ಕ ನರ್ಸುಗಳ ಮತ್ತು ಡಾಕ್ಟರುಗಳ ಬಡತನವಂತೂ ಹೇಳುವುದಕ್ಕಾಗುವುದಿಲ್ಲ. ಒಳ್ಳೆಯ ಬುದ್ಧಿವಂತರಾದ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳು ಸಿಗದೆ ಯಾರ್‍ಯಾರಿಗೋ ಬೇರೆ ರೀತಿಯಲ್ಲಿ ಸೀಟುಗಳು ಸಿಕ್ಕಿ ಒಂದು ಅಂತಹವರೇನಾದರೂ ಡಾಕ್ಟರಾದಾಗ ಅವರಿಗೆ Glucose drip ಕೂಡ ಕೊಡಲಿಕ್ಕೆ ಬಾರವೆ ಅವರೂ ಸಹ ಸರ್ಜನ್‌ಗಳೆಂದು ಹೇಳಿಕೊಂಡು ಸಿಕ್ಕಾಪಟ್ಟೆ ಔಷಧಿಗಳನ್ನು ಕೊಡುವುದರಿಂದ ಅನೇಕ ಜನರು ಇಹಲೋಕಯಾತ್ರೆಗಳಾಗುವುದೂ ಉಂಟು. ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡುವುದು ಒಳ್ಳೆಯದು. ಏಕೆಂದರೆ ಅವರು ಡಾಕ್ಟರುಗಳಾದಮೇಲೆ ಹಳ್ಳಿಗಳ ಪರಿಸ್ಥಿತಿ ಚೆನ್ನಾಗಿ ಮೊದಲಿನಿಂದಲೂ ಗೊತ್ತಿರುವುದರಿಂದ ಗ್ರಾಮಾಂತರ ಪ್ರದೇಶಗಳ ಜನತೆಗೆ ಅನುಕೂಲವಾಗುತ್ತೆ. ಬೆಂಗಳೂರಿನ ಒಬ್ಬ ಡಾಕ್ಟರೂ ಸಹ ಗ್ರಾಮಾಂತರ ಪ್ರದೇಶಗಳಿಗೆ ನೇಮಿಸಿದರೂ ಹೋಗುವುದಿಲ್ಲ. ಆದ್ದರಿಂದ ಹಳ್ಳಿಗಳ ಕಡೆಯಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಎಂ.ಬಿ.ಬಿ.ಎಸ್.ನಲ್ಲಿ ಹೆಚ್ಚು ಸೀಟುಗಳನ್ನು ಕೊಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಸಾಮಾನ್ಯವಾಗಿ ಒಂದು ವಾರ್ಡಿನಲ್ಲಿ 40-45 ಪೇಷಂಟ್ಸ್ ಇದ್ದರೆ ಒಬ್ಬ ನರ್ಸ್ ನೋಡಬೇಕೆಂದರೆ ಸಾಧ್ಯವೇ ? ಹೆರಿಗೆಗಾಗಿ 40-45 ಹೆಂಗಸರು ಬಂದರೆ ಒಬ್ಬ ನರ್ಸ್ ಮತ್ತು ಒಬ್ಬ ಡಾಕ್ಟರ್ ಏನು ಮಾಡುತ್ತಾರೆ ? ಯಾವ ರೀತಿ ಕೆಲಸ ಮಾಡಬೇಕು ? ನನಗೆ ಇದು ಅರ್ಥವಾಗಲಿಲ್ಲ. ಇದು ನಾನು ನೋಡಿ ಬಂದ ದೃಶ್ಯ. ಲೇಡಿ ಡಾಕ್ಟರ್ ದಕ್ಷರಿರಬಹುದು, ಆಕೆಗೆ ಬೇಕಾದ ಸಹಾಯಗಳು ಅಲ್ಲಿಲ್ಲದ ಮೇಲೆ ಒಬ್ಬಾಕೆ ಏನು ಮಾಡಬಲ್ಲಳು ? ಯಾರ್‍ಯಾರಿಗೆ ಅಟೆಂಡ್ ಮಾಡುವುದಕ್ಕಾಗುತ್ತದೆ ? ಇದನ್ನು ಸರ್ಕಾರದವರು ಚೆನ್ನಾಗಿ ಗಮನಿಸಿ ತಕ್ಕ ಸಿಬ್ಬಂದಿಯನ್ನು ನೇಮಿಸುವುದು ಉತ್ತಮ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ಆಸ್ಪತ್ರೆಯಲ್ಲಿ ತಾಯಿ 40-45 ಜನ ಹೆಂಗಸರು ಒಂದೇ ಸಾರಿ ಹೆರಿಗೆಗೆ ಬಂದಿರುವುದು ?

ಶ್ರೀಮತಿ ರತ್ನಮ್ಮ ಮಾಧವರಾವ್.—ಎಲ್ಲಾ ಆಸ್ಪತ್ರೆಗಳಲ್ಲೂ ಸಾಮಾನ್ಯವಾಗಿ ಆ ರೀತಿ ಇದೆ.

ಇನ್ನು ಆಸ್ಪತ್ರೆಗಳನ್ನು ಚೆನ್ನಾಗಿಡಬೇಕು. ಅಲ್ಲಿಯೇ ನೀರಿನ ಅಭಾವ ಆದರೆ ಯಾವ ರೀತಿ ಆಸ್ಪತ್ರೆಗಳನ್ನು ಸ್ವಚ್ಛವಾಗಿ ಮತ್ತು ನಿರ್ಮಲವಾಗಿ ಇಡುವುದಕ್ಕಾಗುತ್ತದೆ ? ಅದನ್ನು ಸರ್ಕಾರದವರು ಗಮನಿಸಿ ಅಲ್ಲಿರತಕ್ಕ ನೀರಿನ ಅಭಾವವನ್ನು ಹೋಗಲಾಡಿಸಬೇಕು.

ಇನ್ನು ಕೆಲವುಕಡೆ ಆಸ್ಪತ್ರೆಗಳಲ್ಲಿ ದಕ್ಷರಾದ ಡಾಕ್ಟರುಗಳು ಇರುತ್ತಾರೆ. ಇವರ ಬಗ್ಗೆ ಅವರಿಗಿರುವ ತೊಂದರೆಯನ್ನು ಸರ್ಕಾರದವರು ಗಮನಿಸಬೇಕಾಗಿದೆ. ಅದು ಹೇಗೆಂದರೆ ಪ್ರೊಮೋಷನ್ ಕೊಡುವ ವಿಚಾರದಲ್ಲಿ ಕೆಳಗಿರುವವನನ್ನು ಮೇಲಕ್ಕೆ ಹಾಕುವುದು, ಮೇಲಿರು

(ಶ್ರೀಮತಿ ರತ್ನಮ್ಮ ಮಾಧವರಾವ್)

ವವನನ್ನು ಕೆಳಗೆ ಹಾಕುವುದು, ಸೀನಿಯರ್ಸನ್ನು ಜೂನಿಯರ್ ಕೆಳಗೆ ಹಾಕುವುದು ಜೂನಿಯರ್ಸನ್ನು ಸೀನಿಯರ್ಸ್ ಮೇಲೆ ಹಾಕುವುದು ಹೀಗಾಗಿ ಅನೇಕರು ರಜಾ ತೆಗೆದುಕೊಂಡು ಮನೆಗಳಲ್ಲಿ ಕೂತುಕೊಳ್ಳುವುದೂ ಉಂಟು. ಒಂದು ವೇಳೆ ಏನಾದರೂ ಈ ರೀತಿಯಾದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದೂ ಉಂಟು. ಆದರೆ ನಮ್ಮ ರಾಜ್ಯದಲ್ಲಿ ಕೆಲವು ವಿಷಯಗಳಲ್ಲಿ ಸ್ಪೆಷಲೈಸ್ಡ್ ಮಾಡಿಕೊಂಡು ಬಂದಿರುವವರು ಇದ್ದಾರೆ ಅವರು ಇರುವುದು ಕೇವಲ ಕೆಲವೇ ಜನ. ಅಂತಹವರೂ ಕೂಡ ಇತ್ತೀಚೆಗೆ ರಾಜೀನಾಮೆ ಕೊಟ್ಟು ಬೇರೆ ಕಡೆಗಳಿಗೆ ಹೋಗುತ್ತಾ ಇದ್ದಾರೆ. ಅವರೇ ಆಗಲಿ ಇಲಾಖೆಯಲ್ಲಿ ಕೆಲಸ ಮಾಡಲು ಸಮಾಧಾನ, ಶಾಂತಿಗಳಿರದೆಯೇ ಎಷ್ಟು ಮಟ್ಟಿಗೆ ಕೆಲಸ ಮಾಡಿಯಾರು ? ಕೆಲವರು ಎಂ.ಬಿ.ಬಿ.ಎಸ್. ಪಾಸ್‌ಮಾಡಿರುವವರು ಹಾಗೆಯೇ ಇಲಾಖೆಯಲ್ಲಿ ಮುಂದುವರಿಯುತ್ತಿದ್ದರೆ ಅವರನ್ನು confirm ಮಾಡುವುದಿಲ್ಲ. ಕೆಲವರಿಗೆ ಪ್ರೊಮೋಷನ್‌ಗಳನ್ನೂ ಸಹ ಕೊಟ್ಟಿಲ್ಲ. ಆದ್ದರಿಂದ ಅಂತಹವರನ್ನು ಏಕೆ ಕನ್‌ಫರ್ಮ್ ಮಾಡಬಾರದು ಎಂಬುದಾಗಿ ನಾನು ಕೇಳುತ್ತೇನೆ. ಕೆಲವರು ಪಿ.ಎಸ್.ಸಿ. ಇಂಟರ್‌ವ್ಯೂನಲ್ಲಿಯೂ ಸೆಲೆಕ್ಟ್ ಆಗಿಲ್ಲ. ಅವರ ಗತಿಯೇನು ಡಾಕ್ಟರುಗಳೇ ಇಲ್ಲದ ಆಸ್ಪತ್ರೆಗಳು ಇತ್ತೀಚೆಗೆ ಅನೇಕ ಇವೆ. ಡಾಕ್ಟರುಗಳ ಅಭಾವ ಜಾಸ್ತಿಯಾಗಿದೆ. ಆ ವಿಷಯದಲ್ಲಿ ಸರ್ಕಾರದವರು ಕೂಡಲೇ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಕೆಲವು ಕಡೆಗಳಲ್ಲಿ ಹೆಲ್ತ್ ಯೂನಿಟ್ಟುಗಳನ್ನು, ಆಸ್ಪತ್ರೆಗಳನ್ನು ತೆರೆಯುತ್ತೇವೆಂದು ಅಸ್ತಿಭಾರಶಿಲೆಯನ್ನು ಹಾಕಿ ಆರಂಭೋತ್ಸವವನ್ನು ಅವಸರವಸರವಾಗಿ ಮಾಡಿ ಆಸ್ಪತ್ರೆ ಕಟ್ಟಿ ಆಗ ತಾನೇ ಪಾಸ್‌ಮಾಡಿದಂಥ ಡಾಕ್ಟರುಗಳನ್ನು ಅಲ್ಲಿಗೆ ನೇಮಿಸುವುದರಿಂದ ಅಲ್ಲಿಗೆ ಹೋದ ಯಾವ ರೋಗಿಯೂ ಹಿಂತಿರುಗದಂತಾಗುವುದು. ಆದ್ದರಿಂದ ಇಂತಹವರನ್ನು ಅಲ್ಲಿ ನೇಮಿಸುವುದಕ್ಕಿಂತ ಅಂತಹ ಆಸ್ಪತ್ರೆಗಳನ್ನು ಮುಚ್ಚುವುದು ಒಳ್ಳೆಯದು.

ಇನ್ನೊಂದು ವಿಚಿತ್ರ ಪದ್ಧತಿ ಈಗ ಶುರುವಾಗಿದೆ. ಯಾವನಾದರೂ ಒಬ್ಬನನ್ನು ಒಂದು ಕಡೆಗೆ ಟ್ರಾನ್ಸ್‌ಫರ್ ಮಾಡುತ್ತಾರೆನ್ನೋಣ. ಆತ ಅಲ್ಲಿಗೆ ಹೋಗಿ ಮುಟ್ಟುವುದರೊಳಗೆ ಅವನನ್ನು ಮತ್ತೊಂದುಕಡೆಗೆ ಟ್ರಾನ್ಸ್‌ಫರ್ ಮಾಡುವುದು. ಇದರಿಂದ ಅವನ ಗತಿಯೇನಾಗಬೇಕು ! ಇದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ತಿಳಿದು ಮುಂದೆ ಹೀಗೆ ಆಗದಂತೆ ನೋಡಿಕೊಳ್ಳಬೇಕು.

ಇನ್ನೂ ಕೆಲವು ಆಸ್ಪತ್ರೆಗಳಲ್ಲಿ, ಒಂದೇ ಆಗಿದ್ದಾರೆ ಹೆಸರು ಹೇಳುತ್ತಿದ್ದೆ. ನಾಲ್ಕೈದು ಆಸ್ಪತ್ರೆಗಳಲ್ಲಿ ಹೋಗಿ ಅಲ್ಲಿನ ಆಪರೇಷನ್ ಥಿಯೇಟರುಗಳನ್ನು ನೋಡಿದ್ದೇ ಆದರೆ, ಅಲ್ಲಿರತಕ್ಕ ಕತ್ತರಿ ಚಾಕುಗಳನ್ನು ಮತ್ತು ಇತರ ಸಾಮಗ್ರಿಗಳನ್ನು ಯಾವನಾದರೂ ಒಬ್ಬ ನಾಗರಿಕನು ನೋಡಿದರೆ ನಿಜವಾಗಿ ನಾಚಿಕೆ ಪಡಬೇಕಾಗುತ್ತದೆ. ಆಸ್ಪತ್ರೆಗಳಲ್ಲಿ ಎಮರ್ಜೆನ್ಸಿ ಮತ್ತು ಸೀರಿಯಸ್ ಕೇಸುಗಳು ಬಂದಾಗ ಅಂತಹ ಕೇಸುಗಳನ್ನು ತಕ್ಷಣ ನೋಡುವುದಕ್ಕೆ ಅಲ್ಲಿರತಕ್ಕ ಸರ್ಜನ್ ಮತ್ತು ಆರ್.ಎಂ.ಓ. ಅವರಿಗೆ ಆಸ್ಪತ್ರೆಯ ಆವರಣದಲ್ಲಿಯೇ ಮನೆಗಳನ್ನು ಕಟ್ಟಿಸುವುದಕ್ಕೆ ಸರ್ಕಾರ ತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಆ ರೀತಿ ಮಾಡದೆ ಒಬ್ಬ ಔಟ್-ಪೇಷಂಟ್ಸ್ ವಾರ್ಡಿನಲ್ಲಿ ಚೀಟಿ ಬರೆಯುವವರಿಗೆ ಮನೆ ಕಟ್ಟಿಕೊಟ್ಟಿದ್ದೀರಿ. ನಾನು ಅವರಿಗೆ ಬೇಡವೆಂದು ಹೇಳುವುದಿಲ್ಲ. ಅವರಿಗೂ ಕೊಡಿ. ಬೇಡ ಅನ್ನೊಲ್ಲ. ಮೊದಲು ಆರ್.ಎಂ.ಓ.ಗೆ ಮತ್ತು ಸರ್ಜನ್ ಅವರಿಗೆ ಕಟ್ಟಿಸಿ ಕೊಡಿ, ಆ ಮೇಲೆ ಬೇರೆಯವರಿಗೆಲ್ಲರಿಗೂ ಕೊಡಬೇಕು ಎಂಬುದು ನನ್ನ ಸಲಹೆ.

ಇನ್ನು ಲೇಡಿ ಡಾಕ್ಟರುಗಳನ್ನು ಕೆಲವು ವೇಳೆ ಅರ್ಧರಾತ್ರಿಯಲ್ಲಿ ಕರೆಯುತ್ತಾರೆ. ಅವರಿಗೆ ಕಾರುಗಳನ್ನು ಸರ್ಕಾರದವರು ಕೊಡುವ ಹಾಗಿಲ್ಲ, ಎಲ್ಲರೂ ಕಾರುಗಳನ್ನು ಇಟ್ಟುಕೊಳ್ಳುವ ಹಾಗಿಲ್ಲ. ಅಂತಹವರಿಗೆ ಏನಾದರೂ ಸರ್ಕಾರದವರು ವ್ಯವಸ್ಥೆ ಮಾಡಬೇಕು.

ಇನ್ನೊಂದು ವಿಷಯವನ್ನು ಬಹಳ ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಆಸ್ಪತ್ರೆಗಳಲ್ಲಿ ದಕ್ಷರಾದ ಅಧಿಕಾರಿಗಳಿದ್ದು ಸರ್ಕಾರ ಅವರಿಗೆ ಒದಗಿಸಿದ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚಾಗಿ ಸಾರ್ವಜನಿಕರಿಗೆ ಉಪಯುಕ್ತವ ದಲ್ಲಿ ಈ ಆಸ್ಪತ್ರೆಗಳಿರಬೇಕು. ಇಲ್ಲವಾದಲ್ಲಿ ಆಸ್ಪತ್ರೆಗಳನ್ನೆಲ್ಲಾ ಮುಚ್ಚಿ ಅಲ್ಲಿರತಕ್ಕ ಡಾಕ್ಟರುಗಳನ್ನು ಪ್ರೈವೇಟ್ ಪ್ರಾಕ್ಟೀಸ್ ಮಾಡಿಕೊಳ್ಳಬೇಕೆಂದು ಅವರಿಗೆ ತಿಳಿಸಬೇಕು. ಒಂದುವೇಳೆ ಅವರೇನಾದರೂ ದಯಾಧರ್ಮಗಳಿಂದ ಬಡವರ ಕಡೆ ನೋಡಿದರೆ ನೋಡಲಿ. ಇಲ್ಲವಾದರೆ ಅವರಗತಿ ಪರಮಾತ್ಮನಿಗೇ ಗೊತ್ತು.

ಇನ್ನು ಮಲೆನಾಡಿನ ಬಗ್ಗೆ ನನ್ನ ಮಾನ್ಯ ಸೋದರ ಶ್ರೀಮಾನ್ ಅಪ್ಪಣ್ಣನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ಇನ್ನು ಮುಂದೆ ಆಸ್ಪತ್ರೆ, ಹೆಲ್ತ್ ಯೂನಿಟ್ಟು, ಡಿಸ್ಪೆನ್ಸರಿ ಇವುಗಳನ್ನು ಹೆಚ್ಚು ಹೆಚ್ಚಾಗಿ ಕೊಡಬೇಕೆಂದು ಹೇಳುತ್ತೇನೆ. ಇದರಿಂದಲಾದರೂ ಹಳ್ಳಿಯ ಜನರು ತಕ್ಕ ಅನುಕೂಲತೆಯನ್ನು ಪಡೆಯಬೇಕು. ಒಂದು ವೇಳೆ ಜನ ಮುಂದೆ ಬಂದು ಹಣಕಟ್ಟಿ ತಾಲ್ಲೂಕು ಬೋರ್ಡುಗಳು ಅದರ ಖರ್ಚುವೆಚ್ಚಗಳನ್ನು ವಹಿಸುತ್ತೇವೆಂದು ಹೇಳಿದರೆ,

ಆಗ ಈ ಸೌಕರ್ಯಗಳನ್ನೆಲ್ಲಾ ಅವರಿಗೆ ಕೊಡಿ. ಇದರಲ್ಲಿ ಅಧಿಕಾರಿಗಳು ಮಾನವತೆ, ಸಹಾನುಭೂತಿಗಳನ್ನು ತೋರಿಸಬೇಕು.

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿ ನನಗೆ ತಿಳಿದಿರುವಹಾಗೆ ಜನಸಂಖ್ಯೆ ನಿಜವಾಗಿ ಕಡಿಮೆಯಾಗಿಲ್ಲ. ಜಾಸ್ತಿಯೇ ಆಗುತ್ತಿದೆ. ಬರೀ ಓಡಾಟ, ಮೀಟಿಂಗ್‌ಗಳು ಟಿ.ಎ. ಮತ್ತು ಡಿ.ಎ. ಗಳಿಗೆ ಖರ್ಚಾಗುವ ಹಣವನ್ನು ಬೇರೆ ದೇಶಾಭಿವೃದ್ಧಿ ಕೆಲಸ ಕಾರ್ಯಗಳಿಗೆ ಉಪಯೋಗಿಸಬೇಕು. ಜನತೆ ತಾವಾಗಿಯೇ ಬುದ್ಧಿವಂತರಾಗಲಿ.

ಸುಮಾರು 7 ವರ್ಷಗಳಿಂದಲೂ ನಾನಿಲ್ಲಿ ಹೇಳುತ್ತಿದ್ದೇನೆ. ಎಂ. ಬಿ. ಬಿ. ಎಸ್. ಡಿಗ್ರಿಗೆ ಆಲ್ ಇಂಡಿಯಾ ಕೌನ್ಸಿಲ್ ರೆಕಗ್ನೀಷನ್ ಯಾವಾಗ ಆಗುತ್ತೆ ಎಂದು. ಅದು ಆಗುವುದಕ್ಕೆ ಇನ್ನೂ ಸುಮಾರು ಎಷ್ಟು ವರ್ಷಗಳಾಗಬಹುದು. ಅದು ಆಗುವುದೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಿದರೆ ಒಳ್ಳೆಯದು.

ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ಒಬ್ಬ ಡಿ. ಎಂ. ಓ. ಹಾಕುತ್ತಾರೆ. ಅವರಿಗೆ ಸರ್ಜರಿ ಚೆನ್ನಾಗಿ ಗೊತ್ತಾಗುವುದಿಲ್ಲ. ಆದ್ದರಿಂದ ಅವರು ಎಲ್ಲೋ ಕೊಯ್ದು ಏನೋ ಆಗುತ್ತದೆ. ಅದಕ್ಕೋಸ್ಕರ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ ಒಬ್ಬರು ಸರ್ಜನ್ಸ್‌ಗೆ ಗೊತ್ತಿರುವ ಡಿ. ಎಂ. ಓ. ಲೇಡಿ ಡಾಕ್ಟರನ್ನು ಒಬ್ಬ ENT ನೇಮಕಮಾಡಬೇಕೆಂದು ನನ್ನ ಸಲಹೆ.

ಇನ್ನು ಶಿವಮೊಗ್ಗದಲ್ಲಿ ಒಂದು ಮೆಡಿಕಲ್ ಸ್ಕೂಲು ಇತ್ತು. ಈಗ ಅದು ಹೊರಟುಹೋಯಿತು. ಅದಕ್ಕೆ ಸಂಬಂಧಪಟ್ಟಂತೆ ಎರಡು ಲಕ್ಷ ರೂಪಾಯಿಗಳು ಸರ್ಕಾರದವರ ಕಡೆಯಲ್ಲಿಯೇ ಬಾಕಿ ಇದೆ. ಆ ಹಣವನ್ನು ಉಪಯೋಗಿಸಿಕೊಂಡು ಶಿವಮೊಗ್ಗಾದಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕೆಂದು ವಿನಂತಿ.

ಇನ್ನು ನಮ್ಮ ಆರೋಗ್ಯ ಮಂತ್ರಿಗಳು ತುಂಬಾ ನಿಧಾನ. ಬಹಳ ಒಳ್ಳೆಯವರು. ಸಾತ್ವಿಕದ ಶಾಂತ ಮೂರ್ತಿ. ಇದರ ಉಪಯೋಗ ದುರುಪಯೋಗವಾಗುತ್ತಿದೆ. ಇವರಿಗೆ ಗೊತ್ತಿಲ್ಲದೆ ಕೆಲವು ಪ್ರಮೋಷನ್‌ಗಳು ನಡೆದು ಹೋಗುತ್ತವೆ. ಆದ್ದರಿಂದ ಅವರು ಸ್ವಲ್ಪ ಉಗ್ರಮೂರ್ತಿಯಾಗಿ ಆಡಳಿತದ ವೈಖರಿಯನ್ನು ಚೆನ್ನಾಗಿ ಅರಿತುಕೊಂಡು ಸ್ವಲ್ಪ ಜಾಗ್ರತರಾಗಿ ಅವರು ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಇಷ್ಟು ಹೊತ್ತು ಅವಕಾಶವನ್ನು ಕೊಟ್ಟದ್ದಕ್ಕಾಗಿ ನಮ್ಮ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷಿಣಿಯವರೇ, ಈ ನಮ್ಮ ವೆಲ್‌ಫೇರ್ ಸ್ಟೇಟಿನಲ್ಲಿ ಮೊಟ್ಟ ಮೊದಲನೆಯಸ್ಥಾನ ಬಹಳ ಪ್ರಾಮುಖ್ಯವಾದ ಸ್ಥಾನವನ್ನು ಹೊಂದಿರುವ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಬೇಡಿಕೆಗಳ ಮೇಲೆ ನಾನು ಮಾತನಾಡಬೇಕೆಂದು ನಿಂತಿದ್ದೇನೆ. ರೋಗದಿಂದ ನರಳುವ ಜನಗಳಿಗೆ, ನೋವಿನಿಂದ ಒದ್ದಾಡುವ ಜನಗಳಿಗೆ, ಸಾವಿನೊಂದಿಗೆ ಹೋರಾಡುವುದಕ್ಕೆ ಅಶಕ್ತರಾದ ಜನಗಳಿಗೆ, ಪ್ರಾಣ ಭಿಕ್ಷೆಯನ್ನು ಕೊಡುವ, ನೋವನ್ನು ನಿವಾರಣೆ ಮಾಡುವ, ರೋಗದಿಂದ ಪಾರುಮಾಡುವ ಪ್ರವೃತ್ತಿಯನ್ನು ಒಳಗೊಂಡಿರತಕ್ಕ ಈ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗೆ ಸುಮಾರು 7½ ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಬೇಕೆಂದು ಹೊರಟ್ಟಿದ್ದೀರಿ. ನೀವು ಇಷ್ಟು ಭಾರೀ ಹಣವನ್ನು ಖರ್ಚು ಮಾಡುವಾಗ ಇದರ ಉದ್ದೇಶ ಎಷ್ಟರಮಟ್ಟಿಗೆ ಸಾಧನೆಯಾಗಿದೆ ಎಂದು ನೋಡುವುದಾದರೆ ಅದರ ಉದ್ದೇಶ ಹಾಗಿರಲಿ, ಇದು ವ್ಯಾಪಾರ ಉದ್ಯಮವಾಗಿದೆಯೆಂದು ಹೇಳಬೇಕಾಗಿದೆ. ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ಹುಡುಗ ಫೀಜು ಕೊಡುವುದು ಒಂದು ವರ್ಷಕ್ಕೆ 720 ರೂಪಾಯಿಗಳು. ಸರ್ಕಾರದವರು ಒಬ್ಬ ಹುಡುಗನಿಗೆ ಖರ್ಚು ಮಾಡುವುದು ಒಂದು ವರ್ಷಕ್ಕೆ 3,500 ರೂಪಾಯಿಗಳು. ಎಂದರೆ ಒಬ್ಬ ಹುಡುಗ ಆಸ್ಪತ್ರೆಯಲ್ಲಿ ಡಾಕ್ಟರಾಗುವುದಕ್ಕೆ ಸರ್ಕಾರದವರು 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಇದು ಯಾರ ದುಡ್ಡು? ಆ ಮೇಲೆ ಅವನನ್ನು ಸ್ಪೆಷಲಿಸ್ಟ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಫಾರಿನ್ ಕಂಟ್ರಿಗೆ ಕಳುಹಿಸುತ್ತಾರೆ. ಇಲ್ಲಾ ಬೇರೆ ಇನ್ನು ಯಾವುದಾದರೂ ಕಾಲೇಜಿಗೆ ಕಳುಹಿಸಿಕೊಡುತ್ತಾರೆ. ಈ ದುಡ್ಡು ಎಲ್ಲವೂ ಯಾವುದು? ಬಡಬೋರೇಗೌಡನ ದುಡ್ಡು. ಈ ದುಡ್ಡಿನಲ್ಲಿ ಅವನು ಓದಿ ಪರೀಕ್ಷೆಗಳನ್ನು ಪಾಸುಮಾಡಿಕೊಂಡು ಸ್ಪೆಷಲಿಸ್ಟ್ ಆಗಿ ಡಾಕ್ಟರಾಗಿ ಬರುವಾಗ ಅವರು ನಾವು ಪ್ರಿವಿಲೆಡ್ ಕ್ಲಾಸ್ ಎಂದು ತಿಳಿದುಕೊಂಡು ವಾಪಸ್ಸು ಬರುತ್ತಾರೆ. ಯಾವ ಆಸ್ಪತ್ರೆಗೆ ಹೋದರೂ ಕೂಡ ಎಲ್ಲರೂ ದ ದ್ದು ದ ದ್ದು ಎಂದು ಕೇಳುತ್ತಿದ್ದಾರೆ. ಪ್ರತಿಯೊಬ್ಬರೂ ದುಡ್ಡನ್ನು ಕಲೆಕ್ಷನ್ ಮಾಡುವುದಕ್ಕೆ ತೊಡಗುತ್ತಾರೆ. ಯಾರಿಗೆ ಎಷ್ಟು ಸಂಬಳವನ್ನು ಕೊಟ್ಟರೂ ಸಾಕಾಗುವುದಿಲ್ಲ. ಅದು ಏನು ಕಾರಣವೋ ನನಗಂತೂ ಗೊತ್ತಾಗುವುದಿಲ್ಲ. ಆ ವಿಷಯದಲ್ಲಿ ನಾನು ಹೇಳಬೇಕಾದರೆ ನಾವು ಬರೀ ಆಸ್ಪತ್ರೆಗಳಿಗೆ ಸಂಬಂಧಪಟ್ಟ ಡಾಕ್ಟರುಗಳು ಮತ್ತು ಇತರೇ ನೌಕರರುಗಳನ್ನು ಬ್ಲೇಮ್ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ನಡೆಯುವುದಕ್ಕೆ ಸರ್ಕಾರದವರದೂ ಕಾರಣ ಇದೆ. ಇದಕ್ಕೆ ಕಾರಣ ಸರ್ಕಾರದ ಅಡ್ಮಿನಿಸ್ಟ್ರೇಷನ್ ಸ್ಲಾಕ್‌ನೆಸ್ ಎಂದು ಹೇಳವೆ ವಿಧಿಯಿಲ್ಲ. ಈಗಾಗಲೇ ಶ್ರೀಮತಿ ರತ್ನಮ್ಮ ಮಾಧವ ರಾವ್ ಅವರು ಹೇಳಿದರು ನಮ್ಮ ಆರೋಗ್ಯ ಖಾತೆಯ ಮಂತ್ರಿಗಳು ತುಂಬಾ ಶಾಂತ ಮೂರ್ತಿಗಳಾಗಿದ್ದಾರೆ; ಅವರು ಸ್ವಲ್ಪ ಉಗ್ರರೂಪವನ್ನು ತಾಳಬೇಕು ಎಂದು. ಅದಕ್ಕೆ ನಾನು ಹೇಳುವುದು ಏನೆಂದರೆ ಅವರು ವುಗ್ರರೂಪವನ್ನು ತಾಳಬೇಕಾಗಿಲ್ಲ. ಎಲ್ಲಿ ಏನು ಮಾಡಬೇಕೋ ಅದನ್ನು ಮಾಡಿದರೆ ಎಲ್ಲವೂ ಸರಿಹೋಗುತ್ತದೆ ಎಂದು ನನ್ನ ಭಾವನೆ.

ಈಗ ನನ್ನ ಹತ್ತಿರ ಒಂದು ಗೌರ್ನಮೆಂಟ್ ಆರ್ಡರ್ ಇದೆ. ಬೇಕಾದರೆ ಅದನ್ನು ಕೊಡುತ್ತೇನೆ. ಅದರಲ್ಲಿ ಬಹಳ ಕಟ್ಟು ನಿಟ್ಟಾಗಿ ಹೇಳಿದ್ದಾರೆ. ಅದು ಏನೆಂದರೆ ಅಸೋಸಿಯೇಟೆಡ್ ಪ್ರೊಫೆಸರ್ಸ್ ಟೀಚಿಂಗ್ ಇನ್‌ಸ್ಟಟ್ಯೂಷನ್ ವರ್ಕ್‌ನಲ್ಲಿರುವವರು ಕನ್‌ಸಲ್ಟೇಷನ್ ಪ್ರಾಕ್ಟೀಸ್ ಏನೂ ಮಾಡಕೂಡದು ಎಂದು. ಆದರೆ ಅವರು ಏನು ಮಾಡುತ್ತಿದ್ದಾರೆಂದರೆ ಪ್ರತಿಯೊಬ್ಬರೂ ಆಸ್ಪತ್ರೆಯ ಚೀಟಿಗಳನ್ನು ಮನೆಯಲ್ಲಿಟ್ಟುಕೊಂಡು ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಆಸ್ಪತ್ರೆಗೆ ಬಂದ ರೋಗಿಗಳನ್ನು ಸರಿಯಾಗಿ ನೋಡುವುದಿಲ್ಲ. ಅವರನ್ನು ಆಸ್ಪತ್ರೆಯಲ್ಲಿ ನೆಗ್ಲೆಕ್ಟ್ ಮಾಡಿ ಅವರನ್ನು ಮನೆಗೆ ಬರುವ ಹಾಗೆ ಮೆನೋವರ್ ಮಾಡಿಕೊಂಡು ಜನತೆ ಅವರಿಗೆ ದುಡ್ಡು ಕೊಡುವ ಹಾಗೆ ಮಾಡಿಕೊಳ್ಳುತ್ತಾರೆ. ನಾನು ಸರ್ಕಾರವನ್ನು ಕೇಳುತ್ತೇನೆ. ಅವರು ಪ್ರೈವೇಟ್ ಕನ್‌ಸಲ್ಟೇಷನ್ ಪ್ರಾಕ್ಟೀಸ್ ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಅವಕಾಶವನ್ನು ಕೊಡಬೇಕು ? ಸರ್ಕಾರದವರು ಅವರಿಗೆ ಸಾಕಷ್ಟು ಸಂಬಳ ವನ್ನು ಕೊಟ್ಟ ಮೇಲೆ ಅವರು ಸರ್ಕಾರದ ರೂಲ್ಸ್ ಪ್ರಕಾರ ಕಟ್ಟು ನಿಟ್ಟಾಗಿ ಇರಬೇಕು. ಯಾರೇ ಆಗಲೀ ಒಂದು ಸಾರಿ ಸರ್ಕಾರದ ಕೆಲಸಕ್ಕೆ ಬಂದ ಮೇಲೆ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳಲೇಬೇಕು. ಒಂದು ವೇಳೆ ಅವರು ಆ ರೀತಿ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳದೇ ಹೋದರೆ ಅವರಿಗೆ ಶಿಕ್ಷೆಯನ್ನು ವಿಧಿಸಬೇಕು. ಇಲ್ಲದೇ ಹೋದರೆ ಅವರು ಅವರ ಮನಸ್ಸಿಗೆ ಬಂದಹಾಗೆ ನಡೆದುಕೊಂಡು ಹೋಗುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಡಾಕ್ಟರಾಗ ತಕ್ಕವರಿಗೆ ನಾನಾವಿಧವಾದ ಸೌಲಭ್ಯಗಳು ದೊರೆಯುತ್ತವೆ. ಸರ್ಕಾರದವರು ಅವರನ್ನು ಫಾರಿನ್ನಿಗೆ ಕಳುಹಿಸುತ್ತಾರೆ. ಅವರಿಗೆ ಸ್ಟಡಿ ಲೀವನ್ನು ಕೊಡುತ್ತಾರೆ. ಮೆಟರ್ನಿಟಿ ಲೀವನ್ನು ಕೊಡುತ್ತಾರೆ, ಆ ಮೇಲೆ ಅವರು ರಿಟೈರ್ಡ್ ಆದಮೇಲೆ ಪೆನ್‌ಷನ್ ಕೊಡುತ್ತಾರೆ. ಈ ರೀತಿ ಅವರಿಗೆ ನಾನಾ ವಿಧವಾದ ಸೌಲಭ್ಯಗಳು ದೊರೆಯುತ್ತವೆ. ಸರ್ಕಾರಿ ಆಸ್ಪತ್ರೆಗಳನ್ನು ನರ್ಸಿಂಗ್ ಹೋಮ್ ಮಾಡಿ ಕೊಂಡು ಬೆಡ್‌ಗಳು, ಆಪರೇಷನ್ ಥೀಯಟರ್, ಎಕ್ಸ್‌ರೇ ಫೆಸಿಲಿಟೀಸ್, ಔಷಧಿ ಇತ್ಯಾದಿ ಎಲ್ಲಾ ಸೌಲಭ್ಯಗಳನ್ನೂ ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಪ್ರೈವೇಟ್ ನರ್ಸಿಂಗ್ ಹೋಮ್ ಮಾಡಿಕೊಂಡು ಆಸ್ಪತ್ರೆಯ ಸಾಮಾನುಗಳನ್ನು ಅಲ್ಲಿಗೆ ತೆಗೆದು ಕೊಂಡು ಹೋಗಿ ಅದನ್ನು ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. 5 ರೂಪಾಯಿ ಗಳನ್ನು ಕೊಟ್ಟು ಒಂದು ಸಿರಂಜ್ ಕೂಡ ಇವರು ಕೊಂಡುಕೊಳ್ಳುವುದಿಲ್ಲ. ಇಷ್ಟೆಲ್ಲಾ ಸೌಲಭ್ಯ ಗಳನ್ನೂ ಮತ್ತು ಆ ಸಾಮಾನುಗಳನ್ನೂ ಅವರು ತಮ್ಮ ಸ್ವಂತ ಉಪಯೋಗಕ್ಕೆ ಇಟ್ಟುಕೊಳ್ಳಲು ಅವುಗಳನ್ನೇನಾದರೂ ಅವರು ಭೋಗ್ಯಕ್ಕೆ ಹಾಕಿ ಕೊಂಡಿದ್ದಾರೆಯೇ? ಇವೆಲ್ಲವೂ ಸರ್ಕಾರದವರ ದೃಷ್ಟಿಗೆ ಏತಕ್ಕೆ ಬಂದಿಲ್ಲ? ಯಾರಾದರೂ ಅವರನ್ನು ವಿಚಾರ ಮಾಡಿದರೆ ನಾವು ಸ್ಪೆಷಲೈಜ್ ಮಾಡಿ ಕೊಂಡು ಬಂದಿಲ್ಲವೇ ಎಂದು ಉದ್ದಂಡತನದ ಜವಾಬನ್ನು ಕೊಡುತ್ತಾರೆ. ಈಗ ಬೊಂಬಾಯಿನಲ್ಲಿ ಆನರರಿ ಸರ್ಜನ್ ಆಗಿ ಆಸ್ಪತ್ರೆಯಲ್ಲಿ ಇರುವುದನ್ನು ನೋಡಲಿ. Teaching ಮತ್ತು working staff ಎಲ್ಲಾ Honorary. ದೊಡ್ಡ ದೊಡ್ಡ ಡಾಕ್ಟರುಗಳನ್ನು ಸರ್ಕಾರದವರು Honorary ಆಗಿ work ಮಾಡಲು Doctorಗಳನ್ನು ಕರೆಯುವುದು Honour ಎಂದು ತಿಳಿದಿದ್ದಾರೆ. Doctorಗಳು ತಾವು ಕೆಲಸ ಮಾಡುವುದು ಗೌರವ ಎಂದು ಕೊಂಡಿದ್ದಾರೆ. ಇಲ್ಲಿಯ ಹಾಗೆ ಹೊಟ್ಟೆಗಿಲ್ಲದೆ, ಕೆಲಸವಿಲ್ಲದೆ ಅವರಿಗೆ ಬೇಕಾದ Doctorಗಳು ಬರುತ್ತಾರೆ ಎಂದು ತಿಳಿದಿಲ್ಲ. ಇಲ್ಲೂ ಹಾಗೆ ಸರ್ಕಾರಿ Doctorಗಳಿಗೆ ಎಫಿಷಿಯೆನ್ಸಿ ಇದ್ದರೆ ರಿಜೈನ್ ಮಾಡಿ ಹೋಗಲೀ ಯಾರು ಬೇಡ ಎಂದು ಹೇಳಿದ್ದಾರೆ? ಇವರೂ ಆನರರಿ ಸರ್ಜನ್‌ಆಗಿ ಕೆಲಸ ಮಾಡಿ ತಮ್ಮ show ತೋರಿಸಲಿ ಅದು ಬಿಟ್ಟು ಸರ್ಕಾರಿ ಹಣ, ಸಂಬಳ, ಕೆಲಸ ತೆಗೆದುಕೊಂಡು ಬಡ ರೋಗಿಗಳನ್ನು ನೆಗ್ಲೆಕ್ಟ್ ಮಾಡುವುದು ಸರಿಯೇ ? ಬಡ ರೈತರು ಕೊಡತಕ್ಕ ಕಂದಾಯದಿಂದ ಆಸ್ಪತ್ರೆಗೆ ಸಾಮಾನುಗಳನ್ನು ತಂದಿದ್ದರೆ ಅವುಗಳನ್ನು ಇವರು ತಮ್ಮ ಸ್ವಂತಕ್ಕೆ ಏತಕ್ಕೆ ಉಪಯೋಗ ಮಾಡಿಕೊಳ್ಳಬೇಕು ? ಆಸ್ಪತ್ರೆಗೆ ಬಂದ ರೋಗಿಗಳನ್ನು ಸರಿಯಾಗಿ ನೋಡದೆ ಅವರು ತಮ್ಮ ಮನೆಗೆ ಬರುವ ಹಾಗೆ ಮಾಡಿಕೊಂಡು ಅ ರಿಂದ ದುಡ್ಡನ್ನು ತೆಗೆದುಕೊಳ್ಳುವುದು ಯಾವ ಧರ್ಮ ಎಂದು ನಾನು ಕೇಳುತ್ತೇನೆ. ನಿಜವಾಗಿಯೂ ಇದನ್ನು ನೋಡಿದರೆ ಸಹಿಸಲಾರದಂತಹ ಸಂಕಟವಾಗುತ್ತದೆ. ಆಸ್ಪತ್ರೆಗಳಲ್ಲಿ ದೊಡ್ಡ ಮನುಷ್ಯರಿ

ಗಾದರೆ ಬೇಕಾದಷ್ಟು ಅನುಕೂಲತೆಗಳಿರುತ್ತವೆ. ಆದರೆ ಬಡವರಿಗೆ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ. ಮಿಷನ್ ಆಸ್ಪತ್ರೆಗಳನ್ನು ಎಷ್ಟೋ ಚೆನ್ನಾಗಿ ನಡೆಸುತ್ತಾರೆ. ಆದರೆ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ. ನಾನು ಒಂದು ಸಜೆಷನ್ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಅನುಕೂಲಸ್ಥರಾಗಿರತಕ್ಕವರು ಆಸ್ಪತ್ರೆಗಳಲ್ಲಿ ಕ್ಯೂನಲ್ಲಿ ನಿಂತುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಆಸ್ಪತ್ರೆಗಳಲ್ಲಿ ಅವರಿಗೆ ಪ್ರಿಸ್‌ಕ್ರಿಪ್‌ಷನ್ ಕೊಡುವುದಕ್ಕೆ Consultation ಗೋಸ್ಕರ ಒಂದು ಏಜನ್ಸಿ fix ಮಾಡಿ ಈ Secretary ಡಾಕ್ಟರುಗಳನ್ನು ನೇಮಿಸಿ ಒಂದು ದಿವಸಕ್ಕೆ ಎರಡು ಗಂಟೆ ಮೂರು ಗಂಟೆಯಂತೆ ಆ Consultation practice ನಡೆಸಿ ಅದರಿಂದ ಬಂದ ದುಡ್ಡನ್ನು ಸರ್ಕಾರಕ್ಕೆ ಡಿಪಾಜಿಟ್ ಮಾಡಬೇಕೆಂದು ಹೇಳಿದರೆ ಆಗ ಸರ್ಕಾರದವರು ಒಬ್ಬರು ಡಾಕ್ಟರಿಗೆ ಅವರ ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡಿರತಕ್ಕ 20 ಸಾವಿರ ರೂಪಾಯಿಗಳಾದರೂ ಸರ್ಕಾರಕ್ಕೆ ವಾಪಸ್ಸು ಬರುತ್ತದೆ. Government should earn the money back. ಇದರಲ್ಲಿ ಎರಡುವಾದವಿದೆ. Hospital ನಲ್ಲೂ ಕೆಲಸಮಾಡಿ, ಮನೆಯಲ್ಲೂ practice ಮಾಡಲು ಶಕ್ತಿ ಅವರಿಗಿದೆ ಎಂದು ಕೆಲವರವಾದ. ನಾನಾದರೂ ಅವರಿಗೆ ಹೇಳುವುದೇನೆಂದರೆ, ಇವರೂ ಮನುಷ್ಯ ಮಾತ್ರದವರು, ಇವರು ದೇವಲೋಕದಿಂದ ಇಳಿದು ಬಂದಿಲ್ಲ. ಇವರು ಹಾಗೆ ವಿಪರೀತ ಕೆಲಸ ಮಾಡಿ ಶಕ್ತಿಗುಂದಬಾರದು, ಅವರೂ rest ತೆಗೆದುಕೊಳ್ಳಬೇಕು. We should not allow them because they are an assest to our country, we cannot afford to lose them. ಆದ್ದರಿಂದ ಅವರುಗಳು ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದು ಎಂದು ಸರ್ಕಾರದವರು ಹೇಳಬೇಕು.

5-00 P.M.

ಹೀಗೆಯೇ ನಾವು ಹೇಳುತ್ತಾ ಬಂದರೆ ಇವರು ನಮಗೆ consultation practice ಬೇಕು, ದುಡ್ಡು ಬೇಕು ಎಂದು ಕೇಳುತ್ತಾರೆಂದು ಇಟ್ಟುಕೊಳ್ಳೋಣ. ಹಾಗಾದರೆ ಸರ್ಕಾರದಲ್ಲಿ disceriminate ಮಾಡಿದ ಹಾಗಾಗುತ್ತದೆ. ಅವರಿಗೆ ಆ ತರಹ ಸೌಲಭ್ಯವನ್ನು ಕೊಟ್ಟರೆ ಬಾಕಿ ಸರ್ಕಾರದ ನೌಕರರಿಗೂ ಕೊಡಬೇಕು. ರಾಜ್ಯದಲ್ಲಿ ಇಂಜಿನಿಯರುಗಳಿದ್ದಾರೆ, ಪ್ರೊಫೆಸರುಗಳಿದ್ದಾರೆ, ಆಡಿಟರುಗಳಿದ್ದಾರೆ, ಜಡ್ಜಿಗಳಿದ್ದಾರೆ, ಇತರರಿದ್ದಾರೆ. ಅವರವರ ವೃತ್ತಿಯಲ್ಲಿ ಅವರವರು ಪ್ರವೀಣರು. ಇಂಜಿನಿಯರುಗಳು ಕೆಲಸದ ವೇಳೆ ಮುಗಿದನಂತರ ಕಂಟ್ರಾಕ್ಟ್ ಮಾಡಿಕೊಳ್ಳುತ್ತೇವೆಂದೂ, ಪ್ರೊಫೆಸರುಗಳು ಎಲ್ಲಿಯಾದರೂ ಹೋಗಿ ಪಾಠ ಹೇಳಿಕೊಂಡು ಸಂಪಾದನೆ ಮಾಡುತ್ತೇವೆಂದೂ, ಆಡಿಟರುಗಳು ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಇದು ಏಕೆ ಆಗಬಾರದು, ನ್ಯಾಯಾಧೀಶರೂ ಜಡ್ಜ್‌ಮೆಂಟ್ ಕೊಟ್ಟಾದ ಮೇಲೆ ಪ್ರಾಕ್ಟೀಸ್ ಮಾಡುತ್ತೇವೆಂದರೆ ಏಕೆ ಆಗಬಾರದು. ಹೀಗಿರುವಾಗ ಡಾಕ್ಟರುಗಳದು ಮಾತ್ರ ಯಾವ ತರಹ privileged ಕೆಲಸ ಎನ್ನುವುದು ನನಗೆ ಗೊತ್ತಿಲ್ಲ. ಸತ್ತು ಬೀಳುವ ಪರಿಸ್ಥಿತಿಯಲ್ಲಿ ಕೇಳಿಕೊಂಡು ಬರುವಂಥ ಜನರ ಮೇಲೆ ಇವರು ವ್ಯಾಪಾರ ಮಾಡುತ್ತಾರೆಂದರೆ ಇದು ನಿಜವಾಗಿಯೂ ನಾಚಿಕೆ ಬರುವಂಥ ವಿಚಾರ. ಹಾಸ್ಯಾಸ್ಪದವಾದ ವಿಚಾರವೆಂದು ಹೇಳುತ್ತಿದ್ದೇನೆ.

ಹಿಂದಿನ ಕಾಲದಲ್ಲಿ ಅಶ್ವಿನೀಕುಮಾರರು ಹಣ ತೆಗೆದುಕೊಳ್ಳದೆ ಚಿಕಿತ್ಸೆ ಮಾಡಿ ಔಷಧಿಕೊಟ್ಟರೆ ಆಗ ಹಸ್ತ ಶುದ್ಧಿ ಇರುತ್ತೆಂದು ವೇದದಲ್ಲಿ ಬರೆದಿದೆ ಎಂದು ಹೇಳುತ್ತಾರೆ. ಆದರೆ ಈಗ ಯಾರಾದರೂ ಆಸ್ಪತ್ರೆಗೆ ಹೋಯಿತು ಎಂದರೆ ಹೋಗುತ್ತಿದ್ದ ಹಾಗೆಯೇ ದುಡ್ಡು ಕೊಡಿ, ದುಡ್ಡು ಕೊಡಿ ಎಂದು ಆಯಾ ಲಜ್ಜೆ ಇಲ್ಲ, ಮುಂದೆ ಬರುತ್ತಾರೆ. ದುಡ್ಡು ಕೊಡದೆ ಯಾರೂ ಯಾವ ಕೇಸನ್ನೂ ನೋಡುವ ಹಾಗೆಯೇ ಇಲ್ಲ.

ಟ್ರಾನ್ಸ್‌ಫರ್ ವಿಚಾರದಲ್ಲಿ ನಾನಾಗಲೇ ಹೇಳಿದ್ದೇನೆ. ಯಾರಾದರೂ ಮೈಸೂರು. ಬೆಂಗಳೂರು, ಇಂಥ ಕಡೆ ಬಂದರು ಅವರು ಅಲ್ಲಿಂದ ಬೇರೆ ಕಡೆ ಹೋಗುವ ಹಾಗೆಯೇ ಇಲ್ಲ. ಮೈಸೂರು ಬೆಂಗಳೂರುಗಳನ್ನು ಗುತ್ತಿಗೆಗೆ ಕೊಟ್ಟಿದ್ದೀರಾ ಇವರಿಗೆ? ಶ್ರೀಮತಿ ರತ್ನಮ್ಮನವರ. district headquarterನಲ್ಲಿ ಕತ್ತಿ ಹಿಡಿಯುವುದಕ್ಕೆ ಬರದೆ ಇರುವವರನ್ನು ಹಾಕುತ್ತಾರೆಂದು, F.R.C.S. ಓದಿ, ಸ್ಪೆಷಲೈಜ್ ಮಾಡಿಕೊಂಡು ಇರುವವರು ಜಿಲ್ಲೆಗಳಿಗೆ ಹೋಗಿ ಅಲ್ಲಿಯ ಜನಗಳಿಗೂ ಸ್ವಲ್ಪ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು. ಅವರು ಬೆಂಗಳೂರು, ಮೈಸೂರು ನಗರಗಳಲ್ಲಿ ಮಾತ್ರ ಏಕೆ ಇರಬೇಕು? ಇಲ್ಲಿರುವವರು ಆಸ್ಪತ್ರೆಗಳನ್ನು private nursing homes ಮಾಡಿಕೊಳ್ಳುತ್ತಾರೆ. ನಮ್ಮ ಮಂತ್ರಿಗಳು ಹಿಂದೆ ಹೇಳಿದರು. ಎಂ. ಎಲ್. ಎ. ಆದವರು ಯಾರು interfere ಮಾಡಬಾರದು. ಎಲ್ಲರನ್ನೂ ವರ್ಗ ಮಾಡುತ್ತೇವೆ ಎಂದು. ಆದರೆ ಒಂದು ವರ್ಷವಾದರೂ ಯಾರನ್ನಾದರೂ ವರ್ಗ ಮಾಡಿದ್ದಾರೆಯೇ? ಎಲ್ಲರೂ ಅವರವರ ಸ್ಥಳದಲ್ಲಿಯೇ ಇದ್ದಾರೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ರೆವೆನ್ಯೂ ಇಲಾಖೆಯಲ್ಲಿ ಒಂದು ಖಾತೆಯವರನ್ನೂ ಬೇರೆಯವರಿಗೆ ಬದಲಾಯಿಸಿ ಎಂದರೆ ಹತ್ತು ರೂಪಾಯಿ ಕೊಟ್ಟರೆ ಅದು ಲಂಚ, ಒಬ್ಬ ಉಪಾಧ್ಯಾಯರಿಗೆ ಪಾಠ ಹೇಳಿ ಎಂದು ಇಪ್ಪತ್ತೈದು ರೂಪಾಯಿ ಕೊಟ್ಟರೆ ಲಂಚ. ಆದರೆ ಡಾಕ್ಟರುಗಳು ತೆಗೆದುಕೊಳ್ಳುವುದು ಲಂಚವಲ್ಲದೆ ಮತ್ತೇನು ?

AN HON'BLE MEMBER.—Medical charges.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬೇರೆ ಬೇರೆ ಹೆಸರು ಕೊಡಬಹುದು. ಯಾರಿಗಾದರೂ ಸ್ಕಾಲರ್‌ಷಿಪ್ ಕೊಡಬೇಕು ಎಂದು ಕೇಳಿದರೆ ಮಾನ್ಯ ಸದಸ್ಯರು ಡೊನೇಷನ್ ಕೊಟ್ಟರೆ ಕೊಡುತ್ತೇವೆಂದು ಹೇಳುತ್ತಾರೆ. ಅಷ್ಟು ಲಘುವಾಗಿ ಉತ್ತರ ಕೊಡದೆ ಸರಿಯಾಗಿ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಎಕ್ಸರೇ ಉಪಕರಣಗಳನ್ನು ಎಷ್ಟೋ ಖರ್ಚು ಮಾಡಿ ಏಕೆ ತರಿಸುತ್ತಾರೆನ್ನುವುದು ನನಗೆ ಗೊತ್ತಾಗುವುದಿಲ್ಲ. ಮೊನ್ನೆ ಮಲ್ಲೇಶ್ವರಕ್ಕೆ ಹೋಗಿ ನೋಡಿಕೊಂಡು ಬಂದೆ. ಹಾಗೇಯೇ ಮೈಸೂರಿನಲ್ಲಿಯೂ ಒಂದು equipment ಬಿದ್ದಿದೆ. ಯಾರಾದರೂ ಆಸ್ಪತ್ರೆಗೆ ಹೋದರೆ ಅದನ್ನು ಉಪಯೋಗಿಸಲು technicians ಇಲ್ಲ ಎಂದು ಹೇಳುತ್ತಾರೆ. ಇವತ್ತಿನ ದಿವಸ ವರ್ಷಕ್ಕೆ 36 ಜನರನ್ನು train ಮಾಡುತ್ತೇವೆಂದು ಹೇಳುತ್ತಾರೆ. ಇವರೆಲ್ಲ ಎಲ್ಲಿಗೆ ಹೋಗುತ್ತಾರೆ, ಏನು ಎನ್ನುವುದನ್ನು ಸ್ವಲ್ಪ ದಯಮಾಡಿ ಹೇಳಬೇಕು.

ನಾನು ಒಂದು starred question ಕಳಿಸಿ, ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ bed strength ಎಷ್ಟಿದೆ, ಸಿಬ್ಬಂದಿ ಎಷ್ಟಿದೆ ಎಂದು ಎಲ್ಲ ಕೇಳಿದ್ದೇನೆ. 1962ರಲ್ಲಿ 336 bed strength ಇದ್ದುದು ಈಗ ಸುಮಾರು 650-700 ಜನರಿದ್ದಾರೆ. ಆ ಹೊತ್ತು nursing staff ಎಷ್ಟು ಇತ್ತು ಇವತ್ತೂ ಅಷ್ಟೇ ಇದೆ. ಇವರು 650-700 ಜನ ರೋಗಿಗಳನ್ನು nurse ಮಾಡಬೇಕು ಎಂದರೆ ಹೇಗೆ, ಅದು ಹುಡುಗಾಟಿಕೆಯೇ ? ಮನೆಯಲ್ಲಿ ಒಬ್ಬ ರೋಗಿ ಇದ್ದರೇನೆ ನೋಡಿಕೊಳ್ಳುವುದು ಕಷ್ಟವಾಗುವಾಗ 750 ಜನ ರೋಗಿಗಳನ್ನು ಒಂದೇ ಸಮನಾಗಿ 27 ಜನ staff nurses ಮತ್ತು 119 ಜನ probationery nurses ಇದ್ದರೆ ನೋಡಿಕೊಳ್ಳುವುದಕ್ಕೆ ಸಾಧ್ಯವೇ ? ಅವೇ ಬೆಂಗಳೂರು ಆಸ್ಪತ್ರೆಗಳಲ್ಲಿ ಬೇಕಾದಷ್ಟು ಜನರಿದ್ದಾರೆ. ಇವರನ್ನೂ ಕೆಲವರನ್ನು ಅಲ್ಲಿಗೆ ಬದಲಾಯಿಸಿ ಕೆಲಸ ಮಾಡಿಸಬಹುದು. ಅಷ್ಟು ಕೂಡ ಈ ಆಡಳಿತದಲ್ಲಿ ನಡೆಯುವುದಿಲ್ಲವೆ ? ಇದನ್ನು ಸರಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ? ಇದನ್ನೂ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಹೊತ್ತು 890 ಜನ sick nurses ತರಬೇತಿ ಕೊಡುತ್ತಿದ್ದೇವೆಂದು ಹೇಳುತ್ತಾರೆ. ಅಲ್ಲದೆ 380 ಜನ nurse ಮತ್ತು mindwives train ಮಾಡುತ್ತಿದ್ದೇವೆಂದು ಹೇಳುತ್ತಾರೆ. ಹೀಗೆ train ಮಾಡಿದವರನ್ನೆಲ್ಲ ಎಲ್ಲಿಗೆ ಕಳಿಸುತ್ತೀರಿ ? ಇಷ್ಟು ಖರ್ಚು ಮಾಡಿ train ಮಾಡಿರುವವರ ಕಥೆ ಏನಾಗುತ್ತದೆಂದು ಸ್ವಲ್ಪ ಹೇಳಿ.

ಯಾವ ಆಸ್ಪತ್ರೆಯಲ್ಲಿಯೂ nurses, ಆಯಾ, ಆಳು ಮತ್ತು ಸಾಕಾದಷ್ಟು menial staff ಇಲ್ಲ. ಬೆಡ್ ಪ್ಯಾನ್ ಕೊಟ್ಟರೆ ಅದನ್ನು ತೆಗೆಯುವವರೇ ಗತಿಇಲ್ಲ. ರೋಗಿಗಳು ಸತ್ತು ಹೋಗುವವರೆಗೂ ಕೂಗಿಕೊಳ್ಳುವಂತಾದರೆ ಹೇಗೆ ? ಹೀಗಾದರೆ ಇದಕ್ಕೆ ಆಸ್ಪತ್ರೆ ಎಂದು ಏಕೆ ಹೇಳುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ನಮ್ಮ ಮಂತ್ರಿಗಳು ಡಾಕ್ಟರಾಗಿದ್ದುಕೊಂಡು ಡಾಕ್ಟರೇ ಆರೋಗ್ಯ ಮಂತ್ರಿಗಳಾದ ಮೇಲೆ ಸಹ ಈ ರೀತಿ ನಡೆಯುತ್ತಿದೆ. ಇದನ್ನು ಕೂಡಲೇ ಸರಿಪಡಿಸುವರೆಂದು ನಾನು ತಿಳಿಯುತ್ತೇನೆ.

[MR. DEPUTY SPEAKER in the Chair.]

Sanatorium ವಿಚಾರ ಹೇಳುವುದಾದರೆ, ಮೈಸೂರು ಸ್ಯಾನಟೋರಿಯಂನಲ್ಲಿ ಲಿಸ್ಟ್ ಯಾವಾಗಲೂ exhaust ಆಗುವುದಿಲ್ಲವೆಂದು ಕಾಣುತ್ತದೆ. ಕೆಲವು advanced cases ಹೋಗಿ ಸೇರಿಸಿ ಎಂದರೆ ಅವರು ಹೇಳುತ್ತಾರೆ. ಇಂಥ ಹಳೆಯ ರೋಗಿಗಳಿಗಿಂತ ಸ್ವಲ್ಪ ವಾಸಿಯಾದವರನ್ನು ತೆಗೆದುಕೊಂಡರೆ ಎಷ್ಟೋ ಅನುಕೂಲ ಎಂದು. ಹಾಗಾದರೆ advanced cases ಏನು ಮಾಡಬೇಕು. ಅವರುಗಳು ಮನೆಗೆ ಹೋಗಿ ಇನ್ನೂ 20 ಜನಗಳಿಗೆ ರೋಗವು ಹರಡುತ್ತದೆ. ಆಸ್ಪತ್ರೆಯಲ್ಲಿಟ್ಟು ಕೊಳ್ಳುವುದಕ್ಕೆ ಜಾಗವಿಲ್ಲವೆಂದು ಹೇಳುತ್ತಾರೆ. ಸರ್ಕಾರದವರು ಎಲ್ಲಿಯಾದರೂ ಹೇಗಾದರೂ ಮಾಡಿ E. D. Hospital ನಲ್ಲಾದರೂ ಇಂಥ ರೋಗಿಗಳಿಗೆ ಜಾಗ ಕೊಟ್ಟು ಸಾಯುವವರೆಗಾದರೂ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಮೈಸೂರಿನಲ್ಲಿರುವ ವಾಣಿ ವಿಲಾಸ ವಾಟರ್‌ವರ್ಕ್ಸ್ ವಿಷಯ ಹೇಳಲು ನಾಚಿಕೆಯಾಗುತ್ತದೆ. ಮೈಸೂರು ನಗರದಲ್ಲಿ half filtered water supply ಮಾಡುತ್ತಿದ್ದಾರೆ. ಯಾವ ಕಾಲ ದಿಂದಲೂ ಹೀಗೆ ಇಲ್ಲ. ನಮ್ಮ ರಾಜ್ಯ, ಅದರ advancement ನೋಡಿದರೆ ನಿರ್ವಾಹವಿಲ್ಲ. ನಮ್ಮ ಸರ್ಕಾರದವರು ತಕ್ಷಣ ಕ್ರಮ ತೆಗೆದುಕೊಂಡು ಶುದ್ಧವಾದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ರತ್ನಮ್ಮನವರು ಮೆಡಿಕಲ್ ಕಾಲೇಜ್ ವಿಚಾರ ಹೇಳಿದರು. ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿಗಳೂ ಅಷ್ಟು ಒಳ್ಳೆಯ ಅಭಿಪ್ರಾಯವನ್ನು ನಮ್ಮ ಕಾಲೇಜು ವಿಷಯದಲ್ಲಿ ಕೊಟ್ಟಿಲ್ಲ. ಆದುದರಿಂದ ನಮ್ಮ ಮೆಡಿಕಲ್ ಕಾಲೇಜಿನ ಮಟ್ಟವನ್ನು ಹೆಚ್ಚಿಸಿ, ಅದನ್ನು ಪರಿವರ್ತನೆ ಮಾಡಿ ಅದಕ್ಕೆ ಮಾನ್ಯತೆ ದೊರೆಯುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಆಸ್ಪತ್ರೆಗಳಿಗೆ ಕೊಡುವ ಖಾದಿ ಬಟ್ಟೆಯ ವಿಚಾರ, ಖಾದಿ ಬಟ್ಟೆಯನ್ನು ಆಸ್ಪತ್ರೆಗಳಿಗೆ ಕೊಡ ಬಾರದು ಎಂದರೆ ನಮಗೆ ದೇಶಾಭಿಮಾನವಿಲ್ಲ ಎಂದಲ್ಲ, ಅಥವಾ ಖಾದಿಯನ್ನು ಉಪಯೋಗಿಸ ಬಾರದು ಎಂದಲ್ಲ. ಖಾದಿ ಬಟ್ಟೆ ನಾಲ್ಕುಸಲ ಡೋಭಿಗೆ ಹೋದರೆ ಅದು ಬಟ್ಟೆಯಾಗಿರುವುದಿಲ್ಲ, ಹಂಜಿ ಯಾಗಿರುತ್ತದೆ. ಅಂಥ ಹಂಜಿಯನ್ನು ಇಟ್ಟುಕೊಂಡು ಆಸ್ಪತ್ರೆಯಲ್ಲಿ ಸುಧಾರಿಸಬೇಕು ಎಂದರೆ ಅದರಲ್ಲಿ ಹತ್ತಿಕೊಂಡಿರುವ ಕಶ್ಮಲಗಳು ಒಂದು ಸಲ ಒಗೆಯುವ ಕಡೆ ಹತ್ತುಸಲ ಒಗೆದರೂ ಹೋಗುವುದಿಲ್ಲ. ಹಾಗೆಯೇ ಇರುತ್ತದೆ, ಆ ಬಟ್ಟೆಗಳನ್ನು ಆಸ್ಪತ್ರೆಗಳಿಗೆ ತೆಗೆದುಕೊಳ್ಳುವ ಅವಶ್ಯ ಕತೆ ಇಲ್ಲ. ಸಾಕಾದಷ್ಟು ಬೇಗ ಅಚ್ಚುಕಟ್ಟಾಗಿರುವ ಗಟ್ಟಿಯಾದ ಬಟ್ಟೆಯನ್ನು ಆಸ್ಪತ್ರೆಗಳಿಗೆ ದಯಮಾಡಿ ಕೊಡಬೇಕೆಂದು ಹೇಳುತ್ತೇನೆ.

ವಿಸಿಟರ್ಸ್ ಬೋರ್ಡ್ ವಿಚಾರ ಹೇಳುವುದಾದರೆ ಮೈಸೂರಿನ ಚಲುವಾಂಬ ಆಸ್ಪತ್ರೆ, ಕೃಷ್ಣ ರಾಜೇಂದ್ರ ಆಸ್ಪತ್ರೆ ಇವುಗಳಿಗೆ ಹೋದ ವರ್ಷದಿಂದ ವಿಸಿಟರ್ಸ್ ಬೋರ್ಡ್ ನೇಮಕ ಮಾಡದ ಹಾಗೆಯೇ ತಳ್ಳಿದ್ದಾರೆ. ಇಂಥವು ಎಷ್ಟೋ ಮಾನ್ಯ ಮಂತ್ರಿಗಳ ಗಮನಕ್ಕೆ ಬರದೆ ಹಾಗೆಯೇ ನಡೆದುಕೊಂಡು ಹೋಗುತ್ತಿದೆ. ಇಂಥವನ್ನು ತಪ್ಪಿಸಬೇಕಾದರೆ ಮಂತ್ರಿಗಳು ಸ್ವಲ್ಪ ಭಯೋತ್ಪಾದನೆಯನ್ನು ಮಾಡಬೇಕು. ಈ ಸಂದರ್ಭದಲ್ಲಿ ನಾನು ಒಂದು ಕಥೆಯನ್ನು ಹೇಳುತ್ತೇನೆ. ನಾಗಪ್ಪ ಎಂಬ ಒಂದು ನಾಗರ ಹಾವು ಇತ್ತು, ಅದು ತಪಸ್ಸುಮಾಡಿತಂತೆ. ಪರಮೇಶ್ವರನು ಪ್ರತ್ಯಕ್ಷನಾಗಿ ಹೇಳಿದನಂತೆ ನೀನು ಒಳ್ಳೆಯವನಾಗಿ ಬಾಳು, ಯಾರಿಗೂ ಕಷ್ಟ ಕೊಡಬೇಡ. ಯಾರಿಗೂ ತೊಂದರೆ ಕೊಡಬೇಡ, ಯೋಗ್ಯನಾಗಿರು ಎಂದು, ಸರಿ ಈ ಹಾವು ಸುಮ್ಮನೆ ಮಲಗಿತ್ತಂತೆ. ಯಾವಾಗ ಇದು ಇಷ್ಟು ಸಾಧುವಾಯಿತೋ ಎಲ್ಲರೂ, ಹೋಗಿ ಬರುವವರೆಲ್ಲ ತುಳಿಯುವುದು, ಕಲ್ಲುಒಗೆಯುವುದು, ಹೊಡೆಯುವುದು ಹೀಗೇ ಹಿಂಸೆ ಮಾಡಲು ಶುರುಮಾಡಿದರಂತೆ, ಹೀಗೆ ತೊಂದರೆಗೆ ಒಳಗಾದ ಹಾವು ನಾಗಪ್ಪ ಪುನಃ ಪರಮೇಶ್ವರನನ್ನು ಕುರಿತು ತಪಸ್ಸುಮಾಡಿ ತಂತೆ, ಹೋಗಿ ಬರುವ ಜನರೆಲ್ಲ ನನ್ನನ್ನು ತುಳಿಯುತ್ತಾರೆ, ಕಲ್ಲು ಹೊಡೆಯುತ್ತಾರೆ, ಮುಂತಾಗಿ ಹಿಂಸೆ ಮಾಡುತ್ತಾರೆ, ಹಾಗೆ ಅವರು ಮಾಡದಂತೆ ಮಾಡಬೇಕೆಂದು ಮತ್ತೆ ತಪಸ್ಸು ಮಾಡಿದೆ ನನ್ನನ್ನು ಕಾಪಾಡು ಎನ್ನಿತಂತೆ. ಆಗ ದೇವರು ಹೇಳಿದನಂತೆ, ಹಾಗೆ ಸುಮ್ಮನಿರಬಾರದು, ಬುಸ್ ಎನ್ನುವುದನ್ನಾದರೂ ಕಲಿ, ಆಗ ಜನ ಹೆದರುತ್ತಾರೆ ಎಂದು. ಹಾಗೆ ಬುಸುಗುಟ್ಟುವುದ ನ್ನಾದರೂ ಕಲಿತರೆ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತವೆ.

ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. SRINIVASA NAYAK (Mangalore-I).—I rise to support the Demand placed before this august House. I have heard with rapt silence the speech made by Srimathi K. S. Nagarathnamma. She has painted a very horrified picture. But I think the stories or happenings she has related, relates only to her Constituency, because if I may be permitted to say what I feel about my constituency, I should say that what she has painted has not happened or does not happen in my District of South Kanara. Doctors there have the highest medical. ettics. They do not stoop so low as to take bribe or money. They are allowed private practice and they do it outside office hours or working hours because medical science is a technical subject. A person who is a good

(SRI M. SRINIVASA NAYAK)

doctor is always required and wanted by the people who are suffering from particular diseases. So, if there is a good doctor with good qualifications in Government hospitals, that does not mean his services should not be made available to the people after the working hours. I do not think there is anything wrong in Government having permitted medical personnel to practice outside office hours. She has raised a point about T.B. Sanatoria. We have a T. B. Sanatorium in our District. Whenever there are bleeding clases, the District Surgeon has the right to admit them. There certain beds are set apart for such purpose and for emergency. I do not think a proper approach has been made to see that those partients are admitted and beds are allotted for such patients without priority list.

With the last two years, Sir, Medical Department has made great progress. We see all-round the desire of the Government to make available to people in the interior areas and rural areas, medical aid at their doors. Primary centres and dispensaries have been opened and wherever necessary, hospitals have been opened and beds have been increased. Wherever necessary, medical aid has been made available to people in rural areas at their doors. It is the intention of the Government to see that people in the remotest part of the State get medical aid. I think in these two years, the Government have done good progress and I think in the remaining three years, the Government will achieve their dosire. Sir, only one small item I would like to say. It Mudabidre in the year 1961, a foundation stone was laid for primary health centre by our Hon'ble Speaker, Sri B. V. Baliga Tenders were called for in 1963. Materials were collected. But I do not know the reason for the work being held up. There is another case. In 1963, the Hon'ble Minister for Health himself was good enough to lay the foundan tion stone in Padubidre for a Public Health Centre. In both these centres, people have come forward and deposited Rs. 12,500 each. I would therefore earnestly request the Government and the Hon'ble Minister for Public Health to see that these works are taken up so that work we have done in South Kanara may be complete and it is done to the entire satisfaction of the people.

Sir, the Government desire to see that medical men are made available to all the dispensaries of the Government and it is bearing fruit. Sir, wherever there are no doctors in hospitals, I request the Hon'ble Minister to see that medical men are posted. I am sure that his efforts will be fruitful and he will be able to provide Doctors in all the centres. Now, we are having integrated college of medicine at Mysore. We should no doubt give due prominence and foster and care for Ayurveda. But what is the kind of Ayurveda that is being practised today? Ayurveda that is being practised today was in vogue 4,000 years ago. Thereafter, it has not made any progress. In those days also, we had the best of medicine. If I can recall an incident from Ramayana, when Lakshmana swooned, Hanumantha got Sanjeevini plant from Hima-

laya. Have you made any search to get that plant so that we could conquer death by that plant ? Allopathy has made great strides. There is nothing to equal it in anti-biotics. There is nothing to equal aneasthesia-chloromycin or steptomicin in Ayurveda. We had such drugs most probably in pre-historic days because we have heard that all the diseases that were at that time were cured by Ayurveda and even foreign countries have taken pictures. People from Germany have taken some of the formula. There was a very good remedy for whooping caugh in Ayurveda. Today science has brought forth triple–antigen by which whooping caugh has been wiped off. Science and research has brought that medicine. Similarly, so far no medicine has been discovered for diabetes in Allopathy. If we do have research in Ayurveda, I think we could have a very good medicine for diabetes in Ayurveda. I have got a friend in Mangalore who has got a small plant. He was suffering from diabetes for the last 20 years. He has got a plant and he takes out one leaf a day and puts it in his mouth. Just like a lump of sugar, it melts. He has not made research as to what plant is. I want that research should be made into it so that we could find effective medicine for diabetes. Similarly there are Arishtas and Asavas in Ayurveda, like Draksharishtas and Chyavanaprash. Chyavanaprash was being manufactured on scientific basis in olden days. If sugar candy has been prescribed for a medicine, it is likely that jaggery is used ; if cow's ghee is specified, it is likely they may use buffaloe ghee. The result will be different and the effects of scientifically manufactured medicine are not there today. So, we should have control over such medicines and Drug Control Act should be applied to these products that are being manufactured by Ayurvedic pandits. We have very good medicine in Ayurveda, no doubt and there is no equivalent medicine to it in other systems of medicine. A person who is having fever at 5 O' clock today should be eble to go to work at 9 or 10 tomorrow. He wants to take such medicine and go to work tomorrow.

If we take shuddha Ayurveda, we can see that there is no equivalent medicine available in allopathy, so as to make the man go to work the next day. Till such time as we are able to have equivalent medicines we should have an integrated system of medicine so that the person who has taken up to medical education should have Misra education in medicine. The person who goes to a doctor does not say that he should be treated with Ayurvedic medicine or allopathic medicine or homoeopathic medicine. What he wants is that his disease is cured. That is what a medical practitioner should do. But, at present, if I am a doctor practicing in Ayurveda, I have a contempt for allopathy or other systems of medicines. That should not be so. A person comes to you with the confidence that the doctor cures you. All available sources should be explored and all available knowledge has to be used and the man cured. There are many medicines available in Ayurveda, allopathy and homeopathy. So, a misra system of medical education is necessary.

I heard that the medical school that we have got in Mysore is going to be closed from next year. I would request the Government to kindly recon-

(SRI M. SRINIVASA NAYAK)

sider this decision, so that they may make available to people a system of medicine by which people can be cured.

Sir, the highlight of the day is the Government have taken a decision to have an institution of Child Health in Bangalore. It will be an institution where child health and child care will be taken up — pediatric, orthopedic or surgery or whatever branch of disease, and it will be taken up in this institution for the entire State. After the return of the Hon'ble Health Ministr from foreign countries, he has taken into his head that child welfare should get the first place. After sixth year, the Government has made all provision for the child, for education, etc. But provision has not been made for the care of the child till its fifth year. By the establishment of this Child Health institution, Government will be helping in the cure of diseases of children and look after them. I am thankful to the Government for establishing this Child Health Institute.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ವೈದ್ಯಕೀಯ ಹಾಗು ಜನಾರೋಗ್ಯ ಇಲಾಖೆಯ ಬಗ್ಗೆ ಅನೇಕ ಮಾನ್ಯ ಸ್ನೇಹಿತರು ಮಾತನಾಡಿ ಈ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ, ಆಸ್ಪತ್ರೆಗಳಲ್ಲಿ ಯಾವ ರೀತಿ ಕೆಲಸ ಮಾಡಲಾಗುತ್ತಿದೆ ಎಂಬುದಕ್ಕೆ ವಿವರಣೆ ಕೊಟ್ಟು ಬಹಳ ಮನದಟ್ಟಾಗುವ ರೀತಿಯಲ್ಲಿ ವಿವರಿಸಿದ್ದಾರೆ. ಗುಂಡ್ಲುಪೇಟೆಯ ಮಾನ್ಯ ಸದಸ್ಯರಾದ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಮಾತನಾಡುತ್ತಾ ಬಹು ಸ್ವಾರಸ್ಯವಾಗಿ ಈ ವಿಷಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನನ್ನ ಸ್ನೇಹಿತರು ಹೇಳಿದ್ದನ್ನೇ ಪುನಃ ನಾನು ಹೇಳುವುದಿಲ್ಲ. ಕೆಲವು ಹೊಸ ವಿಷಯಗಳನ್ನು ಹೇಳಬೇಕೆಂದಿದ್ದೇನೆ.

ಜನಾರೋಗ್ಯ ಇಲಾಖೆ ಮತ್ತು ವೈದ್ಯಕೀಯ ಇಲಾಖೆ ಒಂದುಗೂಡಿಸಿ ಒಬ್ಬ ಡೈರೆಕ್ಟರ್ ಇರಬೇಕು ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ರೀತಿಯ ಒಂದು ವ್ಯವಸ್ಥೆಯಿಂದ ಹಣ ಉಳಿತಾಯವಾಗುವುದಲ್ಲದೆ ವೈದ್ಯಕೀಯ ವೃತ್ತಿಯನ್ನು ಅವಲಂಬಿಸಿ ಕೆಲಸ ಮಾಡತಕ್ಕಂಥವರಲ್ಲಿ ಇರತಕ್ಕ ಏರುಪೇರುಗಳು ಮಾಯವಾಗಿ ಒಂದು ವಿಧವಾದ ಹೆಚ್ಚಿನ ಹೊಂದಾಣಿಕೆಯಾಗಲು ಸಾಧ್ಯವಾಗುತ್ತದೆ, ಇದು ಆಗಬೇಕು ಎಂಬುದು ಎಲ್ಲರ ಆಶೆ ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ನ್ಯಾಯವಾದುದು. ಮಾಡಬೇಕೆಂದು ಆರೋಗ್ಯ ಮಂತ್ರಿಗಳು ನಾಲ್ಕಾರು ಸಲ ತಿಳಿಸಿದ್ದಾರೆ. ಆದರೆ ನೋಡುತ್ತೇವೆ, ಯೋಚನೆ ಮಾಡುತ್ತೇವೆ ಎಂದು ಸಾಧಾರಣವಾಗಿ ಹೇಳುವ ಪಲ್ಲವಿ ಇದ್ದ ಹಾಗೆ ಕಾಣುತ್ತದೆ. ಇದೊಂದು ಮುಖ್ಯವಾದ ವಿಷಯ. ಈ ಮಾನ್ಯ ಸಭೆಯಲ್ಲಿ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಮನ್ನಣೆ ಇರಬೇಕು. ಮಾನ್ಯತೆ ಇರಬೇಕು. ಹತ್ತಾರು ಸಲ ಸದಸ್ಯರೆಲ್ಲರೂ ಇದರ ಬಗ್ಗೆ ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದರೂ ಕೂಡ ಇನ್ನೂವರೆಗೆ ಯಾತಕ್ಕೋಸ್ಕರ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಕೇಳುತ್ತೇನೆ. ಜನತೆಯ ದೃಷ್ಟಿಯಿಂದ ದೇಶದ ಹಿತ ದೃಷ್ಟಿಯಿಂದ ಏನಾದರೂ ತೊಂದರೆ ಇದ್ದರೆ ಅದನ್ನು ಕೂಡ ಧೈರ್ಯದಿಂದ ಸಭೆಯ ಮುಂದೆ ಇಡಬೇಕು, ಎಂದು ಆರೋಗ್ಯ ಮಂತ್ರಿಗಳಿಗೆ ಒತ್ತಾಯ ಪಡಿಸುತ್ತೇನೆ.

ಇನ್ನೊಂದು ಪ್ರಶ್ನೆಯೆಂದರೆ, ಆರೋಗ್ಯ ಇಲಾಖೆಯಲ್ಲಿ ಬರೀ ಎಕ್ಸ್‌ಪಿರಿಮೆಂಟ್ಸ್ ನಡೆಯುತ್ತಿರುತ್ತವೆ. ಇದು ಹೇಗಾಗಿದೆ ಎಂದರೆ ಗಂಡು ಇಲ್ಲದೆ ಮದುವೆಗೆ ಏರ್ಪಾಡು ಮಾಡಿದ ಹಾಗೆ ಇದೆ. ಡಾಕ್ಟರ್ಸ್ ಇಲ್ಲದೆ ನೂರಾರು ಆಸ್ಪತ್ರೆಗಳನ್ನು ತೆರೆಯಲಾಗುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆ ಒಂದು ಆಸ್ಪತ್ರೆ ಇದೆ. ಅದು ಸುತ್ತುಮುತ್ತ ಇರುವ 60 ಹಳ್ಳಿಗಳಿಗೆ ಮಧ್ಯದಲ್ಲಿರುವುದರಿಂದ ಬಹಳ ಅನುಕೂಲವಾದ ಸ್ಥಳವಾಗಿದೆ. ಆದರೆ ಅಲ್ಲಿ ಡಾಕ್ಟರ್ ಇಲ್ಲ. ಔಷಧ ಕೊಡುವವರು ನೋಡುವವರು ಕಂಪೌಂಡರು ಯಾವದೋ ರೋಗಕ್ಕೆ ಯಾವುದೋ ಔಷಧಿ ಪಿಲ್ಸ್ ಕೊಟ್ಟರೆ ದೇವರೇ ಗತಿ. ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರರ ಅಭಾವ ಇದೆ. ಇದರ ಬಗ್ಗೆ ಏನು ಮಾಡಬೇಕು ಎಂಬುದನ್ನು ತೀವ್ರ ಯೋಚನೆ ಮಾಡಬೇಕಾದುದು ಅಗತ್ಯ. ಇಲಾಖೆಯ ಅಧಿಕಾರಿಗಳು, ಮಂತ್ರಿಗಳು ಇದನ್ನು ಯೋಚನೆ ಮಾಡಿದ ಹಾಗೆ ಕಾಣುವುದಿಲ್ಲ. ಈ ದಿವಸ ನಮ್ಮಲ್ಲಿ ಐದಾರು ಮೆಡಿಕಲ್ ಕಾಲೇಜುಗಳು ಇವೆ. ಬೇಕಾದಷ್ಟು ಜನ ಪದವೀಧರರಾದ ಎಂ. ಬಿ. ಬಿ. ಎಸ್. ಡಾಕ್ಟರರು ಇಲಾಖೆಗೆ ಸೇರುತ್ತಾ ಇಲ್ಲ. ಇದಕ್ಕೆ ಏನು ಕಾರಣ ಎಂಬುದನ್ನು ಇಲಾಖೆಯವರು ಯೋಚನೆ ಮಾಡಬೇಕು. ಆದರೆ ಇದನ್ನು ಯೋಚನೆ ಮಾಡುವುದಿಲ್ಲ. ಡಾಕ್ಟರ ವೃತ್ತಿ ಅಭ್ಯಾಸ ಮಾಡಿದ ಮೇಲೆ

ಅಡ್ಮಿನಿಸ್ಟ್ರೇಷನ್ ಕೆಲಸ ಹೊಂದಾಣಿಕೆಯಾಗಲಾರದು. ಇಂಥ ಕೆಲಸದ ಅರ್ಥವಾಗುವುದಿಲ್ಲ. ಒಬ್ಬ ಡಾಕ್ಟರನಿಗೆ ಇನ್ನೊಬ್ಬ ಡಾಕ್ಟರನನ್ನು ನೋಡಿದರೆ ಸಹನೆಯಿಲ್ಲ ಸಿಟ್ಟು ಬರುತ್ತದೆ. ಸವತಿ ಮಾತ್ಸರ್ಯದ ಹಾಗೆಇನ್ನೊಬ್ಬರನ್ನು ನೋಡುತ್ತಾರೆ. ಒಂದು ವಿಷಯದ ಬಗ್ಗೆ ನಾನು ಮುಖ್ಯ ಮಂತ್ರಿಗಳಿಗೆ ಆರೋಗ್ಯ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ಆದರೆ ಇದುವರೆಗೆ ಏನೂ ಮಾಡಿಲ್ಲ. ಅದೇನೆಂದರೆ ಎಂ. ಬಿ. ಬಿ. ಎಸ್. ಪರೀಕ್ಷೆ ಪಾಸ್ ಆದ ಡಾಕ್ಟರರಿಗೆ ಎರಡು ವರ್ಷದ ಕೋರ್ಸ್ ಪಾಸಾದ ಎಲ್.ಎಂ.ಪಿ. ಯವರಿಗೆ ಕೊಡುವ ಸಂಬಳ ಸ್ಕೇಲು ಕೊಟ್ಟರೆ ಅವರು ಹೇಗೆ ಕೆಲಸ ಮಾಡುತ್ತಾರೆ ? ಹೊರಗಡೆ ಯಾವುದಾದರೂ ಒಂದು ಮಿಶನ್ ಆಸ್ಪತ್ರೆಗೆ ಹೋದರೆ ಅವರಿಗೆ ಹೆಚ್ಚು ಸಂಬಳ ದೊರೆಯುತ್ತದೆ. ಇಲ್ಲವೆ ಸ್ವಂತ ಪ್ರೈವೇಟ್ ಪ್ರಾಕ್ಟೀಸ್ ಮಾಡಿದರೆ ಸಾವಿರಾರು ರೂಪಾಯಿ ತಿಂಗಳಿಗೆ ಸಂಪಾದನೆ ಮಾಡುತ್ತಾರೆ. ಆದ್ದರಿಂದ ಅವರು ಬರುವುದಿಲ್ಲ. ಕಡಿಮೆ ಸಂಬಳ ಕೊಟ್ಟರೆ ಅಭಾವ ಸಮಸ್ಯೆ ಪರಿಹಾರವಾಗುವುದಿಲ್ಲ. ಇದನ್ನು ಯೋಚನೆ ಮಾಡಿ ಹೆಚ್ಚು ಸಂಬಳ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

5-30 P.M.

ಅಥವಾ ಇದಕ್ಕೆ ಏನಾದರೂ constitutional difficulty ಇದೆಯೋ ? ಅಥವಾ ಯಾರಾದರೂ ಅಧಿಕಾರಿಗಳು ಅಡ್ಡಿ ಇದ್ದಾರೋ? ಅದನ್ನಾದರೂ ಕೂಡ ಸ್ಪಷ್ಟವಾಗಿ ಹೇಳಲಿ. ತಮ್ಮ ಕಷ್ಟವೇನೆಂಬು ದನ್ನು ಆರೋಗ್ಯ ಮಂತ್ರಿಗಳು ಈ ಸಭೆಯ ಮುಂದಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ಆರೋಗ್ಯ ಮಂತ್ರಿಗಳಾದ ನಾಗಪ್ಪ ಆಳ್ವರವರು ಬಹಳ ಒಳ್ಳೆಯವರು, ಉತ್ಸಾಹ ಶಾಲಿಗಳೂ ಹೌದು, ಆದರೆ ಧೈರ್ಯಶಾಲಿಗಳಾಗಬೇಕು. ಕೋಲಾರ ಜಿಲ್ಲಾ ಕೇಂದ್ರ. ಅಲ್ಲಿ ಒಂದು ಆಸ್ಪತ್ರೆ ಇದೆ. ಆದರೂ ಜನ ಪ್ರೈವೇಟ್ ಪ್ರಾಕ್ಟಿಶನರುಗಳ ಹತ್ತಿರ, ಮಿಶನ್ ಹಾಸ್ಪಿಟಲ್ ಲ್ಲಿಗೆ ಹೋಗುತ್ತಾರೆ. ಜಾಗವಿಲ್ಲದೆ, ಪೇಶಂಟುಗಳು ಸರಕಾರಿ ಆಸ್ಪತ್ರೆಯಲ್ಲಿ ವರಾಂಡದಲ್ಲಿ ಮಲ ಗಿರುತ್ತಾರೆ. ಖುದ್ದಾಗಿ ನೋಡಿ, ಆರೋಗ್ಯ ಮಂತ್ರಿಗಳು ಆಸ್ಪತ್ರೆಗೆ ಫಸ್ಟ್‌ಫ್ಲೋರ್ ಹಾಕಿಸಿ ಕೊಡುತ್ತೇನೆಂದು ಒಂದು ವರ್ಷದ ಹಿಂದೆ ಹೇಳಿದರು. ಸಂಬಂಧಪಟ್ಟವರಿಗೆ ಇನ್‌ಸ್ಟ್ರಕ್ಷನು ಕೊಟ್ಟರು. ಎಕ್ಸಿಕ್ಯೂಟಿವ್ ಇಂಜನಿಯರು ಪ್ಲಾನು ಅಪ್ರೂ ಮಾಡಿ, ಟೆಂಡರ್ ಕರೆದರು. ಆ ಮೇಲೆ ಡೈರೆಕ್ಟರ್ ಆಫೀಸಿನಲ್ಲಿ ಏನಾಯಿತೋ ಸೆಕ್ರೆಟರಿಗಳು ಏನು ಹೇಳಿದರೋ, ಇದುವರೆಗೂ ಆ ಕೆಲಸವಾಗಿಲ್ಲ. ಮಿನಿಸ್ಟರು ಭರವಸೆ ಕೊಟ್ಟುದರ ಫಲವೇನು ? ಆ ಕೆಲಸವನ್ನು ಈ ಸಲ ಬಡ್ಜೆಟ್ಟಿ ನಲ್ಲಿ ಸಹ ಸೇರಿಸಿಲ್ಲ ಮಾತು ಕೊಟ್ಟಿದ್ದನ್ನು ಈಡೇರಿಸಲಿಲ್ಲವೆಂದರೆ, ಇನ್ನು ಮಂತ್ರಿಗಳು ಭರವಸೆ ಗಳನ್ನು ಏಕೆ ಕೊಡಬೇಕು ? ಕೊಡುವುದಕ್ಕೆ ಮುಂಚೆ ಅಧಿಕಾರಿಗಳ ಜೊತೆ ಸರಿಯಾಗಿ ಆಲೋಚನೆ ಮಾಡಿ, ಆ ಮೇಲೆ ಖಾತ್ರಿಯಾಗಿ ಹೇಳಿ ಹೀಗಾದರೆ ಈ ಸರಕಾರದಲ್ಲಿ ಕೊಡುವ ಭರವಸೆಗಳಿಗೆ ಏನೊಂದು ಮಹತ್ವವಿದೆಯೆಂದು ಭಾವಿಸಬೇಕು. ಈಗಲಾದರೂ ಕೊಟ್ಟಿರುವ ಮಾತನ್ನು ನೆರ ವೇರಿಸಬೇಕೆಂದು ಮಂತ್ರಿಗಳನ್ನು ಒತ್ತಾಯ ಪಡಿಸುತ್ತೇನೆ. ರೋಗಿಗಳನ್ನು ವರಾಂಡದಲ್ಲಿ ಮಲಗಿಸಿರುತ್ತಾರೆ. ಸ್ಥಳ ಸಂಕೋಚವನ್ನು ತಪ್ಪಿಸಲು ಕೂಡಲೆ ಫಸ್ಟ್‌ಫ್ಲೋರ್ ಹಾಕಲು ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬುತ್ತೇನೆ.

ಇನ್ನೊಂದು ವಿಷಯವೇನೆಂದರೆ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲ. ಇದರಿಂದ ಆಸ್ಪತ್ರೆಗಳಿದ್ದೂ ಏನೂ ಪ್ರಯೋಜನ. ಈಗ ಆಸ್ಪತ್ರೆಗಳಿದ್ದರೆ, ಕಾಂಪೌಂಡರು ಇರುವುದಿಲ್ಲ. ಕಾಂಪೌಂಡರು ಇದ್ದರೆ ಔಷಧವಿರುವುದಿಲ್ಲ. ಇಷ್ಟೆಲ್ಲಾ ಇದ್ದರೂ ಡಾಕ್ಟರು ಇರುವುದಿಲ್ಲ. ಕ್ಯಾಲ ನೂರು ಅಂತ ಒಂದು ಊರಿದೆ ಅಲ್ಲಿನ ಪ್ರಜಾಸಂಖ್ಯೆ 5 ಸಾವಿರ. ಒಂದು ವರ್ಷದಿಂದಲೂ ಅಲ್ಲಿ ಡಾಕ್ಟರು ಇಲ್ಲ. ಇದನ್ನು ಎಲ್ಲಾ ಅಧಿಕಾರಿಗಳಿಗೂ ಹೇಳಿದ್ದೇವೆ. ಸಾಕಷ್ಟು ಡಾಕ್ಟರುಗಳಿಲ್ಲದೆ ಹೋದರೆ, ಎಷ್ಟು ಜನ ಡಾಕ್ಟರುಗಳಿದ್ದಾರೋ ಅಷ್ಟಕ್ಕೆ ಸರಿಯಾಗಿ ಆಸ್ಪತ್ರೆಗಳನ್ನು ಇಟ್ಟುಕೊಂಡು, ಬಾಕಿ ಆಸ್ಪತ್ರೆಗಳನ್ನು ಮುಚ್ಚಿಬಿಡಿ. ಡಾಕ್ಟರಿಲ್ಲದೆ ಹೋದ ಮೇಲೆ ಆಸ್ಪತ್ರೆಗೆ ಅನಾವಶ್ಯಕವಾಗಿ ಹಣ ಏಕೆ ಖರ್ಚು ಮಾಡುತ್ತೀರಿ ? ಡಾಕ್ಟರುಗಳು ಇಲ್ಲದಿದ್ದರೆ ಹೊಸದಾಗಿ ಆಸ್ಪತ್ರೆಗಳನ್ನೂ ಪ್ರಾರಂಭ ಮಾಡಬೇಡಿ ! ಈ ಡಾಕ್ಟರುಗಳ ಕೊರತೆ ಹೋಗಲಾಡಿಸಲು ಒಂದು ಸಲಹೆ ಕೊಡುತ್ತೇನೆ. ಸರ ಕಾರಿ ಆಸ್ಪತ್ರೆಗಳಿಗೆ ಡಾಕ್ಟರುಗಳು ಬರಬೇಕಾದರೆ ಅವರ ಸಂಬಳ ಸಾರಿಗೆ ಸ್ಕೇಲುಗಳನ್ನು ಹೆಚ್ಚು ಮಾಡಬೇಕು, ಅವು ಆಕರ್ಷಕವಾಗಿರಬೇಕು. ಆಂಧ್ರ ಮತ್ತು ಬೇರೆ ಪ್ರಾಂತ್ಯಗಳಲ್ಲಿರುವ ಸ್ಕೇಲು ಗಳಿಗೂ, ನಮ್ಮ ರಾಜ್ಯದ ಡಾಕ್ಟರುಗಳ ಸಂಬಳ ಸ್ಕೇಲುಗಳಿಗೂ ಬಹಳ ವ್ಯತ್ಯಾಸವಿದೆ, ನಮ್ಮಲ್ಲಿ ರುವುದು ಬಹಳ ಕಡಿಮೆ ಸ್ಕೇಲು ಎಂದು ಕೆಲವು ಡಾಕ್ಟರುಗಳು ಬೇರೆ ದೇಶಗಳಿಗೆ, ಅಮೇರಿಕಾಕ್ಕೆ, ಯೂನಿವರ್ಸಿಟಿಗಳಲ್ಲಿ ವಿದ್ಯಾಭ್ಯಾಸಕ್ಕೆ ಹೋದ ಡಾಕ್ಟರುಗಳಲ್ಲಿ, ಶೇಕಡ 75 ಮಂದಿ ಮೈಸೂರಿಗೆ ಬರುವುದಿಲ್ಲ ವಿದ್ಯಾಭ್ಯಾಸ ಮತ್ತು ಆರೋಗ್ಯವನ್ನು ಜನಗಳಿಗೆ ಸರಿಯಾಗಿ ಒದಗಿಸುವುದು ಪ್ರತಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ಯೊಂದು ನಾಗರಿಕ ಸರಕಾರದ ಕರ್ತವ್ಯ. ಡಾಕ್ಟರುಗಳ ಅಭಾವವನ್ನು ಹೋಗಲಾಡಿಸುವುದಕ್ಕೆ ಇನ್ನು ಅರ್ಧ ಕೋಟಿ ರೂಪಾಯಿ ಖರ್ಚಾದರೂ ಪರವಾಗಿಲ್ಲ. ಡಾಕ್ಟರುಗಳ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿ, ಅವರಿಗೆ ಇನ್ನು ಹೆಚ್ಚಿನ ಉತ್ತೇಜನ ಕೊಡಿ.

ಡಾಕ್ಟರುಗಳಿಗೆ ಉತ್ತೇಜನ ಕೊಡುವುದಿರಲಿ, ಇಲಾಖೆಯಲ್ಲಿ ಅವರಿಗೆ ತುಂಬ ಕಿರುಕುಳ ಕೊಡುತ್ತಿದ್ದಾರೆ. ಎರಡು ವರ್ಷದಿಂದ ಕಂಡೆನ್ಸ್‌ಡ್ ಎಂ.ಬಿ.ಬಿ.ಎಸ್. ಮಾಡಿದವರಿಗೆ ಸ್ಕೇಲ್ ಕೊಡದೆ ಸತಾಯಿಸುತ್ತಿದ್ದಾರೆ. ಕೆಲವು ಅಧಿಕಾರಿಗಳಂತೂ ಡಾಕ್ಟರುಗಳಿಗೆ ರಜ ಕೊಡಬೇಕಾದರೆ ಬಹಳ ಗೋಳು ಹುಯ್ದುಕೊಳ್ಳುತ್ತಾರೆ. ರಜ ಮುಗಿಸಿಕೊಂಡು ಹಿಂತಿರುಗಿದ ಆರು ತಿಂಗಳ ಮೇಲೆ ರಜ ಮಂಜೂರು ಮಾಡಿದ ನಿದರ್ಶನಗಳಿವೆ. ಡಾಕ್ಟರುಗಳು ದಯಾಮಯರು, ಕರುಣಾಳುಗಳು ಆಗಿರಬೇಕು ಅನ್ನುತ್ತಾರೆ ಆದರೆ ಈ ಇಲಾಖೆ ಹೀಗೆ ಏಕೆ ಆಗಿದೆಯೋ ನನಗೆ ಅರ್ಥವಾಗುತ್ತಿಲ್ಲ.

ಮುಖ್ಯವಾಗಿ ನಮ್ಮ ಆರೋಗ್ಯಮಂತ್ರಿಗಳು ಸ್ವಲ್ಪ ಧೈರ್ಯ ತೆಗೆದುಕೊಂಡು, ಇಲಾಖೆಯಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸಲು ಸರಿಯಾದ ಧೋರಣೆಯನ್ನು ಅನುಸರಿಸಬೇಕು. ಈ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಇಲಾಖೆಗಳಿಗೆ 7½ ಕೋಟಿ ರೂಪಾಯಿ ಕೇಳುತ್ತಿದ್ದೀರೋ, ಆ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿ, ಅದರ ಸರಿಯಾದ ಪ್ರತಿಫಲ ಜನತೆಗೆ ದೊರೆಯುವ ರೀತಿಯಲ್ಲಿ ಆಡಳಿತ ನಡೆಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಜಿ. ಸತ್ಯನಾರಾಯಣ (ಬಳ್ಳಾರಿ).—ಮಾನ್ಯ ಅಧ್ಯಕ್ಷರೆ. ಇವತ್ತಿನ ದಿವಸ ನಾನು ಬಜೆಟ್ಟಿನ ಮೇಲೆ ಮಾತನಾಡತಕ್ಕಂಥಾದ್ದು ಬಳ್ಳಾರಿ ಮೆಡಿಕಲ್ ಕಾಲೇಜಿನ ವಿಷಯ ನಮ್ಮ ಬಳ್ಳಾರಿ ಜಿಲ್ಲೆಗೆ ಮೂರು ವರ್ಷದ ಕೆಳಗೆ ಒಂದು ಮೆಡಿಕಲ್ ಕಾಲೇಜು ಬಂದಿತು. ಅದಕ್ಕೆ ಡೀನ್ ಅವರೂ ಬಂದಿದ್ದಾರೆ. ಆದರೆ ನಮಗೆ ಅಲ್ಲಿ ಬಿಲ್ಡಿಂಗಿನ ಕೊರತೆ ಇರುವುದರಿಂದ, ಸರಿಯಾಗಿ ಕೆಲಸ ಮಾಡುವುದು ಕಷ್ಟವಾಗಿದೆ. ಬಿಲ್ಡಿಂಗ್ ನಿಧಾನವಾಗುವುದಕ್ಕೆ ಕಾರಣ lack of funds. ಹಣ ಸ್ಯಾಂಕ್ಷನ್ ಮಾಡಿದ್ದರೂ ಸರಕಾರ ಕೊಟ್ಟಿಲ್ಲ. ಏತಕ್ಕೆ ಫಂಡ್ಸ್ ಕೊಟ್ಟಿಲ್ಲವೆಂದರೆ ನಾವು ಕೊಡಬೇಕಾದ ಡೊನೇಷನ್ಸ್ ಕೊಟ್ಟಿಲ್ಲ. ಆದರೆ ಸರಕಾರ ಅದರ ಮಾತಿನ ಪ್ರಕಾರ ಹಣ ಕೊಡಬೇಕು; ಹೇಳಿದ ಪ್ರಕಾರ ಬಿಲ್ಡಿಂಗ್ಸ್‌ಗೆ ಹಣ ಕೊ ್ಟಿಲ್ಲ. ಥರ್ಡ್ ಇಯರ್ ಕಾಲೇಜಿನಲ್ಲಿ ಓಪನ್ ಆಗಿ ಸ್ಟೂಡೆಂಟ್ಸಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಬಿ. ಡಿ. ಜತ್ತಿ.—ತಾವು ಕೊಡಬೇಕಾದ ಹಣ ಕೊಟ್ಟಿಲ್ಲ.

ಶ್ರೀ ಟಿ. ಜಿ. ಸತ್ಯನಾರಾಯಣ.—ಈಗ ಚೈನಾ ಎಮರ್ಜನ್ಸಿ ಬಂದಿದೆ, ನಮಗೆ ಹಣಕ್ಕೆ ಸ್ವಲ್ಪ ತ್ರಾಸು ಆಗಿದೆ. ನಮ್ಮದು ಪರ್ಮನೆಂಟಾಗಿ ಫ್ಯಾಮಿನ್ ಏರಿಯ ಮಾತಿನ ಪ್ರಕಾರ, ಇವತ್ತಲ್ಲ ನಾಳೆ ಹಣ ಕೊಟ್ಟೇ ಕೊಡುತ್ತೇವೆ, ಹಿಂದಕ್ಕೆ ಹೋಗುವುದಿಲ್ಲ. ನೀವು ಕೊಡುವ ಫಂಡ್ಸ್ ಕೊಡಬೇಕು. ನಾವು ಕೊಡಬೇಕಾದ್ದು ಖಂಡಿತ ಕೊಡುತ್ತೇವೆ.

ಶ್ರೀ ಬಿ. ಡಿ. ಜತ್ತಿ.—ಬರೆದು ಕೊಟ್ಟು ಬಿಡಿ.

ಶ್ರೀ ಟಿ. ಜಿ. ಸತ್ಯನಾರಾಯಣ.—ಅಲ್ಲಿಗೆ ಲೆಕ್ಚರರುಗಳಾಗಿ ಬಂದ ಡಾಕ್ಟರುಗಳಿಗೆ ಅಕಾಮಡೇಷನ್ ಇಲ್ಲ; ಇರಲಿಕ್ಕೆ ರೆಸಿಡೆನ್ಸಿಯಲ್ ಕ್ವಾರ್ಟರುಗಳಿಲ್ಲ. ನಮ್ಮ ಅಲಿಪುರ್ ಜೈಲ್ ರಿಪೇರ್ ಮಾಡಿದರೆ ಸಾವಿರಾರು ಜನ ಇರಬಹುದು. ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ ಬೇರೆ ಕಟ್ಟಡಗಳನ್ನು ಕಟ್ಟಬೇಕಾದರೆ. ಆದರೆ one-sixth, one eigth amount ಅಲಿಪೂರ್ ಜೈಲಿಗೆ ಖರ್ಚು ಮಾಡಿದರೆ ಬೇಕಾದಷ್ಟು ಬಿಲ್ಡಿಂಗ್ ಅಕಾಮಡೇಷನ್ ಆಗುತ್ತದೆ. ಅಷ್ಟು ಮಾತ್ರ ದಯಮಾಡಿ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತಾ ಇದ್ದೇನೆ.

ನಮ್ಮ ಜಿಲ್ಲೆಯನ್ನು ಇತರ ಜಿಲ್ಲೆಗಳೊಂದಿಗೆ compell ಮಾಡಿದರೆ, ನಮ್ಮಲ್ಲಿ ಹಾಸ್ಪೆಟಲ್ಲುಗಳು ಬಹಳ ಕಡಿಮೆ ಇವೆ. ನಮ್ಮದು malaria-stricken area. ಮೈಸೂರು, ಬೆಂಗಳೂರಿಗೆ ನಮ್ಮ ಜಿಲ್ಲೆಯನ್ನು ಹೋಲಿಸಿ, ಪಾಪ್ಯುಲೇಷನ್ ಪ್ರಕಾರ ಕೊಟ್ಟರೆ, ನಮಗೆ ಇನ್ನೂ ಜಾಸ್ತಿ ಹಾಸ್ಪೆಟಲುಗಳು ಹೆಲ್ತ್ ಯೂನಿಟ್ಟುಗಳು, ಫಂಡ್ಸ್ ಕೊಡಬೇಕಾಗುತ್ತದೆ.

Bed strength ಇದ್ದದ್ದರೊಳಗೆ ಜಾಸ್ತಿ ಮಾಡಲಿಕ್ಕೆ upstairs women ಹಾಸ್ಪಿಟಲ್ಲಿಗೆ ಸ್ಯಾಂಕ್ಷನ್ ಮಾಡಿದೆ. ಕಂಟ್ರಾಕ್ಟುದಾರರೂ ಬಂದಿದ್ದಾರೆ. ಆದರೆ ಅದಕ್ಕೆ ಸ್ಯಾಂಕ್ಷನ್ ಮಾಡಿದ ದುಡ್ಡು ಕೊಟ್ಟಿಲ್ಲ. ಇಷ್ಟರೊಳಗೇ ಕೆಲಸ ಪ್ರಾರಂಭ ಮಾಡಬೇಕಾಗಿದೆ.

ನಮ್ಮ ಆಯುರ್ವೇದ ಕಾಲೇಜಿಗೆ, ಸೆಂಟ್ರಲ್ ಗವರ್ನಮೆಂಟಿನವರು complete amount sanction ಮಾಡಿದ್ದಾರೆ. Sanction ಮಾಡಿದ ಅಮೌಂಟ್ ಕೂಡ ನಮಗೆ ಬಂದಿದೆ. ಮ್ಯಾಚಿಂಗ್

ಗ್ರ್ಯಾಂಟನ್ನು ನಮಗೆ ಗವರ್ನ್‌ಮೆಂಟಿನವರು ಇವತ್ತು ಕೊಡುತ್ತೇವೆ, ನಾಳೆ ಕೊಡುತ್ತೇವೆಂದು ಹೇಳುತ್ತಾ ಇದ್ದಾರೆ. ಶ್ರೀ ನಾಗಪ್ಪ ಆಳ್ವರವರು ಕಾಲೇಜಿಗೆ ಫೌಂಡೇಷನ್ನನ್ನೂ ಹಾಕಿದ್ದಾರೆ. ಅದಕ್ಕೆ ಇನ್ನೂ ದುಡ್ಡು ಕೊಟ್ಟಿಲ್ಲ. ದಯೆಮಾಡಿ ಅದು ಬರುವ ಹಾಗೆ ಮಾಡಬೇಕು.

ಇನ್ನೊಂದು ಜನರಲ್ ವಿಷಯ ನಮ್ಮ ಸ್ಟೇಟಿನಲ್ಲಿ ಮೆಡಿಕಲ್ ಕಾಲೇಜುಗಳು ದಂಡಿಯಾಗಿ ಓಪನ್ ಆಗಿವೆ. ಸರಿಯಾಗಿ ಫಂಡ್ಸ್ ಮತ್ತು ಎಕ್ವಿಪ್‌ಮೆಂಟು ಅವುಗಳಿಗೆ ಕೊಟ್ಟು, ಆಡಳಿತ ಮಾಡ ಬೇಕೆಂದು ನನ್ನ ಕೋರಿಕೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸಭಾಪತಿಯವರೇ, ಜನಾರೋಗ್ಯ ಮತ್ತು ವೈದ್ಯಕೀಯ ಬೇಡಿಕೆ ಮೇಲೆ ಮಾತನಾಡುತ್ತಾ ಈಗಾಗಲೇ ನಮ್ಮ ಸ್ನೇಹಿತರು ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂಬುದನ್ನು ವಿಮರ್ಶೆ ಮಾಡಿದ್ದಾರೆ. ಅದನ್ನು ನಾನು ಸಮರ್ಥನೆ ಮಾಡುತ್ತೇನೆ. ನಾನು ನಿಜವಾಗಿಯೂ ಆಗಾಗ್ಗೆ ಈ ಆಸ್ಪತ್ರೆಗಳಿಗೆ ಹೋಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಿ ಮತ್ತು ಜನಗಳು ಆಡತಕ್ಕ ಮಾತುಗಳನ್ನು ಅವರ ಮನಸ್ಸಿನಲ್ಲಿರತಕ್ಕ ಭಾವನೆಯನ್ನು ನಾನು ಈ ಸಭೆಯ ಮುಂದೆ ಇವತ್ತು ತಮ್ಮ ಮುಂದೆ ಇಡಬಯಸುತ್ತೇನೆ. ಈಗ ಎರಡು ಮೂರು ದಿವಸದಿಂದ ಪ್ರತಿ ನಿತ್ಯ ನಾನು ಇಲ್ಲಿರತಕ್ಕ ವಿಕ್ಟೋರಿಯಾ ಆಸ್ಪತ್ರೆಗೆ ಹೋಗುತ್ತಾ ಇದ್ದೇನೆ. ಈ ವಿಕ್ಟೋರಿಯ ಆಸ್ಪತ್ರೆ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಇದೆ, ಇಲ್ಲಿರತಕ್ಕ ಜನರಲ್ ವಾರ್ಡ್‌ನ್ನು ತಾವು ಸ್ವಲ್ಪ ಹೋಗಿ ನೋಡಿದ್ದೇ ಆದರೆ ಅಲ್ಲಿರತಕ್ಕ ರೋಗಿಗಳು ಮತ್ತು ಅವರ ಸಂಬಂಧಿಕರು ಅಲ್ಲಿ ಯಾವ ರೀತಿ ನಡೆಯುತ್ತಾ ಇದೆ ಎಂಬುದನ್ನು ಹೇಳುತ್ತಾರೆ, ಅದು ಒಂದು ನರಕವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಸರಕಾರ ಇದೆಯೋ ಇಲ್ಲವೋ, ಇದನ್ನು ಕೇಳುವವರೇ ಇಲ್ಲ, ಈ ನರಕದಲ್ಲಿ ಸೇರಿ ಕೊಂಡು ನಮಗೆ ಖಾಯಿಲೆ ಇನ್ನೂ ಹೆಚ್ಚಾಗುತ್ತಾ ಇದೆ ಎಂದು ಅಲ್ಲಿರತಕ್ಕ ಜನರು ಮಾತ ನಾಡುತ್ತಾ ಇದ್ದಾರೆ, ಇದನ್ನು ಕೇಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ. ಇನ್ನು ಆಸ್ಪತ್ರೆಯಲ್ಲಿ ಹೇಗೆ ಇರುತ್ತದೆ ಎಂದರೆ ಯಾವ ವಾರ್ಡಿನಲ್ಲೇ ನೋಡಲಿ ಮಂಚಗಳನ್ನು ಉದ್ದಕ್ಕೆ ಹಾಕಿರುತ್ತಾರೆ ಅದರ ಮೇಲೆ ಹಾಸಿಗೆ ಇರುತ್ತದೆ, ಅದರ ಮುಂದೆ ಹಾಸಿಗೆ, ಹಿಂದೆ ಹಾಸಿಗೆ ನೆಲದ ಮೇಲೆ ಹಾಕಿರು ತ್ತಾರೆ, ಓಡಾಡುವುದಕ್ಕೂ ಕೂಡ ಜಾಗ ಇರುವುದಿಲ್ಲ ಅಂತಹ ಪರಿಸ್ಥಿತಿಯಲ್ಲಿ ರೋಗಿಗಳು ಅಲ್ಲಿ ಮಲಗಿಕೊಂಡಿರಬೇಕು. ಜನಸಾಮಾನ್ಯರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಬೇಕಾದ್ದು ವೆಲ್‌ಫೇರ್ ಸ್ಟೇಟಿನ ಒಂದು ಮುಖ್ಯವಾದ ಕರ್ತವ್ಯವಾಗಿರುವಾಗ ಕೇಂದ್ರದಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯ ಪರಿಸ್ಥಿತಿಯೇ ಹೀಗಾದರೆ ಇನ್ನು ಜಿಲ್ಲಾ ಮಟ್ಟದಲ್ಲಿ ಇರತಕ್ಕ ಆಸ್ಪತ್ರೆಗಳ ಪರಿಸ್ಥಿತಿ ಯಂತೂ ಹೇಳತೀರದು. ನಿಜವಾಗಿಯೂ ಈ ಒಂದು ಆಸ್ಪತ್ರೆಯ ಜನರಲ್ ವಾರ್ಡುಗಳಲ್ಲಿ ಬಹಳ ದುರಾಡಳಿತ ನಡೆಯುತ್ತಾ ಇದೆ ಅಥವಾ ಅಲ್ಲಿ ಒಂದು ಸುಸಜ್ಜಿತವಾದ ವ್ಯವಸ್ಥೆ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಅಲ್ಲಿ ಹಾಸಿಗೆ ವ್ಯವಸ್ಥೆ ಇಲ್ಲ, ಸರಿಯಾದ ಬಟ್ಟೆ ಇಲ್ಲ, ಊಟ ಸರಿ ಯಾಗಿ ಕೊಡುವುದಿಲ್ಲ, ಏಕೆ ಈ ರೀತಿ ಆಗುತ್ತದೆ ಎಂಬುದನ್ನು ಕೇಳುವವರೇ ಇಲ್ಲ. ಈ ಯಾವ ಆಸ್ಪತ್ರೆಗಳಿಗೂ ಮಾನ್ಯ ಮಂತ್ರಿಗಳು ಆಗಲಿ, ಡೈರೆಕ್ಟರ್ ಆಗಲಿ ಸರ್‌ಪ್ರೈಸ್ ವಿಸಿಟ್ ಕೊಟ್ಟಿಲ್ಲ. ಅಲ್ಲಿ ಕಂಟ್ರ್ಯಾಕ್ಟರುಗಳ ಸಾಂರಾಜ್ಯವೇ ನಡೆಯುತ್ತಾ ಇದೆ, ಹಾಗಿರುವಾಗ ಇವರು ಯಾವ ಪಾಪಕ್ಕೆ ಹೋಗಬೇಕಾಗುತ್ತದೆಯೋ, ಇವರಿಗೆ ಯಾವ ಘೋರ ಪಾಪ ಕಾಯುತ್ತಿದೆಯೋ ಅರ್ಥ ವಾಗುತ್ತಾ ಇಲ್ಲ. ಇಂತಹ ಒಂದು ಒಳ್ಳೆಯ ಅಧಿಕಾರದಲ್ಲಿ ಇರತಕ್ಕ ಮಾನ್ಯ ಮಂತ್ರಿವರ್ಯರು ಸರ್‌ಪ್ರೈಸ್ ವಿಸಿಟ್ ಕೊಟ್ಟು ಇದನ್ನು ಒಂದು ತಹ ಬಂದಿಗೆ ತರದಿದ್ದರೆ ಅಲ್ಲಿ ಕಷ್ಟ ಅನುಭವಿಸುತ್ತಿರು ವವರ ಎಲ್ಲರ ಕೂಗು ಇವರಿಗೆ ಶಾಪವಾಗಿ ಪರಿಣಮಿಸಿ ತೊಂದರೆಯಾಗಬಹುದು. ಆದ್ದರಿಂದ ಈಗ ಲಾದರೂ ಮಾನ್ಯ ಮಂತ್ರಿಗಳು ಅವರ ಕರ್ತವ್ಯ ಪರಿಪಾಲನೆ ಮಾಡಬೇಕೆಂದು ಒತ್ತಾಯ ಪೂರ್ವಕ ವಾಗಿ ಹೇಳುತ್ತೇನೆ.

ಇನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇರತಕ್ಕ ಸ್ಪೆಷಲಿಸ್ಟ್‌ಗಳಿಂದ ಟ್ರೀಟ್‌ಮೆಂಟ್ ಪಡೆಯಬೇಕಾದರೆ, ವಿಧಾನ ಸಭೆಯ ಸದಸ್ಯನಾದ ನಾನೇ ಹೋಗಲಿ ಅಥವಾ ಬೇರೆಯವರನ್ನು ನಾನು ಕರೆದುಕೊಂಡು ಹೋಗಲಿ ಎರಡು ಮೂರು ದಿವಸವಾದರೂ ಸ್ಪೆಷಲಿಸ್ಟ್ ಟ್ರೀಟ್‌ಮೆಂಟ್ ಸಿಕ್ಕುವುದು ಕಷ್ಟ. ನಮಗೇ ಹೀಗಾದಮೇಲೆ ಸಾಮಾನ್ಯ ಪ್ರಜೆಗಳಿಗೆ ನಿಜವಾಗಿಯೂ ಅವರ ಆರೋಗ್ಯ ಭಾಗ್ಯವನ್ನು ಕಾಪಾಡಿಕೊಳ್ಳಲಿಕ್ಕೆ ಸರಿಯಾದ ವ್ಯವಸ್ಥೆ ಅಲ್ಲಿ ಇದೆಯೇ ಎಂದು ಪ್ರಶ್ನೆ ಮಾಡುತ್ತೇನೆ. ಕೇಂದ್ರದಲ್ಲಿರತಕ್ಕ ಬೆಂಗಳೂರಿನ ಆಸ್ಪತ್ರೆಯ ಸ್ಥಿತಿಯೇ ಹೀಗಾದ ಮೇಲೆ ಜಿಲ್ಲಾ ಮಟ್ಟದಲ್ಲಿರತಕ್ಕ ಆಸ್ಪತ್ರೆಗಳ ಸ್ಥಿತಿಯಂತೂ ಎಷ್ಟು ಹೇಳಿದರೂ ತೀರದು. ಅವುಗಳ ಕಡೆಗೆ ಕಣ್ಣು ತೆರೆದು ಯಾರೂ ನೋಡಿಯೇ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ. ಚಿತ್ರದುರ್ಗ ಆಸ್ಪತ್ರೆಯಲ್ಲಿ ಯಾವಾಗ ನೋಡಿದರೂ ಎರಡು ಮೂರು ಜನ ಡಾಕ್ಟರುಗಳು ಮಾತ್ರ ಇರುತ್ತಾರೆ. 45,000 ಜನ ಪ್ರಜಾಸಂಖ್ಯೆ ಇರತಕ್ಕ ಆ ಸ್ಥಳದಲ್ಲಿ ಮಹಿಳಾ ಡಾಕ್ಟರುಗಳು ಇಲ್ಲದ ಹೆಣ್ಣು ಮಕ್ಕಳು

(ಶ್ರೀ ಬಿ. ಎಲ್. ಗೌಡ)

ಹೆರಿಗೆಗೆ ಬಂದರೆ ಗಂಡಸರು ಡಾಕ್ಟರುಗಳಿಂದಲೇ ಹೆರಿಗೆ ಮಾಡಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ ಎಂದರೆ ಇನ್ನು ಬಾಕಿ ಕಡೆ ಯಾವರೀತಿ ಇದೆ ಎಂಬುದನ್ನು ತಾವು ಯೋಚನೆ ಮಾಡಿನೋಡಬೇಕು. ಆ ಆಸ್ಪತ್ರೆಯಲ್ಲಿ ಯಾವ ಔಷಧಿ ಆಗಲಿ ಇನ್‌ಜೆಕ್ಷನ್ ಆಗಲಿ ಒಂದೂಕೂಡ ಇಲ್ಲ. ಕೇಳಿದರೆ ನಮಗೆ ಇನ್ನೂ ಸಪ್ಲೈ ಆಗಿಲ್ಲ ಎಂದು ಹೇಳುತ್ತಾರೆ. ಅಲ್ಲಿನ ಆಸ್ಪತ್ರೆಯ ವಿಸಿಟರ್ಸ್ ಬೋರ್ಡ್‌ನಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಕಮಿಟಿ ಮುಂದೆ ಈ ವಿಷಯ ಹತ್ತಾರು ಸಲ ಬಂದರೂಕೂಡ ಸಂಬಂಧಪಟ್ಟ ಅಧಿಕಾರಿಗಳು ನಮಗೆ ಇನ್ನೂ ಸಪ್ಲೈ ಆಗಿಲ್ಲ ಎಂದು ಹೇಳಿರುತ್ತಾರೆ. ಅದೂ ಅಲ್ಲದೇ ಆ ಆಸ್ಪತ್ರೆಯಲ್ಲಿ ಮುಫತ್ತಾಗಿ ಕೊಡತಕ್ಕ ಔಷಧಿ, ಇಂಜೆಕ್ಷನ್ ಒಂದೂಕೂಡ ಇಲ್ಲ. ಮತ್ತು ಅಲ್ಲಿರತಕ್ಕ ಔಷಧೋಪಕರಣಗಳನ್ನು ಸರಿಯಾಗಿ ಉಪಯೋಗ ಮಾಡುತ್ತಾ ಇಲ್ಲ. ಹೊಸದಾಗಿ ಒಂದು ಟಿ ಬಿ ಸ್ಯಾನಿಟೋರಿಯಂ ತೆಗೆದಿದ್ದಾರೆ ಅಲ್ಲಿ ಪೇಷೆಂಟ್‌ಗಳಿಗೆ ಗಾಳಿ ಕೊಡತಕ್ಕ ಇನ್‌ಸ್ಟ್ರುಮೆಂಟ್ ಇದೆ ಅದು ಉಪಯೋಗದಲ್ಲಿ ಇಲ್ಲ, ಅದನ್ನು ಸರಿಪಡಿಸುವುದಕ್ಕೆ ಯಾರೂಕೂಡ ಬಂದು ನೋಡುತ್ತಾ ಇಲ್ಲ. ಚಿತ್ರದುರ್ಗದಿಂದ ದಾವಣಗೆರೆಗೆ ಪೇಷಂಟ್‌ಗಳನ್ನು ಕಳುಹಿಸುತ್ತಾ ಇದ್ದಾರೆ. ಇದನ್ನು ಆದಷ್ಟು ಜಾಗ್ರತೆ ಸರಿಪಡಿಸುವ ವ್ಯವಸ್ಥೆ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಈಗಾಗಲೇ ಅನೇಕಸಾರಿ ಈ ಸಭೆಯಲ್ಲಿ ಹೇಳಿದ್ದೇವೆ. ಇ.ಎನ್.ಟಿ. ವೈದ್ಯಕೀಯ ಸೌಕರ್ಯ ಜಿಲ್ಲಾ ಮಟ್ಟದಲ್ಲಿ ಒದಗಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ಮತ್ತು ಸರಕಾರದವರು ಪದೇಪದೇ ಹೇಳಿದ್ದಾರೆ. ಆದರೆ ಇದುವರೆಗೂ ಚಿತ್ರದುರ್ಗದಲ್ಲಿ ಮಾತ್ರವೇ ಅಲ್ಲದೇ ಯಾವ ಜಿಲ್ಲಾ ಮಟ್ಟದಲ್ಲೂ ಆ ಸೌಕರ್ಯವನ್ನು ಮಾಡಿಕೊಟ್ಟಿಲ್ಲ. ಯಾರಿಗಾದರೂ ಕಣ್ಣು, ಮೂಗು, ಕಿವಿಗೆ ಸಂಬಂಧಪಟ್ಟ ಖಾಯಿಲೆ ಬಂದರೆ ಅವರು ಬೆಂಗಳೂರು ಮೈಸೂರು ಅಥವಾ ಹುಬ್ಬಳ್ಳಿ ಆಸ್ಪತ್ರೆಗೆ ಹೋಗಬೇಕೆಂದರೆ ಜನಸಾಮಾನ್ಯರಿಗೆ ಹೋಗಲು ಸಾಧ್ಯವೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಬಡ ಬೋರೇಗೌಡನಿಗಂತೂ ಸಾಧ್ಯವೇ ಇಲ್ಲ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಈ ಸ್ಪೆಷಲಿಸ್ಟ್ಸ ಟ್ರೀಟ್‌ಮೆಂಟ್ ಸಿಕ್ಕಲು ಸೌಕರ್ಯವನ್ನು ಮಾಡಿಕೊಡಬೇಕೆಂದು ನಾನು ಸರಕಾರದವರನ್ನು ಒತ್ತಾಯ ಪಡಿಸುತ್ತೇನೆ.

ಅನೇಕ ಸ್ನೇಹಿತರು ಹೇಳಿದ್ದಾರೆ ದೇವರು ಇಲ್ಲದ ಗುಡಿ ವಿಚಾರ. ಎಲ್ಲಿಗಾದರೂ ಹೋಗಿ ನೋಡಿ 7 ಆಸ್ಪತ್ರೆಗಳು ಇದ್ದರೆ 3 ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇರುವುದಿಲ್ಲ. ಕಾಂಪೌಂಡರುಗಳೇ ಔಷಧಿ ಕೊಡುತ್ತಾರೆ. ಇದರಿಂದ ಜನಗಳ ಆರೋಗ್ಯ ಕೆಡುತ್ತಾ ಇದೆ. ಆದ್ದರಿಂದ ಒಂದುವೇಳೆ ಡಾಕ್ಟರುಗಳನ್ನು ಕಳುಹಿಸುವುದಕ್ಕೆ ಸಾಧ್ಯವಾಗದೇ ಇದ್ದರೆ ಅವುಗಳನ್ನು ಮುಚ್ಚಾದರೂ ಮುಚ್ಚಿಬಿಡಿ, ಅಲ್ಲಿ ಕೆಲಸ ಮಾಡುತ್ತಿರುವವರಿಗೆ ಕೊಡುವ ಸಂಬಳವಾದರೂ ಉಳಿಯಲಿ ಎಂದು ಸರಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಈ ಡಾಕ್ಟರುಗಳ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಕಾಲೇಜುಗಳನ್ನು ಜಾಸ್ತಿ ಮಾಡಿದ್ದೀರಿ, ಸೀಟುಗಳ ಸಂಖ್ಯೆಯನ್ನು ಜಾಸ್ತಿ ಮಾಡಿದ್ದೀರಿ. ಆದರೂಕೂಡ ಡಾಕ್ಟರುಗಳು ಹೆಚ್ಚಿನ ಸಂಖ್ಯೆಯಲ್ಲಿ ಬರದೇ ಇರುವುದಕ್ಕೆ ಕಾರಣ ಅವರಿಗೆ ನೀವು ಕೊಡುತ್ತಾ ಇರತಕ್ಕ ಸಂಬಳ ಕಡಿಮೆ ಮತ್ತು ಎರಡನೆಯದು ಈಗ ನಾಲ್ಕಾರು ವರ್ಷಗಳಿಂದ ಅಡ್ವರ್‌ಟೈಸ್ ಮಾಡಿಲ್ಲ. ಹಂಗಾಮಿಯಾಗಿ ತೆಗೆದುಕೊಂಡು, ಬರತಕ್ಕ ಅಭ್ಯರ್ಥಿಗಳು ಉನ್ನತ ಮಟ್ಟಕ್ಕೆ ಹೋಗತಕ್ಕ ಅವಕಾಶಗಳನ್ನು ತಪ್ಪಿಸತ್ತಾ ಇದ್ದೀರಿ, ಈ ರೀತಿ ಆಗುತ್ತಾ ಇದೆ ಎಂದು ನೂರಾರು ಜನ ವಿದ್ಯಾರ್ಥಿಗಳು ನನಗೆ ಹೇಳಿದ್ದಾರೆ. ಡಾಕ್ಟರುಗಳ ಮೇಲ್ವಿಚಾರಣೆ ಇಟ್ಟುಕೊಂಡು ಡಾಕ್ಟರಾಗಿಯೂ ಇರತಕ್ಕ ಮಂತ್ರಿಗಳು ಏಕೆ ಇಂತಹಪರಿಸ್ಥಿತಿಯನ್ನು ಮುಂದು ವರಿಯುವುದಕ್ಕೆ ಬಿಟ್ಟು ಕೊಟ್ಟಿದ್ದಾರೆಯೋ ಗೊತ್ತಿಲ್ಲ. ನಿಜವಾಗಿಯೂ ನಾನು ತಿಳಿದುಕೊಂಡಿದ್ದೇನೆ ಸುಮಾರು 5—6 ವರ್ಷಗಳಿಂದ ಕೆಲಸ ಮಾಡುತ್ತಾ ಇರತಕ್ಕ ಡಾಕ್ಟರುಗಳನ್ನು ಈ ಇಲಾಖೆಯಲ್ಲಿ ಖಾಯಂ ಮಾಡಿಲ್ಲ. ಎಷ್ಟೋ ಜನ ಇಲ್ಲಿ ಕೆಲಸಕ್ಕೆ ಸೇರಿಕೊಂಡು ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಂಡಿದ್ದಾರೆ, ಹಾಗಿರುವಾಗ ಇನ್ನಷ್ಟು ಜನ ತಾನೆ ಆ ರೀತಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳಲು ತಯಾರಾಗಿದ್ದಾರೆ ಎಂದು ತಮ್ಮಲ್ಲಿ ಸವಾಲು ಹಾಕುತ್ತೇನೆ.

ಇದೇ ರೀತಿ ಮೊಬೈಲ್ ಯೂನಿಟ್‌ಗಳನ್ನು ಇಟ್ಟುಕೊಂಡಿದ್ದೀರಿ. ಹಳ್ಳಿ ಹಳ್ಳಿಗೆ ಕಳುಹಿಸುತ್ತಾ ಇದ್ದೀರಿ. ಆದರೆ ಈಗ ಅವು ಕೆಲಸ ಮಾಡುತ್ತಾ ಇಲ್ಲ. ಬಡ್ಜೆಟ್‌ನಲ್ಲಿ ಅವಕ್ಕೆ ಅವಕಾಶ ಮಾಡಿಕೊಂಡಿದ್ದೀರಿ ಆದರೆ ಅವು ಯಾವ ರೀತಿ ಕೆಲಸ ಮಾಡುತ್ತಾ ಇವೆ ಎಂಬುದು ಅರ್ಥವಾಗುತ್ತಾ ಇಲ್ಲ. ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡು ಕಾಯಿದೆ ಪ್ರಕಾರ ಹಳ್ಳಿಯ ಆಸ್ಪತ್ರೆಗಳನ್ನು ತಾಲ್ಲೂಕು ಬೋರ್ಡಿಗೆ ವರ್ಗಾಯಿಸಬೇಕೆಂದು ಮಾಡಿದ್ದೀರಿ. ಆ ಬಗ್ಗೆ ಇದುವರೆಗೂ ಏನೂ ಕಾರ್ಯಕ್ರಮ

ವನ್ನು ತೆಗೆದುಕೊಂಡಿಲ್ಲ? ಇನ್ನೂ ಕೂಡ ಸರಕಾರದವರ ಆಡಳಿತದಲ್ಲೇ ಇದೆ. ಅವುಗಳನ್ನು ಅಲ್ಲಿಗೆ ವರ್ಗಾಯಿಸಲು ಏಕೆ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಕೇಳುತ್ತೇನೆ.

ಇನ್ನೊಂದು ಸಲಹೆ ಮಾಡುತ್ತೇನೆ ನಿಜವಾಗಿಯೂ ತಮಗೆ ಡಾಕ್ಟರುಗಳನ್ನು ರಿಕ್ರೂಟ್ ಮಾಡಿ ಕೊಳ್ಳುವುದಕ್ಕೆ ಕಷ್ಟವಾದರೆ ಆಯುರ್ವೇದ ಡಾಕ್ಟರುಗಳಿಗೆ ಉತ್ತೇಜನ ಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಅದರಲ್ಲಿ ಜನಗಳಿಗೆ ನಂಬಿಕೆ ಇದೆ. ಅಂತಹ ಒಂದು ಖಾಯಂ ಆದ ವ್ಯವಸ್ಥೆ ಯನ್ನು ಮಾಡಿ ಹಳ್ಳಿಗಳಿಗೆ ಆಯುರ್ವೇದದ ಡಾಕ್ಟರುಗಳನ್ನು ಕಳುಹಿಸಿಕೊಡಿ, ಆ ರೀತಿ ಮಾಡಿ ತಾಲ್ಲೂಕು ಬೋರ್ಡು ಆಸ್ಪತ್ರೆಗಳಗೆ ವಾಯಿಟಿ ಆಫ್ ಕಾಸ್ಟ್ ಕೊಡಿ ಎಂದು ಹೇಳುತ್ತೇನೆ.

ಮೆಡಿಕಲ್ ಕಾಲೇಜುಗಳ ಸಂಖ್ಯೆ ಜಾಸ್ತಿ ಆಗಿದೆ, ಸೀಟುಗಳ ಸಂಖ್ಯೆ ಜಾಸ್ತಿಯಾಗಿದೆ. ಆದರೆ ಅದರಲ್ಲಿ ಸೇರಿಕೊಳ್ಳಬೇಕಾದರೆ ಹುಡುಗರು ಎಷ್ಟು ಕಷ್ಟಪಡಬೇಕು ಅಲ್ಲಿ ಯಾವ ಯಾವ ತರಹ ನಡೆಯುತ್ತದೆ ಎಂಬುದಕ್ಕೆ ಒಂದು ನಿದರ್ಶನ ಕೊಡುತ್ತೇನೆ? ಸಾಧಾರಣವಾಗಿ ಖಾಸಗಿ ಕಾಲೇಜಿ ನಲ್ಲಿ ಒಂದೊಂದು ಸೀಟಿಗೆ 3 ಸಾವಿರ, 4 ಸಾವಿರ ರೂಪಾಯಿಗಳನ್ನು ಕೊಟ್ಟು ರಿಸರ್ವ್ ಮಾಡಿಸಿ ಕೊಂಡಿರುತ್ತಾರೆ. ಅದೇರೀತಿ ಸರಕಾರಿ ಕಾಲೇಜುಗಳಲ್ಲೂಕೂಡ ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ಕೊಟ್ಟು ಸೀಟು ಪಡೆದಿರುವ ಮಾಡಿಸಿಕೊಂಡಿರುವ ನಿದರ್ಶನಗಳು ಬೇಕಾದಷ್ಟು ಇವೆ. ಅದನ್ನು ನಾನು ತಮಗೆ ಬರೆದುಕೂಡ ಇದ್ದೇನೆ. ಅದನ್ನು ತನಿಖೆ ಮಾಡಬೇಕೆಂದು ಹಿಂದೆ ಈ ಸಭೆಯಲ್ಲೂ ಹೇಳಿದ್ದೇನೆ ಈಗಲೂ ಹೇಳುತ್ತಾ ಇದ್ದೇನೆ. ಅಂತಹ ಒಂದು ವ್ಯಾಪಾರ ನಡೆಯುತ್ತಾ ಇದೆ ಈ ಕಾಲೇಜುಗಳ ಅಡ್ಮಿಷನ್ ವಿಷಯದಲ್ಲಿ ಇದು ನಾಗರೀಕರೆಲ್ಲರೂ ತಲೆ ತಗ್ಗಿಸ ತಕ್ಕ ವಿಷಯ ಇದನ್ನು ಕೂಡಲೇ ಪರಿಶೀಲನೆಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಪಡಿಸುತ್ತೇನೆ.

ಕಾಲೇಜುಗಳಲ್ಲಿ ಇರತಕ್ಕ ಪ್ರೊಫೆಸರುಗಳು ಮತ್ತು ಅಸಿಸ್ಟೆಂಟ್ ಪ್ರೊಫೆಸರುಗಳನ್ನು ಸರಿಯಾಗಿ ನೇಮಕ ಮಾಡಬೇಕು. ಈಗ ಇರತಕ್ಕವರು ಎಲ್ಲಾ ಕಾಲೇಜುಗಳಲ್ಲೂ ಹಂಗಾಮಿಯಾಗಿ ಇದ್ದಾರೆ, ಮೇಲೆ ಇರುವವರನ್ನು ಕೆಳಗೆ ಕೆಳಗೆ ಇರುವವರನ್ನು ಮೇಲೆ ಹಾಕುತ್ತಾ ಇದ್ದಾರೆ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಡಿ. ಓ. ಎಂ. ಎಸ್. ಮಾಡಿದವರನ್ನು ಅಸಿಸ್ಟೆಂಟ್ ಪ್ರೊಫೆಸರನ್ನಾಗಿಮಾಡಿ ಎಂ. ಎಸ್. ಮಾಡಿ ಕೊಂಡಿರುವವರನ್ನು ಲೆಕ್ಚರರ್ಆಗಿ, ಸೆಕೆಂಡ್‌ಗ್ರೇಡ್ ಸರ್ಜನ್ನರನ್ನಾಗಿ ನೇಮಿಸುತ್ತಾರೆ. ಹೆಚ್ಚು ವಿದ್ಯಾರ್ಹತೆಯಿರುವವರನ್ನು ಕೆಳಕ್ಕೆ ಹಾಕಿ ಕೆಳಗಿರುವವರನ್ನು, ಕಡಮೆ ವಿದ್ಯಾರ್ಹತೆಯಿರುವವರನ್ನು ಮೇಲಕ್ಕೆ ಹಾಕುತ್ತಿದ್ದಾರೆ. ಇಂಥ ನಿದರ್ಶನಗಳಿವೆ. ಅಲ್ಲದೆ ಅನೇಕರನ್ನು ಖಾಯಂ ಮಾಡುವುದಿಲ್ಲ. ಬೇಕಾದವರು ಬರುವವರೆಗೆ ಖಾಲಿಯಿರುವ ಜಾಗಗಳನ್ನು ಭರ್ತಿಮಾಡದಿರುವ ಉದಾಹರಣೆಗಳಿವೆ. ಹಾಗೆ ಮಾಡದೆ ಹಂಗಾಮಿ ನೌಕರರನ್ನು ಕೂಡಲೆ ಖಾಯಂ ಮಾಡಬೇಕು. ಪಿ. ಎಸ್. ಸಿ. ಮೂಲಕ ರೆಕ್ರೂಟ್‌ಮಾಡಿ ಒಂದೇಸಲ ಖಾಯಮಾಗಿ ನೇಮಿಸಿಕೊಳ್ಳುವುದು ಒಳ್ಳೆಯದು. ಇಲ್ಲದಿದ್ದರೆ ಬಹಳ ಅವ್ಯವಸ್ತೆಯಾಗುತ್ತದೆ ಎಂದು ಒತ್ತಾಯ ಪೂರ್ವಕವಾಗಿ ಹೇಳಿ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

Sri B. P. KADAM (Karwar).—I want to dilate only on few points and not on the general points touched by other members. However, I support them. Sir, I just wish to dilate on T. B. menace in the coastal area of the State especially in the North Kanara District. T. B. is almost presenting a very menacing problem. I am on the Civil Hospital Advisory Committee and the Civil Surgeon there told the Committee some time back that out of every six people suspected of some ailments or other, he has traced T. B. in four of them. He said consciously or unconscioully many are having T. B. and unless steps are taken to check it, and prevent it, it is possible that the whole coastal area of Karwar Taluk may be wiped out Sir, the existing arrangements for treating it in the hospital is quite insufficient. There is accommodation to treat 15 or 20 people and the patients are already rushing in. There is some times a doctor; but for many months of the year, there is no doctor and the nurses who are there are not sufficient and the medicinal supplies by the Government fall very short of the requirements. Therefore, it is necessary

(SRI B. P. KADAM)

to look into this matter and make greater provision for well-trained nurses and above all this, they should see that regular amenities by way of medicine be provided. Further, treatment alone will not be sufficient. Care should be taken to have preventive measures. What is necessary is to have an apparatus for mass screening so that people who have T. B. may be traced throughout the coastal area and preventive measurs taken or what is called domiciliary treatment be resorted to right now. Otherwise, it is not posssible to combat the menace. Sir, the disease is there on account of prevailing low standard of living. People are languishing under so many disabilities and they are being compelled to go without employment. Having no housing facilities in rural areas and no good roads, people will have to inhale dust. All these factors aggravate the menace and unless this menace is checked, it will be very unfortunate for the area. Sir, there are no doctors in urban as well as in rural areas of the District. In a Taluk where there is capacity for six doctors, there are not even one or two doctors. In spite of innumerable representations sent, the authorities have not been able to do anything. Same is the case in the District Hospital at Karwar itself. The capacity is five or six ; some times there will be only two doctors and the rush of of the indoor and outdoor patients is very great. It is necessary to see that doctors are sent in good time. Sir, medicinal provisions to that hospital is also inadequate. Sir, there has been inordinate delay in constituting the Board for practitioners of Unani and Ayurveda Medicines. In the absence of allopathic doctors, we would have been glad even if compounders are sent to rural hospitals. When that is the case, people who are well-versed in Ayurveda are prevented from practising it by not constituting the Board. The Board has not come into existence though the Act was passed two years back. I tried myself to see that it is constituted for the past 18 months. I am told that it will be constituted within a month. But I do not know how many generations it will take. Sir, the cholera menace is creating a lot of uneasiness. People who read newspapers see alarming reports throughout the State. I cannot understand the reason why this malady should not be rooted out. It must be taken very seriously by the Government. Equally leprosy is spreading considerably. Steps must be taken and taken with firm determination.

Sri K. NAGAPPA ALVA.—Mr. Speaker, Sir, I offer my grateful thanks to all the Members of this House who have participated and for having given very good suggestions, constructive suggestions and also for some of the criticisms that were made with ignorance.

6-00 P.M.

But, at the same time, even those criticisms which have been made without knowing actually the seriousness of the problem or the difficulties of the administration or the Government is facing I welcome

even those suggestions. About one thing I must be particularly happy is that everyone is conscious that there are not enough doctors, there is not enough of medicine and the number of persons who have been attending these hospitals has been increasing tremendously. The out-patient figure during the last few years has increased considerably. It has increased to three times, five times and even ten times. To give an example, in Hubli, four years ago, the number of out-patients was 120 and today it has gone up to 1,100. The number of beds have been increasing in hospitals. There has been expansion programmes in all these directions. Hence, while we increase the bed strength, while the expansion programme is going on, we must also appoint doctors. We have been appointing doctors during the last few years. But it was really not possible to appoint all the doctors required, because of so many factors. I admit, to some extent, only to a small extent, the pay of the doctors, as one reason. But more than that, what has happened is, the demand is much. The number of doctors who have gone on post-graduate study is about two hundred.

Today, the impact of civilization on the human mind is so great, that there are so many demands by the people. There is so much of awakening among the people, They have become treatment consciouh and they have become hospital conscious, and more than that, healts conscious......

Sri S. GOPALA GOWDA.—And also death conscious.

Sri K. NAGAPPA ALVA.—That is true, only because of death, health consciousness is increasing. Today in the advanced countries, the problem is, after solving these problems of communicable diseases and contagious diseases, they are finding it difficult to face the problems of water pollution, air pollution and cardiac vascular diseases, diseases like rheumatism, cancer and diseases which are mainly due to psychosmatic changes which are so rapidly changing in the human body because of the impact of civilization. Remembering all these things we have to satisfy the basic needs first, and then the emotional needs also. I will now start replying to the criticisms and the suggestions made by the members as possible and make my concluding remarks.

Sri Siddiah Kashimat started with very good suggestions. He said so much about the amalgamation of the Medical and Public Health Departments. I am really sorry that this good could not be done. I do not want to go into the details. But the Government has taken a decision and the Government is determined to do it. Though more than one year has elapsed, I can assure this House, sooner than you can expect, this amalgamation will be done.

He also said about the harassment the students have in not having enough patients. I cannot agree with this. But, at the same time, I will see that the students are provided with enough of clinical material. That is being done. We will also see that harassment is not made to the patients.

Then, he mentioned about uncleanliness about bed sheets being dirty and so many other things. I will certainly look into these things. But

(SRI K. NAGAPPA ALVA)

what has happened all over is, because of the rush of patients, we do not have the required number of doctors and even nurses and para-medical personnel. We have not been having enough number. But I must tell this House that we have the minimum number and we are giving very good satisfaction to a very large section of the people. There are criticisms. I know some have been inconvenienced and there is no doubt about it. But, at the same time, the number that they have to attend to is really much and they have to face so many difficulties. Regarding doctors and nurses who are indifferent, if such cases are made known to me, action will certainly be taken to see that things improve.

Then about the nurses, from the medical side to the Public Health side, he said that in 1956, they were lent hands and that promotions, etc., were denied to them. About this, I will certainly look into, examine their cases thoroughly and meet justice to them.

About primary health centres, this is a general complaint. It is better I tell this House that primary health centres have been established according to the Plan and progress is there. There is no primary health centre here without the para-medical personnel at all. We have given in almost all primary health centres this and one doctor. But today for want of doctors, we are having only one doctor in every primary health centre. He is expected to visit three sub-centres and look after the health of the residents. The pattern will go on changing, and the idea is to have one assistant to the primary health centre, to the doctor, and in three sub-centres also, we will be having three doctors ultimately. Again, the Family Planning programme is being reorganied and because of that programme, we want to see that it reaches the people and all communities. Because of this also, we are going to have three more doctors in the sub-centres. Regarding co-operative hospitals and grants, there is already that arrangement that grants will certainly be given to the deserving institutions.

The Hon'ble Member Sri Appanna has said certain things and there is some truth. But he knows our difficulties. I will be first man to give whatever help that is possible in the matter of giving doctors. I am sure very soon, within the next two months, we will be in a position to improve. The Coffee Board has allotted grants towards labour welfare fund. Last year, I remember, we had received grant of about Rs. 50,000, that too at the eleventh hour. I am sorry, it could not be utilised. But, this time, a donation of about twenty thousand rupees has been offered. I have already informed the Department to work it up and receive the donation, and I will see that this is accepted. There are certain difficulties about the buildings and other things, but amounts like this will have to be accepted. We will see that it is accepted by the end of the financial year itself. He has said something about family planning. This programme will be reorganised. The Central assistance is more for this programme. The State Government as well as the Central

Government have taken serious note of this programme. We have to admit that we have not succeeded to the extent that we planned or we thought of because, I must say, we have failed to some extent to convince the people. We have to make the entire community to accept this. It is true that in the beginning years, only the educated of the wealthier section took advantage of this programme by taking to sterlization, operations and other advises also. But, now, for the information of the Honse, I must say that wherever we have made good arrangements to convince the people, it has come to our notice and we are convinced that the poorer class have come forward and we are really finding it difficult to make arrangements for their operations and meet their demands. In the revised programme, this will spread to every Panchayat, every viliage and when this message reaches, I am sure, they will accept it. The main point that has to be made known to the people is that it is a happy home and also it is not an ordinary thing just to show as Dr. Sanjeevanath Aikala sometimes knowingly, synically or in a lighter way talks about it. I am sorry, he has not thought of the seriousnesss of the problem. We have noticed that every thinking person in India, every leader and every common man, has realised that if this population growth is not brought under control, it will not be possible to give enough food and other necessities to all the people. It is a reply to Sri Krishna Shetty for the cut motion that he has sent. This aspect will be borne in mind, but this will be solved if we could make the people know about the message. The poorer sections, whom we have approached, have taken advantage of this programme, especially the poor women who are suffering all these things.

I wanted even to say what ethics is or what ethical value is as my friend Dr. Sanjeevanath Aikala has not understood it. Ethics is that everyone should feel happy and to keep the home happy. It is necessary not to feel shy about this. We must tell them that it is for the happiness of the family.

Sri SANJEEVANATH AIKALA.—These posters are indirectly an inducement to unmarried people to try experiments.

Sri K. NAGAPPA ALVA.—We must tell the people the truth about these things. To all who need the advise, we must see that this message reaches. It is not only to limit the number of children, but it is also to keep the children healthy and also to have a happy married life. All these points are contained in this.

Then, Dr. Sanjeevanath has made certain charges about teaching institutions and about the use of Indian medicine. It is all right to say as one who has practiced the medicine. He has passed that examination, but unfortunately he has not practiced it. It is rather strange for him to feel more for this system. Every attempt on the part of the Government has been made with regard to this programme. It was not lip sympathy, it was not carelessness, but attempts have been made. He said that there was no unity and that there was no proper approach by certain persons concerned. I admit that there have been certain

(SRI K. NAGAPPA ALVA)

difficulties and I assure the House that these difficulties will be overcome early. There have been certain obstacles and I can assure him only this much ; that the Board will be formed, the rules have been framed and will be gazetted this week itself, and after the objections are called for the Board will be formed in about a month's time.

About research he said that nothing has been done and the staff have simply drawn the salary. It is not true. I admit that we have not made enough progress. This Department will be strengthened. Without research it is impossible to develop this Indian system of medicine.

Smt. Rathnamma Madhava Rao made certain very vague and light marks without any particular basis. I wish she had brought to my notice some of these things. She made wild charges, but very vague, to say that bed-sheets in the Hospital are dirty, medicine go to black-market and about the treatment of patients going there. We will certainly set right matters. She also said that one officer has been transferred and he is not given the proper place. I must make it clear that it is not possible for the Government to cater to the vanity of the officer whoever it be. We will certainly look into all the rules and give them the proper place. It is not correct to say that Doctors are being posted as they like. Because of the Medical Colleges that have come up and because we do not have cadre and recruitment rules, I admit that we have not succeeded so far. There were local candidates and there have been certain difficulties.

But these difficulties, I am sure will be overcome. The Public Health Department have recruited people now both for Medical and Public Health and cadre and recruitment rules are ready and within a few days we will send this to the Public Service Commission also.

There were one or two suggestions about the admission of candidates from the rural parts. These are things which should come under the rules which are to be framed. Anyway, we can see to what extent we can encourage these people. But one thing I assure the Hon'ble Members that we spend on an average at the rate of Rs. 10,000 on every student and we have got a right to ask them to serve the State. They are being attracted. During this year, about 70 doctors have gone to America, because they were attracted by money and other comforts, leaving jobs here. We have discussed this matter and the pay of the Assistant Surgeons will be brought on par with the neighbouring States and that kind of encouragement will be given. That way, we will see that restriction will be put while admitting students also and we have taken agreement. I only want that kind of co-operation from the students and the public.

MR. DEPUTY SPEAKER.—What time would the Hon'ble Ministe equire to conclude ?

Sri K. NAGAPPA ALVA.—I require another 40 minnutes at least, Sir.

Sri B. R. SUNTHANKAR.—Sir, it is already 6-30 P.M. and we are sitting here since 8-30 in the morning. Two days are allotted for tomorrow's demands. We can as well take a bit of time tomorrow for this demand and finish tomorrow Sir.

Sri B. D. JATTI.—Sir, it should not be postponed to tomorrow. We can request the Hon'ble Minister to be brief and he can finish within 15 minutes Sir.

Sri S. RAJAGOPAL.—Sir, you are not giving opportunities for us to speak also and you are not also allowing the Minister, to give a detailed reply. What is the use of our sitting here ?

Sri B. D. JATTI.—The Hon'ble Minister wants to finish within 30 mitutes and so we can sit till 7 o'clock and finish it

Mr. DEPUTY SPEAKER.—Lights and Mike have failed. I think it is better to rise now and finish the debate within half-an-hour tomorrow.

Sri B. D. JATTI.—Time will have to be extended for this Demand and question hour will have to be dropped, tomorrow.

HON'BLE MEMBERS.—There must be the Question-hour.

Sri B. D. JATTI.—Then we will rise now. Time will have to be extended by one hour. Kindly extend the time by one hour. Tomorrow we can give half-an-hour for reply by the Minister and some time for clarification.

Mr. DEPUTY SPEAKER.—Now the time for this Demand will have to be extended by one hour and it will be postponed to tomorrow. Is it the pleasure of the House that time should be extended by one hour ?

HON'BLE MEMBERS.—Yes.

Mr. DEPUTY SPEAKER.—The time for this Demand is extended by one hour and it will be taken up tomorrow.

The House will now rise and meet tomorrow at 8-30 A.M.

The House adjourned at Thirty Minutes past Six of the Clock to meet again at Thirty Minutes past Eight of the Clock on Friday, the 13th March 1964.

WD 2584—GPB—900—9 6-1964